# ಸಂಯಮ ಪಥ ೪

ತಂದೆಯ ಮರಣಾನಂತರ ನಾಲ್ಕು ವರ್ಷಗಳವರೆಗೆ ಮನೆಯಲ್ಲೇ ಇದ್ದು ನಿರ್ಗ್ರಂಥ ಮುನಿಯಾಗುವ ಯೋಗ್ಯ ಭಾವವನ್ನು ಪರಿಪುಷ್ಟಗೊಳಿಸಿಕೊಳ್ಳುತ್ತಿದ್ದರು. ಒಮ್ಮೆ ಕರ್ನಾಟಕ ಪ್ರಾಂತ್ಯದ ದಿಗಂಬರ ಮುನಿ ದೇವೇಂದ್ರ ಕೀರ್ತಿ- ದೇವಪ್ಪ ಸ್ವಾಮಿ ಉತ್ತೂರು ಗ್ರಾಮಕ್ಕೆ ಆಗಮಿಸಿದ್ದರು. ಆಗ ಆಚಾರ್ಯ ಶ್ರೀಯವರಿಗೆ ಸುಮಾರು ೪೧ ವರ್ಷ ವಯಸ್ಸು. ಆಚಾರ್ಯ ಶ್ರೀಯವರು ತಡಮಾಡದೆ ಅವರ ಬಳಿಗೆ ಹೋಗಿ ವಿನಯದಿಂದ ಪ್ರಾರ್ಥಿಸಿದರು.

''ಸ್ವಾಮಿ! ನನಗೆ ದೀಕ್ಷೆ ಕೊಟ್ಟು ಕೃತಾರ್ಥನನ್ನಾಗಿ ಮಾಡಿ'' ಆಗ ದೇವಪ್ಪ ಸ್ವಾಮಿಗಳು ವಾತ್ಸಲ್ಯದಿಂದ ನುಡಿದರು.

''ವತ್ಸಾ! ಈ ಪದ ಅತ್ಯಂತ ಕಠಿಣ. ಇದನ್ನು ಧಾರಣೆ ಮಾಡಿದ ಮೇಲೆ ಮಹಾಸಂಕಟ ಉಂಟಾಗುತ್ತದೆ. ಆದರಿಂದ ಮನಸ್ಸು ವಿಚಲಿತವಾಗುತ್ತದೆ''

ಪೂಜ್ಯ ಆಚಾರ್ಯ ಶ್ರೀಯವರು ಮಾರ್ನುಡಿದರು.

''ಭಗವಾನ್! ತಮ್ಮ ಆಶೀರ್ವಾದದಿಂದ ಮತ್ತು ಜಿನಧರ್ಮದ ಪ್ರಸಾದದಿಂದ ಈ ಪದವನ್ನು ನಿರ್ದೋಷವಾಗಿ ಪಾಲಿಸುತ್ತೇನೆ. ಪ್ರಾಣವನ್ನಾದರೂ ಬಿಟ್ಟೇನು. ಆದರೆ ವ್ರತಗಳಲ್ಲಿ ದೋಷಗಳು ಬರಲು ಬಿಡೆನು. ನನಗೆ ಮಹಾವ್ರತ ಕೊಟ್ಟು ಕೃತಾರ್ಥನನ್ನಾಗಿ ಮಾಡಿ.

## ಉತ್ತೂರು ಗ್ರಾಮದಲ್ಲಿ ಕ್ಷುಲ್ಲಕ ದೀಕ್ಷೆ

ಇದು ಸ್ಮಶಾನ ವೈರಾಗ್ಯವಲ್ಲ. ಆದರೆ ಸಂಸಾರದಲ್ಲಿ ವಿರಕ್ತ ವಿಶುದ್ಧ ಆತ್ಮನ ಮಾರ್ಮಿಕ ನಿವೇದನ ಎನ್ನುವ ಸತ್ಯ ದೇವಪ್ಪ ಸ್ವಾಮಿಗಳಿಗೆ ಯಾವಾಗ ತಿಳಿದುಹೋಯಿತೋ ಆಗ ಅವರು ದೀಕ್ಷೆ ಕೊಡಲು ನಿಶ್ಚಯಿಸಿಬಿಟ್ಟರು. ಮರುಕ್ಷಣದಲ್ಲೇ ಸ್ವಲ್ಪ ದೂರಾಲೋಚನೆಯಿಂದ ವಿಚಾರಿಸತೊಡಗಿದರು. ಈ ವಿರಕ್ತ ವ್ಯಕ್ತಿ ಪರಮಸುಖಿಯೂ ಶ್ರೀಮಂತ ಪರಿವಾರದವನೂ ಆಗಿರುವುದರಿಂದ ಮಹಾವ್ರತದ ಅಪರಿಮಿತ ಕಷ್ಟಗಳನ್ನು ಎದುರಿಸಬಲ್ಲನೇ? ಆದ್ದರಿಂದ ಸ್ವಲ್ಪ ಕಾಲ ಕ್ಷುಲ್ಲಕ ದೀಕ್ಷೆ ಕೊಟ್ಟು ಸಾಧನೆಗೆ ಹಚ್ಚುವುದು ಒಳಿತು. ಇದಾದ ನಂತರ ಮಾನಸಿಕ ಪಕ್ವತೆ ಬೆಳೆದು ಬಂದರೆ ಮಹಾವ್ರತವನ್ನು ಕೊಡಬಹುದೆಂದು ತೀರ್ಮಾನಿಸಿ ಆಚಾರ್ಯ ಶ್ರೀಯವರನ್ನುದ್ದೇಶಿಸಿ ಮತ್ತೆ ಹೇಳಿದರು.



''ಕ್ರಮ ಪೂರ್ವಕ ಆರೋಹಣ ಮಾಡುವುದರಿಂದ . ಪತನದ ಭಯವಿರುವುದಿಲ್ಲ''. ಈ ಪ್ರಕಾರದ ತಮ್ಮ ಗುರುದೇವನ ಆಜ್ಞೆಯನ್ನು ಮನ್ನಿಸಿ ಸಾತಗೌಡ ಪಾಟೀಲರು ಸನ್ ೧೯೧೫ ದೇವಪ್ಪಸ್ವಾಮಿಗಳಿಂದ ಕ್ಷುಲ್ಲಕ ದೀಕ್ಷೆ ಕೈಗೊಂಡು ಸಾಧು ವೃತ್ತಿಯನ್ನಾರಂಭಿಸಿದರು.

## ಆಧ್ಯಾತ್ಮ ಸಿಂಹನಂತೆ ವಿಹಾರಾರಂಭ

ಸಾತಗೌಡ ಪಾಟೀಲರನ್ನು ದೀಕ್ಷಾ ನಂತರ ಕ್ಷು-ಶಾಂತಿಸಾಗರರೆಂದು ಕರೆಯಲಾಯಿತು. ದೀಕ್ಷಾ ನಂತರ ಸಾತಗೌಡ ಪಾಟೀಲರು ತಮ್ಮ ಕುಟುಂಬ, ಮತ್ತು ಗ್ರಾಮದ ಮೋಹವನ್ನು ಸದಾಕಾಲ ತ್ಯಜಿಸಿ ಬಿಟ್ಟರು. ಜನನಿ, ಜನ್ಮಭೂಮಿಯನ್ನು ಸ್ವರ್ಗಸಮಾನವೆಂದು ತಿಳಿಯುತ್ತಾರೆ. ಆದರೆ ಆತ್ಮ ಸ್ವರಾಜ್ಯದ ಸ್ಥಾಪನಾರ್ಥ ಈ ಮಹಾನ್ ಆತ್ಮನಿಗೆ ಪೌದ್ಗಲಿಕ ಭೂಮಿ ಮಹತ್ಪೂರ್ಣವಾಗಿ ಕಾಣಲಿಲ್ಲ. ಸ್ವಭೂಮಿಯನ್ನು ಒಂದು ಪಂಜರದಂತೆ ತ್ಯಜಿಸಿ ಆಧ್ಯಾತ್ಮ ಸಿಂಹನಂತೆ ವಿಹರಿಸತೊಡಗಿದರು. ಅವರ ದೃಷ್ಟಿ ಈಗ ಸರಾಗಪೂರ್ಣ ಜಗತ್ತಿನಿಂದ ವೀತರಾಗಪೂರ್ಣ ಜಗತ್ತಿಗೆ ಸರಿದಿತ್ತು.

## ವೈರಾಗ್ಯದ ಕಾರಣ

ಈ ಮಹಾನ್ ಚೇತನದ ನಿರ್ವೇಗಕ್ಕೆ ಕಾರಣವೇನಿರಬಹುದೆಂದು ಕುತೂಹಲ ನನ್ನಲ್ಲಿ ಮೂಡಿತು. ವೈರಾಗ್ಯಕ್ಕೆ ಬಾಹ್ಯ ಮತ್ತು ಅಭ್ಯಂತರ ಕಾರಣಗಳನ್ನು ಹೇಳಿದೆ. ಸಂಸಾರ ತಟ ಸಮೀಪಿಸಿದ ಜೀವಿಗೆ ಮಾತ್ರ ಅಭ್ಯಂತರ ಕಾರಣ ಪ್ರಾಪ್ತಿಯಾಗುತ್ತದೆ. ಬಾಹ್ಯ ಕಾರಣಕ್ಕೆ ಅಭ್ಯಂತರ ಕಾರಣ ನಿಮಿತ್ತವಾಗಿರುತ್ತದೆ. ಆ ಬಾಹ್ಯ ಕಾರಣವನ್ನು ಪತ್ತೆ ಮಾಡಲು ನಾನು ಸನ್ನಾಹ ಮಾಡತೊಡಗಿದೆ. ಒಂದು ಸಂದರ್ಭದಲ್ಲಿ ಸಮಯ ನೋಡಿ ಕೇಳಿದೆ.

''ಮಹರಾಜ್! ವೈರಾಗ್ಯ ನಿಮಗೆ ಯಾವುದರ ನಿಮಿತ್ತದಿಂದ ಉಂಟಾಗಿರಬಹುದು? ಅಂದರೆ ಸಾಧುತ್ವದ ಪ್ರೇರಣೆ ನಿಮಗೆ ಹೇಗೆ ಪ್ರಾಪ್ತಿಯಾಯಿತು. ಪುರಾಣದ ಪ್ರಕಾರ ಆದಿನಾಥ ಪ್ರಭುವಿಗೆ ದೇವಾಂಗನೆ ನೀಲಾಂಜನೆಯ ಹಠಾತ್ ಮರಣ ತಮ್ಮ ಸಮಕ್ಷಮ ಉಂಟಾದ್ದರಿಂದ ವೈರಾಗ್ಯ ಹುಟ್ಟಿತು. ಹೀಗೆ ನಿಮಗೂ ಏನಾದರೊಂದು ಕಾರಣ ನಿಮಿತ್ತವಾಯಿತೇ?''

ಆಗ ಅವರು ಅತ್ಯಂತ ಪ್ರಸನ್ನ ಚಿತ್ತದಿಂದ ನುಡಿದರು.

''ನಮ್ಮ ವೈರಾಗ್ಯ ನೈಸರ್ಗಿಕವಾದುದು. ಇದು ನಮ್ಮ ಜನ್ಮಾಂತರದ ಸಂಸ್ಕಾರದಿಂದ ಉಂಟಾಗಿರಬಹುದೆಂದು ನಮಗೆ ಭಾಸವಾಗುತ್ತದೆ. ಕೌಟುಂಬಿಕ ವಿಚಾರಗಳಲ್ಲಿ ನಮ್ಮ ಮನಸ್ಸು ಪ್ರಾರಂಭದಿಂದಲೂ ಹೊಂದಿಕೊಳ್ಳಲಿಲ್ಲ. ನಮ್ಮ

ಮನಸ್ಸಿನಲ್ಲಿ ವೈರಾಗ್ಯಭಾವ ಸದಾ ಹುಟ್ಟುತ್ತಲೇ ಇತ್ತು. ಹೃದಯದಲ್ಲಿ ಆಗಿಂದಾಗ್ಗೆ ಗೃಹವಾಸ ಬಂಧನ ತ್ಯಜಿಸಿ ದೀಕ್ಷೆ ತೆಗೆದುಕೊಳ್ಳುವ ಉತ್ಕಂಟಿತ ಭಾವ ಏಳುತ್ತಲೇ ಇತ್ತು''

ಅವರ ಮಾತನ್ನು ಕೇಳಿ ನನಗೆ ಮಹಾವೀರ ಪ್ರಭುವಿನ ಸ್ಮರಣೆ ಉಂಟಾಯಿತು. ಅಸಗ ಕವಿಯ ಮಾತಿನಲ್ಲೇ ಮಹಾವೀರರ ವೈರಾಗ್ಯದ ವಿಧಾನವನ್ನು ಇಲ್ಲಿ ಉದ್ಧರಿಸಲಿಚ್ಛಿಸುತ್ತೇನೆ.

''ಕೋಮಲ ಕಮಲ ಸದೃಶ ಪಾದಾರವಿಂದವುಳ್ಳ ಸುಕುಮಾರ ಮಹಾವೀರ ಪ್ರಭುವು ಒಂದು ದಿನ ಬಾಹ್ಯನಿಮಿತ್ತವಿಲ್ಲದೆ ಭೋಗಗಳಲ್ಲಿ ವಿರಕ್ತರಾಗಿ ಬಿಟ್ಟರು. ಏಕೆಂದರೆ ತತ್ವಜ್ಞಾನಿ ಮೋಕ್ಷಾಭಿಲಾಸಿ ಆತ್ಮ ಆತ್ಮಶಾಂತಿಗಾಗಿ ಮೋಕ್ಷ ಮಾರ್ಗದಲ್ಲಿ ಪದಾರ್ಪಣೆ ಮಾಡಲು ಬಾಹ್ಯದ ಪ್ರತೀಕ್ಷೆ ಮಾಡುವುದಿಲ್ಲ.''

ಆಚಾರ್ಯ ಶ್ರೀಯವರ ವಿಚಾರದಲ್ಲೂ ಈ ಮಾತು ಅದೆಷ್ಟು ಸತ್ಯ!

## ಕೊಗನೊಳಿ ಗ್ರಾಮದಲ್ಲಿ ಪ್ರಥಮ ಚಾತುರ್ಮಾಸ

ಧಾರ್ಮಿಕ ಶ್ರೀಮಂತ ಸಾತಗೌಡ ಪಾಟೀಲರು ಕ್ಷುಲ್ಲಕ ದೀಕ್ಷೆ ಕೈಗೊಂಡರೆಂದು ಭೀಮಗೌಡ ಪಾಟೀಲರು ಆನಂದದಿಂದ ಎಲ್ಲೆಡೆ ಸಾರುತ್ತಾ ಬಂದರು. ಎಲ್ಲಾ ಜನರು ಈ ಶುಭ ಸಮಾಚಾರ ಕೇಳಿ ಪೂಜ್ಯ ಶ್ರೀಯವರನ್ನು ಧನ್ಯಧನ್ಯ ಎಂದು ಪ್ರಶಂಸಿಸತೊಡಗಿದರು. ಕೊಗನೊಳಿ ಗ್ರಾಮದ ಜನರು ಒಟ್ಟಾಗಿ ಸೇರಿ ತಮ್ಮ ಗ್ರಾಮದಲ್ಲೇ ಚಾತುರ್ಮಾಸ ಕಳೆಯಬೇಕೆಂದು ಬಿನ್ನವಿಸಿದರು. ಅವರು ತಮ್ಮ ಸ್ವೀಕೃತಿಯನ್ನು ತಿಳಿಸಿದರು. ನಿಜವಾದ ರತ್ನ ಚಿಕ್ಕದೇ ಆದರೂ ತನ್ನ ಮಹಾನ್ ದೀಪ್ತಿಯಿಂದ ಅಂಧಕಾರವನ್ನು ನಾಶಮಾಡುವಂತೆ ಕ್ಷುಲ್ಲಕ ಶಾಂತಿಸಾಗರರು ತಮ್ಮ ಸಮ್ಯಕ್ ಶ್ರದ್ಧಾನ ಮತ್ತು ಚಾರಿತ್ರದ ಮೂಲಕ ಮಹಾನ್ ಪ್ರಭಾವವನ್ನು ಬೀರತೊಡಗಿದರು.

## ಗೃಹೀತಮಿಥ್ಯಾತ್ವ ನಾಶದತ್ತ ಗಮನ

ರಾಗದ್ವೇಷ ಸಹಿತ ಕುದೇವತೆಗಳಲ್ಲಿ ಜನಗಳಿಗೆ ಅಗಾದ ಶ್ರದ್ಧೆ ಬೇರೂರಿರುವುದನ್ನು ಅವರು ತಮ್ಮ ವಿಹಾರ ಕಾಲದಲ್ಲಿ ಕೂಡಲೇ ಮನಗಂಡರು. ಜನಗಳು ಮುಕ್ತಿಮಾರ್ಗವನ್ನು ತೊರೆದು ಚತುರ್ಗತಿ ಬ್ರಮಣೆಗೆ ಕಾರಣಗಳಾದ ಕುದೈವಗಳನ್ನು ದೇವರೆಂದು ಆರಾಧಿಸುತ್ತಿದ್ದರು. ಅವರ ಅಂತಃಕರಣದಲ್ಲಿ ಜನಗಳ ಮಿಥ್ಯಾತ್ವವನ್ನು ದೂರಮಾಡುವ ಕರುಣಾಭಾವ ಉತ್ಪನ್ನವಾಯಿತು. ಕುಲಪರಂಪರೆಯಿಂದ ಬಂದ ರೂಢ ಮೂಲ ಆಚರಣೆಗಳನ್ನು ಬದಲಾಯಿಸುವುದೆಂದರೆ ನದಿಯ ಪಾತ್ರವನ್ನೇ ಬೇರೆಡೆಗೆ ಬದಲಾಯಿಸುವಷ್ಟು



ಪ್ರಯಾಸದ ಕಾರ್ಯ. ಆಚಾರ್ಯ ಶ್ರೀಯವರ ವ್ಯಕ್ತಿತ್ವ ಅಸಾಧಾರಣವಾಗಿತ್ತು. ಯಾರೇ ಅವರೆದುರಿಗೆ ಕ್ಷಣ ಬಂದು ನಿಂತರೂ, ಅವರ ಮನಸ್ಸಿನ ಮೋಹಪರೆಯನ್ನು ಭೇದಿಸಿ ಅವರ ಹೃದಯದಲ್ಲಿ ಸಮ್ಯಕ್ತ್ವದ ನಂದಾದೀವಿಗೆಯನ್ನು ಬೆಳಗಿಸುವ ಅಸಮಾನ ವಾಗ್ಮನೋಬಲ ಅವರಲ್ಲಿತ್ತು. ನಿರಂತರ ಉಪದೇಶದಿಂದ ಸಾವಿರಾರು ಗೃಹಗಳನ್ನಲಂಕರಿಸಿದ್ದ ಕುದೇವತೆಗಳ ಸ್ಥಾನಗಳನ್ನು ಜಿನೇಂದ್ರ ಭಗವಾನರ ಪ್ರತಿಕೃತಿಗಳು ಅಲಂಕರಿಸಿದವು. ಮನೆ ಮನೆಯಲ್ಲೂ ಮನಮನದಲ್ಲೂ ಸದ್ಭಕ್ತಿಯ ನಂದಾದೀವಿಗೆಯನ್ನು ಹಚ್ಚಿದರು. ಅವರ ಮೃದುವೂ, ಮಧುರವೂ, ಗಂಭೀರವೂ ಆದ ಸಿಂಹವಾಣಿ ಹೊರಡುತ್ತಲೇ ಜನಗಳ ಮಿಥ್ಯಾತ್ವದ ಭ್ರಾಂತಿ ಗಾಳಿಗೊಡ್ಡಿದ ದೀಪಾಂಕುರದಂತೆ ನಾಶವಾಗಿ ಸಮ್ಯಕ್ತ್ವ ಜ್ಯೋತಿ ಝಗಝಗಿಸತೊಡಗಿತು. ಸಂಸಾರದ ದೊಡ್ಡ ಶತ್ರು ಮಿಥ್ಯಾತ್ವ, ದೊಡ್ಡ ಮಿತ್ರ ಸಮ್ಯಕ್ತ್ವ. ಜೀವಿಗಳನ್ನು ಮಿಥ್ಯಾತ್ವದಿಂದ ಸಮ್ಯಕ್ತ್ವದತ್ತ ಒಯ್ಯುವುದಕ್ಕಿಂತ ಹೆಚ್ಚಿನ ಉಪಕಾರ ಯಾವುದಿದೆ?

ಸಾಗರಧರ್ಮಾಮೃತದಲ್ಲಿ ಹೀಗೆ ಬರೆದಿದ್ದಾರೆ.

''ಪಂಚಮ ಕಾಲದ ಭೀಷಣ ವರ್ಷಾಕಾಲದಲ್ಲಿ ಮಿಥ್ಯಾತ್ವರೂಪಿ ಮೇಘಗಳು ಸಮ್ಯಕ್ತ್ವರೂಪಿ ದಿಶೆಗಳನ್ನು ಆಚ್ಛಾದಿಸಿ ಬಿಟ್ಟಿವೆ. ಇಂತಹ ದುಃಷ್ಕಾಲದಲ್ಲಿ ಸೂರ್ಯ ಚಂದ್ರರಂತೆ ಪ್ರಕಾಶಮಾನರಾದ ತೀರ್ಥಂಕರರು, ಋದ್ಧಿಧಾರೀ ಮುನಿಗಳು, ಅವಧಿಜ್ಞಾನ ಸಂಪನ್ನರು ಉದಯಿಸುವುದಿಲ್ಲ. ಇಂತಹ ಮಹಾಸಂಕಟ ಕಾಲದಲ್ಲೂ ತತ್ವ ಮಾರ್ಗೋಪದೇಶ ಕೊಡುವ ಮಹಾಪುರುಷರು ಮಿಣುಕಹುಳುಗಳಂತೆ ಪ್ರಕಾಶವನ್ನುಂಟುಮಾಡುತ್ತಾರೆ ಆದರೂ ಮುಕ್ತಿ ಮಾರ್ಗ ಎಂದೂ ಹ್ರಾಸವಾಗುವುದಿಲ್ಲ. ಅಲ್ಲಲ್ಲಿ ಮೋಕ್ಷಮಾರ್ಗ ಪ್ರಭಾವನಾಸಕ್ತ ಗುರುಗಳು ಮಿಣುಕು ಹುಳುಗಳಂತೆ ಪ್ರಕಾಶವನ್ನುಂಟು ಮಾಡುತ್ತಿರುತ್ತಾರೆ''

ಲೌಕಿಕ ವಿದ್ಯೆಯಲ್ಲಿ ಪ್ರವೀಣರಾದ ಎಷ್ಟೋಜನ ಈಗ ಅಧಿಕ ಸಂಖ್ಯೆಯಲ್ಲಿ ಕಾಣುತ್ತಾರೆ. ಅಲೌಕಿಕ ವಿದ್ಯೆಯಲ್ಲಿ ಪ್ರವೀಣರಾದ ಮಹಾಪುರುಷರು ಬಹಳ ವಿರಳ. ಸಮ್ಯಜ್ಞಾನದ ಚರ್ಚೆ ಮಾಡುವ ಪುಣ್ಯ ಪುರುಷರೆಲ್ಲಿದ್ದಾರೆ?

ಪದ್ಮನಂದಿ ಪಂಚವಿಂಶತಿಯಲ್ಲಿ ಹೀಗೆ ಹೇಳಿದ್ದಾರೆ.

''ತಮ್ಮನ್ನು ಮಹಾ ವಿದ್ವಾಂಸರೆಂದು ಭಾವಿಸಿ ತಮ್ಮ ವ್ಯಕ್ತಿತ್ವದ ಸಾಮರ್ಥ್ಯವನ್ನು ತೋರಿಸುತ್ತಾ ದೊಡ್ಡದೊಡ್ಡ ಸಭೆಗಳಲ್ಲಿ ಶೃಂಗಾರ ಭೋಗ ರಸಯುಕ್ತ ಮಾತುಗಳನ್ನಾಡುತ್ತಾ ಮೋಹಜಾಲದಲ್ಲಿ ಮುಳಿಗೇಳುವ ವಕ್ತೃಗಳು ಮನೆಮನೆಯಲ್ಲೂ ತುಂಬಿದ್ದಾರೆ. ಆದರೆ ಯಾವುದರಿಂದ ಪರಮಾತ್ಮ ಸ್ವರೂಪ ಹಾಗೂ ಜೀವಾದಿ ತತ್ವಬೋಧ ಉಂಟಾಗುವುದೋ ಅಂತಹ ಉಪದೇಶಕರು ಅತ್ಯಂತ ದುರ್ಲಭರಾಗಿದ್ದಾರೆ.''

ಕೆಲವರು ತಮ್ಮ ಸಂಪ್ರದಾಯದ ಕಟ್ಟಾ ಭಕ್ತರಾಗಿದ್ದು ಜನಗಳ ಸಮಕ್ಷಮ ಸರ್ವಧರ್ಮ ಸಮನ್ವಯ ವಿಚಾರಗಳನ್ನು ಆಕರ್ಷಣೀಯವಾಗಿ ಪ್ರಸ್ತುತಪಡಿಸುತ್ತಾ ಸರ್ವಾಧರಣೀಯತೆಯನ್ನು ಬಹಳ ಚತುರತೆಯಿಂದ ಸಂಪಾದಿಸುವುದು ಕಂಡುಬರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಆಚಾರ್ಯಶ್ರೀಯವರ ''ಮಿಥ್ಯಾತ್ವ ತ್ಯಾಗ'' ಆಂದೋಳನ ಅಂತವರಿಗೆ ಹುಬ್ಬೇರಿಸುವಂತಾಯಿತು. ಕೇವಲ ''ಮಿಥ್ಯಾತ್ವ'' ತ್ಯಾಗದ ಅರ್ಥವೇನು? ಆದರಿಂದ ರಾಷ್ಟ್ರ ಹೀತವಾದೀತೆ ಎನ್ನುವ ಸಾಮಾಜಿಕ ಶಂಕೆಗಳೂ ಹುಟ್ಟಿಕೊಂಡವು.

ಇಂತಹ ಪ್ರಶ್ನೆಗಳು ಸ್ಥೂಲ ದೃಷ್ಟಿಯಿಂದ ಬಹಳ ಮೋಹಕವಾಗಿ ಕಂಡರೂ. ಪಾರಮಾರ್ಥಿಕ ದೃಷ್ಟಿಯಿಂದ ಉಚಿತವಾಗಿ ತೋರುವುದಿಲ್ಲ. ಮಿಥ್ಯಾತ್ವದ ದೆಶೆಯಿಂದ ಈ ಜೀವ ಮುಕ್ತಿ ಮಾರ್ಗದಿಂದ ವಂಚಿತವಾಗಿದೆ. ಜೈನಧರ್ಮ ವೈಜ್ಞಾನಿಕ ಧರ್ಮ. ಅದು ವಸ್ತುಸ್ವರೂಪದ ಯಥಾರ್ಥ ವಿಜ್ಞಾನವಾಗಿದೆ. ಜಡ ಮತ್ತು ಚೈತನ್ಯಗಳ ಏಕತೆ-ಮತ್ತು ಭಿನ್ನತೆಗಳನ್ನು ತಿಳಿಸುವ ನೈಜ ಕಲೆಯಾಗಿದೆ. ಜಡ ಮತ್ತು ಚೈತನ್ಯಗಳನ್ನು ಒಂದೇ ಎಂದು ತಿಳಿದಾಗ ಆತ್ಮನ ಘಾತವಾಗುತ್ತದೆ. ಚೈತನ್ಯ,ಆತ್ಮಸ್ವಸ್ವರೂಪಾನಂದದಿಂದ ವಂಚಿತವಾಗುತ್ತದೆ. ತತ್ಕಾರಣ ಅನಂತ ದುಃಖಿಯಾಗುತ್ತದೆ. ಆತ್ಮ ಮತ್ತು ಶರೀರ ಹಾಗೂ ಆದರ ನಾನಾ ಚೇಷ್ಟೆಗಳನ್ನು ಒಂದೇ ಎಂದು ತಿಳಿಯುವ ಈ ವಿಭಾವ ಪರಿಣಾಮವೇ ಮಿಥ್ಯಾತ್ವ. ಪೂಜ್ಯ ಆಚಾರ್ಯ ಶ್ರೀಯವರು ಈ ಮಿಥ್ಯಾತ್ವದ ವಿರುದ್ಧ ಹೋರಾಡುತ್ತಿದ್ದರೇ ವಿನಃ ಮಿಥ್ಯಾದೃಷ್ಟಿಗಳ ವಿರುದ್ಧವಲ್ಲ. ಸಂಸಾರ ಮತ್ತು ಮೋಕ್ಷಕ್ಕಿರುವ ಅಂತರವೆಂದರೆ ರಾತ್ರಿ ಮತ್ತು ಹಗಲು ಇದ್ದಂತೆ, ಅಮೃತ ಮತ್ತು ವಿಷವಿದ್ದಂತೆ. ಮಿಥ್ಯಾತ್ವದ ನಾಶ ತನ್ಮೂಲಕ ಸಮ್ಯಕ್ತ್ವದ ಪ್ರಾಪ್ತಿಯೆಂದರೆ ಕತ್ತಲಿನಿಂದ ಬೆಳಕಿಗೆ, ಮೃತ್ಯುವಿನಿಂದ ಅಮರತ್ವದೆಡೆಗೆ, ಅಜ್ಞಾನದಿಂದ ಸುಜ್ಞಾನದೆಡೆಗೆ ಮಾಗದರ್ಶನ ಮಾಡುವುದೆಂದರ್ಥ. ಆದೇ ನಿಜವಾದ ಪರಿವರ್ತನೆ. ಈ ಪರಿವರ್ತನೆ ಸತ್ಯ ಅಹಿಂಸೆಗಳೇ ನಿಜವಾದ ಉಸಿರಾದಾಗ ಸಾಧ್ಯವಾಗುತ್ತದೆ. ಇದಕ್ಕಿಂತ ಹೆಚ್ಚಿನ ಸಮಾಜ ಸೇವೆ ಯಾವುದಿದೆ? ಪೂಜ್ಯ ಆಚಾರ್ಯಶ್ರೀಯವರ ಮಿಥ್ಯಾತ್ವ ತ್ಯಾಗ ಆಂದೋಳನ ಮಾನವನ ಬದುಕಿನ ಕ್ಷಣಿಕ ಸುಖ ಸೌಲಭ್ಯಗಳ ಹೊಂದಾಣಿಕೆಯತ್ತ ಇರದಿರುವುದೇನೋ ನಿಜ. ಆದರೆ ಅದು ಪರಸ್ಪರೋಪಗ್ರಹೋ ಜೀವಾನಾಂ'' ''ಬದುಕು ಬದುಕಲು ಬಿಡು'' ''ಉದಾರಚರಿತನಾಂ ತು ವಸುಧೈವ ಕುಟುಂಬಕಂ'' ಎಂಬ ನಮ್ಮ ಪರಂಪರೆಯ ಪರಿರಕ್ಷಣೆಯನ್ನು ಅವ್ಯಾಹತವಾಗಿ ರಕ್ಷಿಸಲು ನೆರವಾಗುತ್ತಿತ್ತು. ಇದಕ್ಕಿಂತ ಹೆಚ್ಚಿನ ಸಾಮಾಜಿಕ ಮೌಲ್ಯ ರಕ್ಷಣೆ ಯಾವುದಿದೆ? ಅಜ್ಞಾನಿ, ಸಂಕುಚಿತ ಮತಾಂಧ ಜನಗಳಿಗಷ್ಟೇ ಅವರ ಆಂದೋಳನ ಹುಬ್ಬೇರಿಸುವಂತಾಗಿರಬೇಕು.



ವಿಚಾರಪೂರ್ಣ ವ್ಯಕ್ತಿ ನಿಷ್ಪೃಹನಾಗಿ ವಿಚಾರ ಮಾಡಿದಾಗ ಜೈನ ಧರ್ಮ ಮಿಥ್ಯಾತ್ವದ ನಿಷೇಧ ಏಕೆ ಮಾಡಿದೆ ಎನ್ನುವುದು ಚೆನ್ನಾಗಿ ಮನದಟ್ಟಾಗುತ್ತದೆ. ಬೋಳೆ ಸ್ವಭಾವದ ಜನ ಕಂಡ ಕಂಡ ದೈವಗಳಲ್ಲೆಲ್ಲಾ ಭಕ್ತಿ ಇಟ್ಟು ತಮ್ಮಾತ್ಮ ಸ್ವರೂಪವನ್ನೇ ಮರೆತು ಬಿಟ್ಟಿದ್ದಾರೆ.

ಮೊಟ್ಟ ಮೊದಲ ಬಾರಿಗೆ ಕಂಡ ರೈಲು ಮೋಟಾರುಗಳನ್ನು ಹಳ್ಳಿಯ ಮುಗ್ಧ ಜನ ದೇವರೆಂದೇ ಭಾವಿಸುತ್ತಿದ್ದರು. ಗಿಡ ಮರಗಳಲ್ಲೂ ದೈವತ್ವವನ್ನು ಆರೋಪಿಸಿ ಪೂಜಿಸುತ್ತಿದ್ದರು. ಈ ವಿಪರೀತ ಭಾವನೆಗಳಿಂದ ಮಾನವ ತನ್ನ ಪೌರುಷ ಇಲ್ಲವೆ ಸ್ವಶಕ್ತಿಯ ಮೂಲ ಆತ್ಮನನ್ನು ಸಂಪೂರ್ಣವಾಗಿ ತೊರೆದು ಪ್ರತಿಯೊಂದು ಫಲಾಫಲಗಳನ್ನು ದೈವೇಚ್ಛೆ, ದೈವನಿಯಮ ಎಂದು ಭಾವಿಸುತ್ತಾ ದುಃಖಿಯಾಗುತ್ತಾನೆ. ಇದನ್ನೇ ಮೂಢನಂಬಿಕೆ ಅಥವಾ ಲೋಕ ಮೂಢ ಎಂದು ಕರೆಯಲಾಗಿದೆ. ತನ್ನ ಶಕ್ತಿಗೆ ಕಲ್ಪನೆಗೆ ಮೀರಿದ್ದನ್ನೂ ದೈವಶಕ್ತಿ ಎಂದು ಹಣೆಪಟ್ಟಿ ಕಟ್ಟಿ ತನ್ನನ್ನು ಆ ದೈವಗಳ ಪರಾಧೀನಗೊಳಿಸುವುದೇ ಮೂಢನಂಬಿಕೆ. ರಾಷ್ಟ್ರ ಸ್ವತಂತ್ರಾನಂತರ ಪ್ರಥಮ ಮತದಾನದಲ್ಲಿ ಮತಪೆಟ್ಟಿಗೆಯನ್ನು ಪೂಜಿಸಿ ಓಟು ಹಾಕುತ್ತಿದ್ದುದೂ ಬೆಳಕಿಗೆ ಬಂದಿತ್ತು. ಇಂತಹ ಅಸಂಗತ ಆಚರಣೆಗಳನ್ನು ಆಧುನಿಕ ಮಾನವ ಒಪ್ಪಲಾರ. ಮಿಥ್ಯಾತ್ವ ತ್ಯಾಗ ಆಂದೋಳನ ಇಂತಹ ಅಸಂಗತ ವಿಚಾರಗಳನ್ನು ವಿರೋಧಿಸುತ್ತಿತ್ತು. ಮಿಥ್ಯಾತ್ವ ತ್ಯಾಗವೆಂದರೆ ರೂಢ ಮೂಲ ಅಂಧಾಚರಣೆಗಳ ತ್ಯಾಗ. ಪರಂಪರಾಗತ ಆತ್ಮಘಾತಕಾರಿ ಆಚರಣೆಗಳನ್ನು ತ್ಯಜಿಸಿ ಆತ್ಮಹಿತ ದೃಷ್ಟಿಕೋನ ಬೆಳೆಸುವುದು ಎಂದರ್ಥ.

ಹೀಗೆ ಆಚಾರ್ಯಶ್ರೀಯವರು ಅಸಂಖ್ಯ ರೂಢ ಮೂಲ ಅಶುದ್ಧಾಚರಣೆಗಳನ್ನು ತೊಡೆದು ಹಾಕಿ ಅವರ ಮಾನಸಿಕ ಭಯವನ್ನು ನಿವಾರಿಸಿ ಆತ್ಮಸ್ವಾತಂತ್ರದ ಹೊಸ ದಿಗಂತದತ್ತ ಜನಗಳನ್ನು ಕೊಂಡೊಯ್ದರು. ಯಾರು ಮಿಥ್ಯಾತ್ವದ ಆರಾಧಕರಾಗಿದ್ದರೋ ಕುದೇವ ಕುಗುರು, ಕುಶಾಸ್ತ್ರ ಉಪಾಸಕರಾಗಿದ್ದರೋ (ಅಂತವರಿಂದ ಆಹಾರ) ಸ್ವೀಕರಿಸುತ್ತಿರಲಿಲ್ಲ. ಅವರ ಈ ಪ್ರತಿಜ್ಞೆ ಬಹಳ ಬೇಗ ಮಿಥ್ಯಾತ್ವ ರೋಗವನ್ನು ವಿಮೋಚನಗೊಳಿಸತೊಡಗಿತು. ಸಮ್ಯಕ್ತ್ವದ ಪರಿಷ್ಕರಣವನ್ನು ವಾತ್ಸಲ್ಯ, ಸ್ಥಿತೀಕರಣ, ಉಪಗೂಹನಾಂಗಗಳ ಮೂಲಕ ಮಾಡತೊಡಗಿದರು. ಧೀನ ದುಃಖಿ ಜೀವಿಗಳನ್ನು ಸಂಸಾರ ಜಾಲದಿಂದ ಬಿಡಿಸಿ ಹೇಗೆ ಮುಕ್ತಿಯತ್ತ ಕೊಂಡೊಯ್ಯಬೇಕೆಂಬುದೇ ಅವರ ಚಿಂತೆಯಾಗಿತ್ತು. ಅವರು ಸ್ವಕಲ್ಯಾಣದೊಡನೆ ಪರಕಲ್ಯಾಣವನ್ನೂ ಚೆನ್ನಾಗಿ ನಿರ್ವಹಿಸುತ್ತಿದ್ದರು. ಆದ್ದರಿಂದ ಅವರು ಜಗದ್ಬಂಧುವಾಗಿದ್ದರು. ಆದಿನಾಥ ಪ್ರಭುವು ವಿರಕ್ತರಾಗಿ ಚೆನ್ನಾಗಿ ಮಾಸಿ ಹೋಗಿದ್ದ ಮುಕ್ತಿ ಮಾರ್ಗವನ್ನು ಪ್ರಕಾಶಗೊಳಿಸಿದರು. ಆಚಾರ್ಯ ಶ್ರೀಯವರೂ ನಷ್ಟಭ್ರಷ್ಟವಾಗಿದ್ದ ಮುಕ್ತಿ ಮಾರ್ಗವನ್ನು ಅತ್ಯಂತ ಶ್ರಮದಿಂದ

ಪುನರುಜ್ಜೀವನಗೊಳಿಸಿದರು. ಇವರಿಗೆ ಮೊದಲು ಮುನಿಗಳಿರಲಿಲ್ಲವೆಂದಲ್ಲ. ಇದ್ದರೂ ಮಾರ್ಗ ಮಲಿನವಾಗಿತ್ತು. ಆಚರಣೆ ಅಶುದ್ಧವಾಗಿತ್ತು. ಆಚರಣೆಯಲ್ಲಿ ಶಾಸ್ತ್ರೋಕ್ತ ವಿಧಿ ವಿಧಾನಗಳನ್ನು ಜಾರಿಗೆ ತಂದವರು ಪೂಜ್ಯ ಆಚಾರ್ಯ ಶ್ರೀಯವರು. ಆದ್ದರಿಂದಲೇ ಅವರ ಮುನಿ ಜೀವನ ಆದಿ ತೀರ್ಥಂಕರರಷ್ಟೇ ಮಹತ್ಪೂರ್ಣವಾದುದು.

## ಜೈನವಾಡಿಯಲ್ಲಿ ಸಮ್ಯಕ್ತ್ವದ ಬೀಜಾರೋಪಣ

ಪೂಜ್ಯ ಆಚಾರ್ಯ ಶ್ರೀಯವರು ವಿಹರಿಸುತ್ತಾ ಜೈನವಾಡಿಯತ್ತ ಬಂದರು. ಅಲ್ಲಿ ಹೆಚ್ಚಿನವರು ಜಾತಿಯಿಂದ ಮಾತ್ರ ಜೈನರಾಗಿದ್ದರು. ಆಚಾರ- ವಿಚಾರಗಳಿಂದಲ್ಲ. ಎಲ್ಲರೂ ಕುದೇವತೆಗಳನ್ನು ಪೂಜಿಸುತ್ತಿದ್ದರು. ಆಚಾರ್ಯ ಶ್ರೀಯವರ ಉಪದೇಶ ಮೊಳಗತೊಡಗಿತು. ಮುಂಗಾರು ಮೇಘಗಳು ಸುರಿಸುವ ಧಾರಾಕಾರ ವರ್ಷದಂತೆ ಅವರ ಉಪದೇಶದಿಂದ ಮಿಥ್ಯಾತ್ವದ ಕಲ್ಮಶಗಳು ಜಾರಿ ಜನಗಳು ಧರ್ಮಾಮೃತ ಪಾಯಸವನ್ನು ಮನದಣಿಯೆ ಪಾನಮಾಡತೊಡಗಿದರು. ತಮ್ಮ ತಮ್ಮ ಮನೆಗಳಲ್ಲಿದ್ದ ಕುದೇವತೆಗಳ ಬಿಂಬಗಳನ್ನು ಒಂದು ಗಾಡಿಯಲ್ಲಿ ತುಂಬಿ ನದಿಯಲ್ಲಿ ವಿಸರ್ಜಿಸಿದರು.

ಈ ವಿಚಾರ ಅಲ್ಲಿಯ ರಾಜನಿಗೆ ಹೇಗೋ ತಿಳಿದು ಬಿಟ್ಟಿತು. ಆಚಾರ್ಯ ಮಹರಾಜರು ಪುಣ್ಯಮೂರ್ತಿಗಳು. ಅವರೂ ನಮ್ಮ ದೇವತೆಗಳಿಗೆ ಇಂತಹ ಸ್ಥಿತಿಯನ್ನೇಕೆ ತಂದರೋ ಎಂದು ಚಿಂತಿಸತೊಡಗಿದ. ಸ್ವತಃ ರಾಜರಾಣಿಯರೇ ತ್ವರಿತವಾಗಿ ಬಂದು ಪೂಜ್ಯ ಶ್ರೀಯವರ ದರ್ಶನಮಾಡಿ ತಮ್ಮ ಆತಂಕವನ್ನು ವ್ಯಕ್ತಮಾಡತೊಡಗಿದರು.

''ಮಹರಾಜ್! ಇದನ್ನೇನನ್ನೂ ಮಾಡಿಸುತ್ತಿರುವಿರಿ? ದೇವ ದೇವತೆಗಳ ಬಿಂಬಗಳನ್ನು ಗಾಡಿಯಲ್ಲಿ ತುಂಬಿಸಿ ನದಿಯಪಾಲು ಮಾಡಿಸುತ್ತಿರುವಿರಲ್ಲ?

ಆಚಾರ್ಯ ಶ್ರೀ: ''ರಾಜನ್! ಒಂದು ಪ್ರಶ್ನೆಗೆ ನೀನು ಉತ್ತರ ಹೇಳಬೇಕಾಗಿದೆ. ನೀವಿಲ್ಲಿ ಬಾದ್ರಪದ ಮಾಸದಲ್ಲಿ ಗಣಪತಿಯನ್ನು ಸ್ಥಾಪನೆ ಮಾಡುವಿರಲ್ಲವೆ?''

ರಾಜ: ''ಹೌದು ಮಹರಾಜ್! ಈಗ ನಾವು ಗಣಪತಿಯನ್ನು ವಿರಾಜಮಾನ ಮಾಡಿಸುತ್ತೇವೆ.

ಆಚಾರ್ಯಶ್ರೀ: ''ಸ್ಥಾಪನೆಯ ನಂತರ ಏನು ಮಾಡುವಿರಿ?''

ರಾಜ: ''ನಾವು ಅದರ ಪೂಜೆ ಮಾಡುತ್ತೇವೆ. ಭಕ್ತಿ ಮಾಡುತ್ತೇವೆ. ''

ಆಚಾರ್ಯಶ್ರೀ: ತದನಂತರ ಏನು ಮಾಡುವಿರಿ?''

ರಾಜ: ಅನಂತರ ನಾವು ನೀರಿನಲ್ಲಿ ಸ್ಥಾಪಿಸಿಬಿಡುತ್ತೇವೆ.



ಆಚಾರ್ಯಶ್ರೀ: ''ಯಾವುದರ ಪೂಜೆ ಮಾಡುತ್ತೀರೋ, ಭಕ್ತಿ ಮಾಡುತ್ತೀರೋ ಅಂತಹ ದೇವರ ಮೂರ್ತಿಯನ್ನು ನೀರಿನಲ್ಲೇಕೆ ಮುಳುಗಿಸುತ್ತೀರಿ?''

ರಾಜ: ''ಮಹರಾಜ್! ಪರ್ವ ಪರ್ಯಂತವೇ ಗಣಪತಿಯ ಪೂಜಾಕಾಲ. ಅದರ ಪೂಜಾಕಾಲ ಮುಗಿದ ನಂತರ ನೀರಿನಲ್ಲಿ ಮುಳುಗಿಸುವುದೇ ನಮ್ಮ ಕರ್ತವ್ಯವಾಗಿದೆ. ''

ಆಚಾರ್ಯಶ್ರೀ: ''ಅದನ್ನು ನೀರಿನಲ್ಲಿ ಮುಳುಗಿಸಿದ ನಂತರ ಯಾರನ್ನು ಪೂಜಿಸುತ್ತೀರಿ?''

ರಾಜ: ''ಅದಾದನಂತರ ನಾವು ರಾಮ ಹನುಮಾನ್ಆದಿ ದೇವತೆಗಳನ್ನು ಪೂಜಿಸುತ್ತೇವೆ.''

ಆಚಾರ್ಯಶ್ರೀ:

ರಾಜನ್! ಚಿತ್ತವಿಟ್ಟು ಕೇಳಿ. ಹೇಗೆ ಪರ್ವಪೂರ್ಣಗೊಂಡ ನಂತರ ನೀವು ಗಣಪತಿಯನ್ನು ನೀರಿನಲ್ಲಿ ಹಾಕಿಬಿಡುತ್ತೀರೋ ಮತ್ತು ರಾಮಚಂದ್ರ ಹನುಮಾನ್ ಆದಿ ದೇವತೆಗಳನ್ನು ಪೂಜಿಸುತ್ತೀರೋ, ಹಾಗೆಯೇ ಈ ದೈವಗಳ ಪೂಜಾ ಪರ್ವಕಾಲ ಮುಗಿದು ಹೋಯಿತು. ಎಲ್ಲಿಯವರೆಗೆ ನಮ್ಮ ಆಗಮನವಾಗಿರಲಿಲ್ಲ ಅಲ್ಲಿಯವರೆಗಷ್ಟೇ ಈ ದೈವಗಳ ಪೂಜಾಪರ್ವಕಾಲವಿತ್ತು. ಜೈನ ಗುರುಗಳ ಆಗಮನದ ನಂತರ ಆ ಪೂಜಾಕಾಲವಿನ್ನು ಮುಗಿಯಿತು. ಅವುಗಳನ್ನು ನೀರಿಗೆ ಹಾಕುವುದೇ ಈಗ ಕರ್ತವ್ಯವಾಗಿದೆ. ರಾಮ ಹನುಮಾನ್ ಆದಿ ದೇವತೆಗಳನ್ನು ನೀವು ಪೂಜಿಸುವಂತೆ ನಮ್ಮ ಮಂದಿರದಲ್ಲಿರುವ ವೀತರಾಗಿ ಅರ್ಹಂತ ಪ್ರಭುವನ್ನು ಇವರು ಇನ್ನು ಮುಂದೆ ಪೂಜಿಸುತ್ತಾರೆ'

ಪೂಜ್ಯ ಶ್ರೀಯವರ ಈ ಯುಕ್ತಿಯುಕ್ತ ಮಾತಿನಿಂದ ರಾಜನ ಸಂದೇಹ ನಿವಾರಣೆಯಾಯಿತು. ಪ್ರತಿಯಾಗಿ ಮಾತಾಡಲು ಏನೂ ತೋಚಲಿಲ್ಲ. ಆಚಾರ್ಯ ಶ್ರೀಯವರಿಗೆ ವಂದಿಸಿ ಹೊರಟು ಹೋದರು.

ಜೈನವಾಡಿಯಲ್ಲಿ ಇನ್ನೊಂದು ವಿಶೇಷ ಘಟನೆ ನಡೆಯಿತು. ಅವರು ಅಲ್ಲಿಯ ಶ್ರಾವಕರಿಗೆ ಮಿಥ್ಯಾತ್ವ ತ್ಯಾಗದ ಪ್ರತಿಜ್ಞೆ ಮಾಡಿಸತೊಡಗಿದರು. ಒಂದು ದಿನ ಅಲ್ಲಿಯ ಶ್ರಾವಕ ಪ್ರಮುಖ ಕೆಲವರೊಡನೆ ಬಂದು ಒಂದು ವಿಜ್ಞಾಪನೆಯನ್ನು ಭಿನ್ನವಿಸತೊಡಗಿದ.

''ಮಹರಾಜ್! ತಮ್ಮ ಸೇವೆಯಲ್ಲಿ ಇನ್ನೊಂದು ವಿನಮ್ರ ವಿನಂತಿಯಿದೆ''

ಏನು ಹೇಳುವುದಿದೆ ಹೇಳು'' ವಾತ್ಸಲ್ಯಪೂರ್ಣವಾಣಿಯಿಂದ ಹೇಳಿದರು.

ಆಗ ಆ ಶ್ರಾವಕರು ನಿವೇದಿಸತೊಡಗಿದರು.

''ಮಹರಾಜ್! ಈ ಗ್ರಾಮದಲ್ಲಿ ಸರ್ಪಗಳ ಉಪದ್ರವ ಬಹಳ ಭಯಂಕರವಾಗಿದೆ. ಸರ್ಪವಿಷವನ್ನು ಇಳಿಸುವ ಒಬ್ಬ ಮಂತ್ರವಾದಿ ಜೈನ ಸಹೋದರ ಈ ಊರಿನಲ್ಲಿದ್ದಾನೆ. ಅವನು ಮಿಥ್ಯಾ ದೇವತೆ ಮಂತ್ರವನ್ನು ಭಕ್ತಿಯಿಂದ ಪಠಿಸಿ ವಿಷವನ್ನು ಇಳಿಸುತ್ತಾನೆ. ಒಂದು ವೇಳೆ ಅವನೂ ನಿಮ್ಮಿಂದ ಮಿಥ್ಯಾತ್ವ ತ್ಯಾಗ ವ್ರತ ತೆಗೆದುಕೊಂಡುಬಿಟ್ಟರೆ ನಾವು ಬಹಳ ಆಪತ್ತಿನಲ್ಲಿ ಸಿಕ್ಕಿಬಿಡುತ್ತೇವೆ. ಅವನೊಬ್ಬನನ್ನು ಬಿಟ್ಟು ಬೇರೆ ಯಾರಿಗೂ ನೀವು ವ್ರತಕೊಡಲು ನಮ್ಮ ಅಭ್ಯಂತರವೇನೂ ಇಲ್ಲ. ಇಂತಹ ಪರಿಸ್ಥಿತಿ ಎಂತವರಿಗೂ ತಬ್ಬಿಬ್ಬು ಮಾಡದೆ ಬಿಡದು. ಸಾರ್ವಜನಿಕ ಹಿತ ಮತ್ತು ಪ್ರಾಣರಕ್ಷಣೆಯ ದೃಷ್ಟಿಯಿಂದ ನೋಡುವುದಾದರೆ ಒಬ್ಬ ವ್ಯಕ್ತಿಗೆ ವಿನಾಯಿತಿ ಕೊಡುವುದು ವಿಚಾರಾರ್ಹವಾದೀತು. ಆದರೆ. .. .. ..

## ಅಪೂರ್ವ ಪ್ರಭಾವ

ಪೂಜ್ಯ ಶ್ರೀಯವರು ಈ ಸಮಸ್ಯೆಯನ್ನು ಗಂಭೀರವಾಗಿ ವಿಚಾರಿಸತೊಡಗಿದರು. ಸ್ವಲ್ಪ ಸಮಯದ ನಂತರ ಆ ಜೈನ ಬಂಧುಗಳ ಆತಂಕವನ್ನು ನಿವಾರಿಸತೊಡಗಿದರು.

''ಜೈನ ಮಂತ್ರಗಳಲ್ಲಿ ಅಚಿಂತ್ಯವಾದ ಶಕ್ತಿ ತುಂಬಿ ಹೋಗಿದೆ. ನಾವು ಆ ಮಂತ್ರವಾದಿಗೆ ಒಂದು ಮಂತ್ರವನ್ನು ಹೇಳಿಕೊಡುತ್ತೇವೆ. ಅದನ್ನು ವಿಧಿಪೂರ್ವಕ ಉಪಯೋಗಿಸಲಿ. ಒಂದು ವೇಳೆ ಒಂದೆರಡು ತಿಂಗಳಲ್ಲಿ ನಿಶ್ಚಿತ ಫಲ ದೊರೆಯದ್ದಿದ್ದರೆ ಮಿತಾಥ್ಯತ್ಯಾಗದ ಬಂಧನ ಅನಂತರ ಇರದು. ನೀವು (ಮಂತ್ರವಾದಿಯನ್ನುದ್ದೇಶಿಸಿ) ೨ ತಿಂಗಳವರೆಗೆ ಮಿತಾಥ್ಯ ತ್ಯಾಗ ವ್ರತವನ್ನು ಸ್ವೀಕರಿಸಬೇಕು'' ಎಂದು ಹೇಳಿ ಮಹರಾಜರು ಆ ಮಾಂತ್ರಿಕನಿಗೆ ಮಂತ್ರವನ್ನೂ ಅದನ್ನು ಸಾಧಿಸುವ ವಿಧಿಯನ್ನೂ ತಿಳಿಸಿಕೊಟ್ಟರು. ಮಾಂತ್ರಿಕನು ಆ ಮಂತ್ರವನ್ನು ಶ್ರದ್ಧೆಯಿಂದ ಸ್ವೀಕರಿಸಿ ವಾಪಾಸಾದ. ಕೆಲ ಕಾಲ ಮಂತ್ರ ಸಾಧನೆಯಲ್ಲಿ ಮಗ್ನನಾದ. ಕೆಲವು ದಿನಗಳು ಗತಿಸಿದವು. ಯಾವುದೇ ಘಟನೆ ನಡೆಯಲಿಲ್ಲ. ಇನ್ನೇನು ೨ ತಿಂಗಳ ಗಡುವು ಮುಗಿಯುವುದರಲ್ಲಿತ್ತು. ಒಂದು ಘಟನೆ ನಡೆಯಿತು. ಅದು ಪರೀಕ್ಷಾ ಕಾಲವೋ ಏನೋ? ಒಂದು ದಿನ ಒಬ್ಬ ರೈತ ತನ್ನ ಹೊಲದಿಂದ ಏದುಸಿರು ಬಿಡುತ್ತಾ ಮಂತ್ರವಾದಿಯ ಮನೆಯತ್ತ ಓಡುತ್ತಾ ಬಂದ! ನನ್ನ ಎತ್ತಿಗೆ ಸರ್ಪ ಕಚ್ಚಿದೆ ಬೇಗ ಬನ್ನಿ! ಬೇಗ ಬನ್ನಿ! ಎಂದು ಬೊಬ್ಬೆ ಹಾಕತೊಡಗಿದ. ಆ ಮಾಂತ್ರಿಕ ಲಗುಬಗೆಯಿಂದ ಎದ್ದು ಪಂಚಪರಮೇಷ್ಠಿ ಮಂತ್ರವನ್ನು ಪಠಿಸುತ್ತಾ ರೈತನೊಡನೆ ಜಮೀನಿನತ್ತ ಓಡತೊಡಗಿದ. ಆ ಎತ್ತು ಅಡ್ಡಾಗಿ ಮಲಗಿ ಬಾಯಲ್ಲಿ ನೊರೆ ಕರೆಯುತ್ತಿತ್ತು. ಆ ಮಂತ್ರವಾದಿ ಬಂದವನೆ ಪಂಚನಮಸ್ಕಾರ ಮಂತ್ರವನ್ನು ಜೋರಾಗಿ ಪಠಿಸುತ್ತಾ ಎತ್ತಿನ ಮೇಲೆ ನೀರನ್ನು ಚುಮುಕಿಸತೊಡಗಿದ. ಎಲ್ಲರ



ಮುಖದಲ್ಲಿ ಕಾತುರ ಆತುರ ತುಂಬಿತ್ತು. ಕೆಲವೇ ಕ್ಷಣಗಳಲ್ಲಿ ಎತ್ತು ಚೇತರಿಸಿಕೊಂಡು ತಲೆ ಕೊಡವಿತು. ಎಲ್ಲರಿಗೂ ಒಂದು ಕ್ಷಣ ರೋಮಾಂಚನವಾಯಿತು. ಮಂತ್ರವಾದಿ ಉಬ್ಬಿಹೋದ. ಅವನ ಮಂತ್ರ ಪಠನ ನಡೆಯುತ್ತಲೇ ಇತ್ತು. ಇನ್ನರೆಕ್ಷಣದಲ್ಲೇ ಎತ್ತು ಕೈಕಾಲು ಝಾಡಿಸುತ್ತಾ ಎಳೆಗರುವಿನಂತೆ ಏಳಲಾರಂಭಿಸಿತು. ರೈತನಿಗೆ ಪರಮಾನಂದವಾಯಿತು. ಮಂತ್ರವಾದಿಯ ಆನಂದಕ್ಕೆ ಪಾರವೇ ಇರಲಿಲ್ಲ. ಅಲ್ಲಿ ನೆರೆದಿದ್ದವರೆಲ್ಲಾ ಆಶ್ಚರ್ಯದಿಂದ ಚರ್ಚಿಸತೊಡಗಿದರು. ಎತ್ತು ಪೂರ್ಣ ಸ್ವಾಸ್ಥ್ಯಗೊಂಡಿತ್ತು. ಆ ರೈತ ಮತ್ತು ಮಂತ್ರವಾದಿಗಳಿಬ್ಬರೂ ಆವೇಶಗೊಂಡವರಂತೆ ಹಳ್ಳಿಯತ್ತ ಬಡಬಡಿಸುತ್ತಾ ಓಡತೊಡಗಿದರು. ಹೊಲದಲ್ಲಿ ಕಾರ್ಯನಿರತರಾಗಿದ್ದ ಅನ್ಯ ಕೃಷಿ ಕಾರ್ಮಿಕರು ಇವರ ವಿಚಿತ್ರ ವರ್ತನೆಗೆ ಬೆರಗಾಗಿ ನೋಡತೊಡಗಿದರು. ಈ ವಿಚಾರ ಒಬ್ಬರಿಂದೊಬ್ಬರಿಗೆ ವೇಗವಾಗಿ ಕಾಡ್ಗಿಚ್ಚಿನಂತೆ ಹರಡಿತು. ಅವರಿಬ್ಬರೊಡನೆ ಅಲ್ಲಲ್ಲಿ ಅನೇಕರು ಕೂಡಿಕೊಂಡು ಕೌತುಕ ತಡೆಯದೆ ಊರಿನತ್ತ ದೌಡಾಯಿಸಿದರು. ಶಾಂತಿ ಸಾಗರ ಮಹರಾಜ್ ಕೀ ಜೈ ಎನ್ನುವ ಘೋಷಣೆ ಊರಿನಲ್ಲಿ ಮಾರ್ದನಿಸುತ್ತಿತ್ತು. ಪ್ರತಿಯೊಬ್ಬರೂ ತಮ್ಮ ಕೈಕೆಲಸವನ್ನು ತ್ಯಜಿಸಿ ಹೊರಬಂದು ನೋಡತೊಡಗಿದರು. ಬಹುದೊಡ್ಡ ಗುಂಪೊಂದು ಮಂತ್ರವಾದಿಯನ್ನು ಮುಂದುಮಾಡಿಕೊಂಡು ಶಾಂತಿಸಾಗರ ಮಹರಾಜರತ್ತ ಹೊರಟಿತ್ತು. ಮಂತ್ರವಾದಿ ಪೂಜ್ಯರ ಅಡಿದಾವರೆಗೆರಗಿ ನಡೆದದ್ದೆಲ್ಲವನ್ನೂ ಸಾಂಗವಾಗಿ ನಿವೇದಿಸಿದ. ಪೂಜ್ಯಶ್ರೀಯವರು ಅವನ ವಿವರಣೆಯನ್ನು ಶಾಂತವಾಗಿ ಕೇಳುತ್ತಾ ಒಂದರೆಕ್ಷಣ ಪಂಚಪರಮೇಷ್ಠಿಗಳನ್ನು ಸ್ಮರಿಸಿದರು.

''ಮಹರಾಜ್! ನನಗೆ ಜೀವನ ಪೂರ್ತಿ ಮಿಥ್ಯಾತ್ವತ್ಯಾಗ ವ್ರತ ದಯಪಾಲಿಸಿ'' ಎಂದು ಅವರ ಪಾದವನ್ನು ಬಿಮ್ಮನೆ ಹಿಡಿದು ಬಿಟ್ಟ ಆ ಮಾಂತ್ರಿಕ ಜೈನ ಬಂಧು. ಆಗ ಅವರು ಹಸನ್ಮುಖರಾಗಿ ಆಶೀರ್ವದಿಸಲು ಪಿಂಚಿಗೆ ಕೈ ಹಚ್ಚಿದರು. ''ಶಾಂತಿ ಸಾಗರ ಮಹರಾಜ್ ಕೀ ಜೈ'' ಎನ್ನುವ ಘೋಷಣೆ ಮತ್ತೊಮ್ಮೆ ಉಗ್ಘಡಿಸಿತು. ಪ್ರತಿಯೊಬ್ಬರೂ ಹರ್ಷದ ಚಿಲುಮೆಯಾಗಿ ಈ ಅಪೂರ್ವ ಪ್ರಸಂಗವನ್ನೇ ಚರ್ಚಿಸುತ್ತಾ ಮನೆಯ ಹಾದಿ ಹಿಡಿದರು. ಕ್ಷಣ ಕಾಲ ಪ್ರಾಪಂಚಿಕ ಲೀಲೆಯ ಸೆಳೆತಕ್ಕೆ ಸಿಕ್ಕಿ ಬಹಿರ್ಮುಖಿಗೊಂಡಿದ್ದ ಈ ದಿವ್ಯ ಚೇತನ ಕೂಡಲೇ ಕಣ್ಮುಚ್ಚಿ ಅನಂತ ಸಿರಿಯ ಆತ್ಮರಾಮನಲ್ಲಿ ಮರೆಯಾಯಿತು. ಸೂರ್ಯಾಸ್ತದೊಡನೆ ಸಂಕೋಚಗೊಳ್ಳುವ ಕುಮುದಿನಿಯಂತೆ ಯೋಗಿಗಳು ತಮ್ಮ ಮನವನ್ನು ಪ್ರಶಸ್ತ ಇಂದ್ರಿಯ ವ್ಯಾಪಾರಗಳಿಂದ ವಿರಮಿಸಿ ಯೋಗ ನಿದ್ರೆಯಲ್ಲಿ ಮುಳುಗುವರು

ಅಂದಿನ ರಾತ್ರಿ ದೀಪಗಳು ಮನೆ ಮನೆಯನ್ನೂ ಬೆಳಗತೊಡಗಿದಂತೆ, ಹಳ್ಳಿಯ ಮುಖ್ಯರು ಗುಂಪು ಗೂಡಿ ಚರ್ಚಿಸುವುದನ್ನು ಹಳ್ಳಿಯ ಹೆಣ್ಣುಮಕ್ಕಳು ಮುಖಕ್ಕೆ ಮುಸುಕೆಳೆದು ಮಿಡುಕದೆ ಕೇಳುತ್ತಿದ್ದರು!

ಜಿನೇಂದ್ರ ವಾಣಿಯಲ್ಲಿ ಮಂತ್ರ ವಿದ್ಯೆಗೂ ಮಹತ್ವದ ಸ್ಥಾನವಿದೆ. ದ್ವಾದಶಾಂಗ ಶ್ರುತದಲ್ಲಿ ವಿದ್ಯಾಸಾಧನೆಯ ವರ್ಣನೆ ಬಂದಿದೆ. ವಿದ್ಯಾನುವಾದ ಎಂಬ ಹತ್ತನೆಯ ಪೂರ್ವದ ಬಗ್ಗೆ ದವಲಾಗ್ರಂಥದ ಟೀಕೆಯಲ್ಲಿ ವಿಸ್ತಾರ ವರ್ಣನೆ ಮಾಡಲಾಗಿದೆ. ಅದರಲ್ಲಿ ಹದಿನೈದು ವಸ್ತುಗತ ಮುನ್ನೂರು ಪ್ರಾಭೃತಗಳ ಬಗ್ಗೆ ಒಂದು ಕೋಟಿ ಲಕ್ಷ ಪದಗಳ ಮೂಲಕ ಅಂಗುಷ್ಠ ಪ್ರಸೇನ ಮುಂತಾದ ಏಳನೂರು ಕನಿಷ್ಠ ದೇವತೆಗಳ ಮತ್ತು ರೋಹಿಣಿಯಾದಿ ಐನೂರು ಮಹಾವಿದ್ಯೆಗಳ ಹಾಗೂ ಅಂತರಿಕ್ಷ ಚಿನ್ಹೆ ಆದಿ ಅಷ್ಟಾಂಗ ಮಹಾ ನಿಮಿತ್ತಗಳ ವಿಸ್ತಾರ ವರ್ಣನೆ ಬಂದಿದೆ. ಈ ಮಂತ್ರ ವಿದ್ಯೆಯಲ್ಲಿ ಪಾರಂಗತನಾಗದೆ ಶ್ರುತಕೇವಲಿತ್ವವೂ ಪ್ರಾಪ್ತಿಯಾಗದು. ಶ್ರುತಕೇವಲಿ ಭದ್ರ ಬಾಹುಸ್ವಾಮಿ ಈ ಮಂತ್ರ ವಿದ್ಯೆಯಲ್ಲಿ ಪಾರಗಾಮಿಗಳಾಗಿದ್ದರು. ಮಂತ್ರಶಾಸ್ತ್ರ ಜೈನಶಾಸ್ತ್ರದಲ್ಲಿ ಇಲ್ಲೇ ಇಲ್ಲ ಎಂದು ಕೆಲವರು ಅಜ್ಞಾನದಿಂದ ಹೇಳುತ್ತಾರೆ. ಜೈನಶಾಸ್ತ್ರದಲ್ಲಿರುವ ಮಂತ್ರ ವಿದ್ಯೆ ಮತ್ತೊಂದೆಡೆ ಸಿಗದು. ಭರತ ಚಕ್ರವರ್ತಿಗೂ ಕೂಡ ಮಂತ್ರ ವಿದ್ಯೆಯ ಆರಾಧನೆಯಿಂದಲೇ ಅನ್ಯರಿಗೆ ದುಃಸಹನಾದ ಮಗದಾಮರನನ್ನು ಸೋಲಿಸಲು ಸಾಧ್ಯವಾಯಿತು. (ಮ. ಪೂ. ಪರ್ವ೨೮)ಈಗ ಮಂತ್ರ ವಿದ್ಯೆಯನ್ನು ತಿಳಿದ ವಿದ್ವಾಂಸರು ಜೈನ ಸಮಾಜದಲ್ಲಿ ಕಾಣುತ್ತಲೇ ಇಲ್ಲ. ಹಿಂದೆ ಜೈನ ಸಮಾಜದಲ್ಲಿ ಸಮರ್ಥ ಮಂತ್ರ ವಿದ್ಯಾಸಾಧಕರಿರುತ್ತಿದ್ದರು. ಆದ್ದರಿಂದಲೇ ರಾಜ ಮಹರಾಜರು ಜೈನ ಧರ್ಮಕ್ಕೆ ತಮ್ಮ ಆಸ್ಥಾನದಲ್ಲಿ ಅಗ್ರಮನ್ನಣೆ ಕೊಟ್ಟು ಗೌರವಿಸುತ್ತಿದ್ದರು. ಆ ಪರಂಪರೆ ನಷ್ಟವಾಗಿ ಹೋಗಿದೆ. ಆದ್ದರಿಂದ ಆ ಸ್ಥಾನಮಾನ ಗೌರವಗಳೂ ಮಾಯವಾಗಿವೆ. ಜೈನ ಧರ್ಮದ ಮಹತ್ವವೇನು ಎನ್ನುವುದನ್ನು ಆಚಾರ್ಯ ಶ್ರೀಯವರು ಮೊಟ್ಟಮೊದಲು ಜಗತ್ತಿಗೆ ಸಾಬೀತು ಮಾಡಿ ತೋರಿಸಿದರು. ಅಂದಿನಿಂದ ಕಳೆದು ಹೋಗಿದ್ದ ಪ್ರತಿಷ್ಠೆ ಗೌರವಗಳು ಸ್ವಲ್ಪ ಸ್ವಲ್ಪವೇ ಬೆಳೆಯತೊಡಗಿದವು.

ಜೈನವಾಡಿಯ ಮಂತ್ರವಾದಿ ಒಂದು ದಿನ ಪೂಜ್ಯ ಶ್ರೀಯವರ ಅಡಿಗಳಿಗೆ ವಂದಿಸಿ ಸ್ವಾಮಿ! ಪಂಚಪರಮೇಷ್ಠಿ ಮಂತ್ರ ಪಠನದಿಂದ ಹಾವಿನ ವಿಷ ಹೋಗುವುದು ಮಾತ್ರವೇ ಅಲ್ಲದೆ ದೊಡ್ಡದೊಡ್ಡ ಭಯಂಕರ ಕಾಯಿಲೆಗಳೂ ವಾಸಿಯಾಗುವ ಅನುಭವ ನನಗೆ ಆಗ ಹತ್ತಿದೆ ಎಂದ,

''ಪಂಚಪರಮೇಷ್ಠಿ ಮಂತ್ರ ಭಕ್ತಿಯಿಂದ ಪಠಿಸುವವರಿಗೆ ಕಲ್ಪವೃಕ್ಷ! ದೃಢತೆ ಮತ್ತು ಶ್ರದ್ಧೆ ಇವೆರಡು ಸಾಧಕರಿಗೆ ಇದ್ದರೆ ತೀರಿತು'' ಎಂದು ಸಂತೃಪ್ತಗೊಂಡು ಹೇಳುತ್ತಾ ಸಾಮಾಯಿಕಕ್ಕೆ ನಡೆದರು.



ಆಚಾರ್ಯ ಸೋಮದೇವ ಸೂರಿಯು ಹೀಗೆ ಹೇಳಿದ್ದಾನೆ.

''ಸರ್ವಜ್ಞ ಜಿನೇಂದ್ರನಿಂದ ಸರ್ವ ವಿದ್ಯೆಗಳೂ ಬೋಧಿಸಲ್ಪಟ್ಟಿವೆ. ಪಂಚ ಪರಮೇಷ್ಠಿಗಳ ಸ್ಮರಣೆ ಮತ್ತು ಆರಾಧನೆ ಅವಿನಾಶಿ ಸುಖ ಮತ್ತು ಸರ್ವವಿದ್ಯೆಗಳ ಪ್ರಾಪ್ತಿಗೆ ಮೂಲವಾಗಿದೆ. ಸರ್ವ ಶಾಸ್ತ್ರಗಳ ಜ್ಞಾನ ಪಡೆದೂ, ಉಗ್ರತಪವನ್ನು ಆಚರಿಸಿಯೂ ಮಹಾಮುನಿಗಳು ಪಂಚಪರಮೇಷ್ಠಿ ಮಂತ್ರವನ್ನು ಭಕ್ತಿಯಿಂದ ಸ್ಮರಿಸುತ್ತಾರೆ. ಯಾರು ತಮ್ಮ ಮನೋಭೂಮಿಯ ಮೇಲೆ ಪಂಚಪರಮೇಷ್ಠಿ ಮಂತ್ರಸ್ಮರಣೆಯ ವರ್ಷಧಾರೆಯನ್ನು ಕರೆಯುತ್ತಾರೋ, ಅಂತವರ ಭಯ, ಕ್ಷುದ್ರೋಪದ್ರವರೋಗ, ಅಪಮೃತ್ಯು ಮುಂತಾದ ಆಪತ್ತುಗಳು ಇಲ್ಲವಾಗುತ್ತವೆ. ಆಚಾರ್ಯ ಜಿನಸೇನರು ಜಿನೇಂದ್ರ ಭಗವಾನರನ್ನು ಮಂತ್ರವೇತ್ತ! ಮಂತ್ರಧಾರಕ! ಮಂತ್ರಮೂಲ! ಎಂದು ಕೊಂಡಾಡಿದ್ದಾರೆ.

## ಪಂಚಪರಮೇಷ್ಠಿ ಮಂತ್ರದ ಶ್ರೇಷ್ಠತೆ

ವಿಷವನ್ನು ನಿರ್ವಿಷ ಮಾಡುವ ಮಣಿ ಮಂತ್ರೌಷಧಿಗಳಿಗಾಗಿ ಈ ಜಗತ್ತು ಹುಡುಕಾಡುತ್ತಿದೆ. ಆದರ ಹುಡುಕಾಟ ಬಾಹ್ಯದಲ್ಲೇ ನಡೆದಿದೆ ಆಶ್ಚರ್ಯ! ಎಂದಿದ್ದಾನೆ ಧನಂಜಯ ಕವಿ. ಆ ಧನಂಜಯ ಕವಿ ತನ್ನ ಮಗನಿಗೆ ಹಾವು ಕಚ್ಚಿದ ವಿಷವನ್ನು ವಿಷಾಪಹಾರ ಸ್ತೋತ್ರ ಸ್ಮರಣೆಯ ಮೂಲಕವೇ ಇಳಿಸಿದ್ದ. ವಿಷಾಪಹಾರ ಸ್ತೋತ್ರ ಜಿನೇಂದ್ರ ಭಕ್ತಿಯ ಬುಗ್ಗೆಯಾಗಿದೆ. ವಾಸ್ತವಿಕವಾಗಿ ಬಾಹ್ಯದಲ್ಲಿ ನಾವು ಕಾಣುವ ಮಣಿಮಂತ್ರ ಔಷಧಗಳೆಲ್ಲವೂ ಜಿನೇಂದ್ರನ ನಾಮಾಂತರಗಳೇ ಅಲ್ಲವೇ? ಎಂದು ಆ ಕವಿ ಪ್ರಶ್ನಿಸುತ್ತಾನೆ. ಕವಿಯ ಭಾವನೆಯಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ. ಜಿನಸ್ವಾಮಿಯನ್ನು ನಂಬಿದವರಿಗೆ ಎಲ್ಲವೂ ಉಂಟು! ಇಹವೂ ಉಂಟು ಪರವೂ ಉಂಟು. ಜಿನೇಂದ್ರನ ರೋಮಾಂಚಿತ ಭಕ್ತಿಯಿಂದ ಆಗದಿರುವುದು ಈ ಜಗತ್ತಿನಲ್ಲೇನಿದೆ? ಅನಂತ ಸುಖದ ಆರಾಮಧಾಮ ಕೈವಲ್ಯವೇ ಕೈವಶವಾಗುವುದೆಂದ ಮೇಲೆ ಇನ್ನುಳಿದ ಸಿದ್ಧಿಯ ಹಂಗೇನು? ಆಚಾರ್ಯ ವೀರಸೇನರೂ ಈ ಮಾತಿಗೆ ದನಿಗೂಡಿಸಿದ್ದಾರೆ.

ಜಿನೇಂದ್ರನನ್ನು ಭಕ್ತಿಯಿಂದ ಗದ್ಗದಿತನಾಗಿ ಸ್ತೋತ್ರ ಮಾಡುವವನ ಭವ ಬಂಧನವೇ ಕಿತ್ತುಹೋಗುತ್ತದೆ. ವಿಘ್ನಗಳು ನಿರ್ಮೂಲವಾಗುತ್ತವೆ. ದುಷ್ಟ ದೇವತೆಗಳು ನಿಲ್ಲದೆ ಓಡಿಹೋಗುತ್ತವೆ. ಇಷ್ಟಾನುಸಾರ ವಸ್ತುಗಳ ಪ್ರಾಪ್ತಿಯಿಂದ ನಿರಂತರ ಲಾಭವಾಗುತ್ತದೆ''

''ನಯನಾನಂದಕರ ನಿನ್ನರೂಪ; ಮಧುರ ಮಂಜುಳ ನಿನ್ನಮಳ ಧ್ವನಿ''ಎಂದು ಭೂಪಾಲಕವಿ ಉಬ್ಬಿ ಸ್ತುತಿಸಿದ್ದಾನೆ. ಹಾಗೆ ಸ್ತುತಿಸುವವರ ಕೀರ್ತಿ ''ಇಳೆಯೊಳಗ್ರಗಣ್ಯ ಜಯವಧು ವಿಳಾಸ ನಿಳಯಂ'' ಆಗಿ ಪ್ರಸರಿಸುವುದೆಂದು

ಹೇಳಿದ್ದಾನೆ. ಜಿನೇಂದ್ರನು ಈ ನಾಡಿಗೆ ಬರುವ ಮುನ್ನವೇ ದೇವರ್ಕಳು ಭಕ್ತಿಯಿಂದ ಪ್ರೇರಿತರಾಗಿ ನವರತ್ನಖಚಿತ ಧಾರಾವರ್ಷವನ್ನು ಸುರಿಯುವರಂತೆ! ಆದರೆ ಯಾರು ಹೃದಯದಲ್ಲಿ ಸಾಕ್ಷಾತ್ ಜಿನೇಂದ್ರನನ್ನು ಸ್ಥಾಪಿಸಿ ಭಕ್ತಿಯಿಂದ ಸ್ತುತಿಸುವರೋ, ನುತಿಸುವರೋ ಮೈಮರೆತು ಧ್ಯಾನಿಸುವರೋ, ಅಂತವರಿಗೆ ಉಂಟಾಗದ ಕಲ್ಯಾಣ ಯಾವುದು? ಜಿನೇಂದ್ರ ಭಕ್ತನೇ ಜಗತ್ತಿನಲ್ಲಿ ಶ್ರೇಷ್ಠ ವ್ಯಕ್ತಿ. ಅವನಲ್ಲಿ ಪ್ರಭುವಿನ ತ್ರಿಜಗನ್ಮಾಂಗಲ್ಯ ಗುಣಗಳು ಪ್ರತಿಫಲಿಸುತ್ತವೆ. ಯಾರು ಜಿನೇಶ್ವರನನ್ನು ಹೃದಯ ಕಮಲದಲ್ಲಿಟ್ಟು ಭಕ್ತಿಯಿಂದ ಸ್ಮರಣೆ ಮಾಡುವರೋ ಅಂತವರ ಸ್ಮರಣೆಯನ್ನು ಜಗತ್ತೇ ಮಾಡತೊಡಗುತ್ತದೆ. ಅಂತವರೇ ಕಾಲಾಂತರದಲ್ಲಿ ಶೌರ್ಯ ಧೈರ್ಯದ ನಿಧಿಯಾಗುತ್ತಾರೆ. ದೇವೇಂದ್ರ ಧರಣೇಂದ್ರ ಚಕ್ರವರ್ತಿತ್ವ ಅಂತಹವರಿಗೇ ಮೀಸಲಿಟ್ಟ ಸ್ಥಾನಗಳು. ಣಮೋ ಅರಹಂತಾಣಂ ಎನ್ನುವುದು ಪಂಚನಮಸ್ಕಾರದಲ್ಲಿ ಮೊದಲನೆಯದು. ಪಂಚನಮಸ್ಕಾರ ಪಠಿಸುವಾಗ ಮೊದಲು ಅರ್ಹಂತರಿಗೆ ವಂಧಿಸುತ್ತೇವೆ! ಈ ಮಂತ್ರ ಸ್ಮರಣೆಯಿಂದ ಚಂದನೆಗೆ ಗೊಂಡಾರಣ್ಯದಲ್ಲಿ ಒದಗಿದ್ದ ಮಹಾಭೀತಿ ನಿವಾರಣೆಯಾಯಿತು. ಅನಂತಮತಿಯೂ ಮಂತ್ರ ಸ್ಮರಣೆಯಿಂದ ಮಹಾವಿಪತ್ತಿಯಿಂದ ಪಾರಾದಳು. ಇಂತಹ ನೂರಾರು, ಸಾವಿರಾರು ಘಟನೆಗಳು ನಡೆದು ಹೋಗಿವೆ.

## ವಿಷ ನಿವಾರಣೆ - ಇನ್ನೊಂದು ಘಟನೆ

ನಾವು ೧೯೫೭ರಲ್ಲಿ ಭೋಜ ಗ್ರಾಮದಲ್ಲಿರುವ ಜಿನ ಮಂದಿರಕ್ಕೆ ಹೋದೆವು. ಅಲ್ಲಿ ಸುಬಲಸಾಗರರೆಂಬ ಒಬ್ಬ ಐಲಕರಿದ್ದರು. ಅವರಿಗೆ ೭೬ ವರ್ಷಗಳಾಗಿದ್ದವು. ಅವರಿಗೆ ವಂದಿಸಿ ಕುಳಿತೆವು. ಅವರ ಪೂರ್ವೇತಿಹಾಸವನ್ನು ಕೇಳಿದೆವು. ಆಗ ಆ ಐಲಕರು ತಾವು ದೀಕ್ಷೆ ತೆಗೆದುಕೊಳ್ಳಬೇಕಾಗಿ ಬಂದ ಸಂದರ್ಭವನ್ನು ಬಹಳ ರಸವತ್ತಾಗಿ ವಿವರಿಸತೊಡಗಿದರು. ನಾವು ಆಸಕ್ತಿಯಿಂದ ಕೇಳಲು ಕುಳಿತೆವು.

''ಏಳು ವರ್ಷಗಳ ಹಿಂದೆ ಒಂದು ಭಯಂಕರ ಸರ್ಪ ನನ್ನನ್ನು ಕಚ್ಚಿತು. ಆಗ ನನ್ನ ಶರೀರದಲ್ಲಿ ಅಪಾರ ವೇದನೆ ಅಗ್ನಿ ಪರ್ವತದಂತೆ ಭಗ್ಗನೆ ಏಳತೊಡಗಿತು. ಬದುಕುವುದು ತೀರಾ ಅಸಂಭವವಾಗಿ ತೋರುತ್ತಿತ್ತು. ಮೇಲಿಂದ ಮೇಲೆ ನೀರಡಿಕೆಯಾಗತೊಡಗಿತು. ಅಂತಹ ದುರ್ನಿವಾರ ಪರಿಸ್ಥಿತಿಯಲ್ಲೂ ನನಗೆ ಒಂದು ಒಳ್ಳೆಯ ಯೋಚನೆ ಪೂರ್ವ ಪುಣ್ಯದಿಂದ ಹೊಳೆಯಿತು. ಈ ಭಯಂಕರ ಆಪತ್ತಿನಿಂದ ಬದುಕುಳಿದರೆ ಜಿನೇಂದ್ರ ಭಗವಾನರ ಸಮಕ್ಷಮ ದೀಕ್ಷೆ ತೆಗೆದುಕೊಳ್ಳುತ್ತೇನೆ. ಇಲ್ಲವಾದರೆ ಸಮಾಧಿಯಿಂದ ಶರೀರ ತ್ಯಜಿಸುತ್ತೇನೆ ಎಂದು ಜಿನೇಶ್ವರನ ಸನ್ನಿಧಿಯಲ್ಲಿ ಪ್ರತಿಜ್ಞೆ ಮಾಡಿದೆ. ನನ್ನ ಪೂರ್ವ ಪುಣ್ಯದಿಂದ ಆಗ ಕ್ಷುಲ್ಲಕ ಸಮಂತ್ರಭದ್ರ ಮಹರಾಜರು, ಕೀರ್ತನಕಾರರಾದ ಜಿನಗೊಂಡ ಪಾಟೀಲ



ಮಂಗೂರ್‌ಕರ್‌ರವರೂ ಅಲ್ಲಿದ್ದರು. ಅವರು ಕೂಡಲೇ ವಿಷಾಪಹಾರಸ್ತೋತ್ರ, ಋಷಿಮಂಡಲ ಸ್ತೋತ್ರಗಳನ್ನು ಪಠಿಸತೊಡಗಿದರು. ಭಗವಂತನಿಗೆ ನನ್ನನ್ನು ಅಭಿಮುಖವಾಗಿ ಕೂಡಿಸಿ ಪಂಚಾಮೃತ ಅಭಿಷೇಕ ಮಾಡತೊಡಗಿದರು. ಎಲ್ಲರು ಜಯಘೋಷ ಮಾಡುತ್ತಿದ್ದರು. ಭಯ, ಕಾತುರ, ಆತಂಕಗಳಿಂದ ಎಲ್ಲರ ಹೃದಯಗಳೂ ವೇಗವಾಗಿ ಬಡಿದುಕೊಳ್ಳುತ್ತಿದ್ದವು. ಆಗ ನನ್ನ ಶರೀರದಲ್ಲಿ ವರ್ಣನಾತೀತ ವೇದನೆಯಾಗತೊಡಗಿತು. ಭವಭಯ ಮಥನಾ ಭವ್ಯ ಜನ ಬಂಧು ಹೇ! ಅನಂತ ಕೃಪಾ ಸಿಂಧು! ಜಿನೇಂದ್ರ ನೀನೇ ದಿಕ್ಕು ಎಂದು ಮನಸ್ಸಿನಲ್ಲಿ ಜಿನೇಶ್ವರನನ್ನು ಮನಸಾರೆ ಸ್ಮರಿಸುತ್ತಾ ಆ ಅಪಾರವೇದನೆಗೆ ಎದೆಗೊಡತೊಡಗಿದೆ. ಹೇಭವ್ಯ ಜನಬಾಂದವಾ! ಸಂಸಾರದ ಅನಂತ ವೇದನೆಯ ಮಹಾ ವಿಷವೇ ನಿನ್ನ ಸ್ಮರಣೆಯಿಂದ ಜಠ್ರನೆ ಜಾರಿ ಹೋಗುವಾಗ, ಪ್ರಭೂ! ಈ ಕ್ಷುಲ್ಲಕ ಹಾವಿನ ವಿಷ ನಿರ್ವಿಷವಾಗುವುದೊಂದು ಘನವೇ ಎಂದು ಪ್ರಾರ್ಥಿಸತೊಡಗಿದೆ. ಅಷ್ಟರಲ್ಲೇ ಅಭಿಷೇಕದ ಶಾಂತಿ ಧಾರೆ ಮುಕ್ತಾಯವಾಯಿತು. ಪುರೋಹಿತರು ಜಿನೇಶ್ವರನ ಪವಿತ್ರ ಜಲೋದಕವನ್ನು ನನ್ನ ಶರೀರದ ಮೇಲೆ ಸುರಿದು ಅಭಿಷೇಕ ಮಾಡಿದರು. ಆ ಮಹಾಮಹಿಮನ ಅಭಿಷೇಕ ಜಲ ನನ್ನ ಶರೀರವನ್ನು ಸ್ಪರ್ಷಮಾಡಿತೋ ಇಲ್ಲವೋ ಮಹಾ ಸಂಕಟದಿಂದ ಬೆಂದು ಹೋಗುತ್ತಿದ್ದ ನಾನು ಶೀತಲ ಜಲರಾಶಿಯಲ್ಲಿ ಮಿಂದು ತಂಪುಗೊಂಡವನಂತೆ ಕ್ಷಣದಲ್ಲೇ ಆ ಮಹಾಜ್ವಾಲೆಯ ಸಂಕಟದಿಂದ ಬಿಡುಗಡೆ ಹೊಂದಿದ್ದೆ. ಪ್ರಭುವಿನ ಅಪಾರ ಮಹಿಮೆಯಿಂದ ನನಗೆ ರೋಮಾಂಚನವಾಗತೊಡಗಿತ್ತು. ಆ ಭಕ್ತಿಯುತ ರೋಮಾಂಚನದೊಡನೆ ಸರ್ಪದ ವಿಷಬಾಧೆಯೂ ಧೂಳೀಪಟವಾಗಿ ಹೋಗಿತ್ತು. ಅದನ್ನು ಸ್ಮರಿಸಿಕೊಂಡರೆ ಈಗಲೂ ನನ್ನ ಶರೀರ ಭಕ್ತಿಯಿಂದ ಕಂಪಿಸತೊಡಗುತ್ತದೆ'' ಎಂದು ಆವೇಶಗೊಂಡು ತುಂಡು ತುಂಡಾಗಿ ಹೇಳತೊಡಗಿದರು. ಆಗ ಅವರ ಮುಖದಲ್ಲಿ ಒಂದು ಹೊಸ ಚೈತನ್ಯ ಪ್ರವಹಿಸುತ್ತಿದ್ದಂತೆ ಕಾಣುತ್ತಿತ್ತು. ಪೂರ್ಣಿಮೆಯ ಚಂದ್ರನಂತೆ ಕಾಂತಿಯುಕ್ತವಾಗಿತ್ತು. ಧನ್ಯ! ಧನ್ಯ! ಎನ್ನುವ ಮಾತು ನನ್ನ ಬಾಯಿಂದ ಅರಿವಿಲ್ಲದೇ ಪುಂಖಾನು ಪುಂಖವಾಗಿ ಹೊರಟವು.

ಇಷ್ಟು ಹೇಳುತ್ತಿದ್ದಂತೆಯೇ ಮಹಾ ವಿಪತ್ತಿನಿಂದ ಪಾರಾಗಿ ಉಳಿದುದ್ದಕ್ಕಾಗಿ ಧೀರ್ಘ ನಿಟ್ಟುಸಿರು ಬಿಡುತ್ತಾ ಮತ್ತೆ ಮೆಲ್ಲಗೆ ಉಸುರಿದರು.

''ನನ್ನ ಪ್ರತಿಜ್ಞೆಯತ್ತ ಮನಸ್ಸು ಹರಿಯಿತು. ವೈರಾಗ್ಯದಿಂದ ಮೈಮನಗಳನ್ನು ತುಂಬಿಕೊಂಡು ಆಚಾರ್ಯ ಪಾಯಸಾಗರರನ್ನು ಬೋರಗಾಂನಲ್ಲಿ ದರ್ಶನಮಾಡಿದೆ. ಅಲ್ಲಿ ದೀಕ್ಷೆಗೊಂಡು ನನ್ನ ಪ್ರತಿಜ್ಞೆ ಪೂರೈಸಿದೆ ಎಂದು ಸಂತೃಪ್ತಿಯ ನಿಟ್ಟುಸಿರನ್ನು ಬಿಟ್ಟರು. ಆ ಬಿಸಿಯುಸಿರು ನಮ್ಮೆಲ್ಲರನ್ನು ಮತ್ತೆ ವಾಸ್ತವಿಕ ಪ್ರಪಂಚಕ್ಕೆ ತಂದಿತು.

## ಗಂಧೋದಕದಿಂದ ವಿಷನಿವಾರಣೆ ಮತ್ತೊಂದು ಘಟನೆ

ಅವರು ಇಷ್ಟು ಹೇಳಿ ಮುಗಿಸುತ್ತಿದ್ದಂತೆಯೇ ನನಗೆ ಮತ್ತೊಂದು ಘಟನೆ ನೆನಪಿಗೆ ಬಂದಿತು. ಅದನ್ನೂ ಸ್ವಲ್ಪ ಇಲ್ಲಿ ಹೇಳಿಬಿಡುತ್ತೇನೆ.

ಅದು ನಡೆದದ್ದು ಬಿಹಾರ್ ಪ್ರಾಂತ್ಯದ ಅಮರಾವತಿ ಜಿಲ್ಲೆಯ ಹಿಬರ್‌ಕೋಡ್ ಗ್ರಾಮದಲ್ಲಿ. ಅಲ್ಲಿಯ ಜೈನ ಮಂದಿರದ ವ್ಯವಸ್ಥಾಪಕ ಪರಮ ಜಿನಭಕ್ತ. ಅವನಿಗೆ ಒಂದು ದಿನ ಒಂದು ಭಾರಿ ಸರ್ಪ ಕಚ್ಚಿ ಬಿಟ್ಟಿತು. ಪಾರ್ಶ್ವನಾಥ ಸ್ವಾಮಿಯಲ್ಲಿ ಅವನಿಗೆ ಅಪೂರ್ವ ಶ್ರದ್ಧೆ ಇತ್ತು. ಅವನ ಪ್ರಾರ್ಥನೆಯಂತೆ ಭಗವಂತನ ಸನಿಹಕ್ಕೆ ಅವನನ್ನು ಒಯ್ಯಲಾಯಿತು. ಭಗವಂತನ ಅಭಿಷೇಕ ಆರಂಭವಾಯಿತು. ಎಲ್ಲರ ಮುಖಗಳೂ ದುಗುಡ ದುಮ್ಮಾನಗಳಿಂದ ಕಳೆಗುಂದಿದ್ದವು. ಭಕ್ತಿಯ ಜಯ ಘೋಷ ಮೊಳಗತೊಡಗಿತು. ಎಲ್ಲರೂ ಭಗವಂತನಲ್ಲಿ ತದೇಕ ಚಿತ್ತದಿಂದ ವಿಷನಿವಾರಣೆ ಆಗಲೆಂದು ಧ್ಯಾನಿಸತೊಡಗಿದರು. ಹಾವಿನ ವಿಷ ವೇಗವಾಗಿ ಏರತೊಡಗಿತು. ಆ ಮಾಲಿಯು ಬೆಂಕಿಯಲ್ಲಿ ಬಿದ್ದ ಹುಳುವಿನಂತೆ ಭಯಂಕರ ವೇದನೆಯಿಂದ ಚಡಪಡಿಸತೊಡಗಿದ ಮಂದಿರದ ಸಮೀಪ ಇರುವ ಅನ್ಯ ಧರ್ಮಿಯರು ಸುದ್ದಿ ತಿಳಿದು ಓಡೋಡಿ ಬಂದು. ಗುಂಪುಗಟ್ಟಿ ನೋಡತೊಡಗಿದರು.

ಈ ಜೈನರು 'ಈ ಬಡಪಾಯಿಯನ್ನು ವ್ಯರ್ಥವಾಗಿ ಕೊಂದುಬಿಡುತ್ತಾರಲ್ಲ. ವ್ಯರ್ಥವಾಗಿ ದೇವರಪೂಜೆ ಮಾಡುತ್ತಾ ಕಾಲಹರಣ ಮಾಡುತ್ತಾರಲ್ಲ. ಯಾವುದಾದರೂ ಮಂತ್ರ ಇಲ್ಲವೆ ಔಷಧಿ ಪ್ರಯೋಗಿಸಬಾರದಿತ್ತೇ. ಛೇ; ಛೇ; ಎಂತಹ ಕೆಲಸಮಾಡುತ್ತಿರುವರಲ್ಲ ಎಂದು ಆತಂಕದಿಂದ ಮಾತಾಡಿಕೊಳ್ಳತೊಡಗಿದರು. ಇನ್ನು ಕೆಲವರು ಅಯ್ಯೋ ಪಾಪ! ಇಂತವರಿಗೂ ಹೀಗಾಗಬಾರದಿತ್ತೆಂದು ಬೇಸರದಿಂದ ಲೊಚಗುಟ್ಟುತ್ತಿದ್ದರು. ಇನ್ನೂ ಕೆಲವರು ತಡೆಯಲಾರದೆ, ನಿಮಗೆ ಸ್ವಲ್ಪವೂ ಬುದ್ಧಿ ಇಲ್ಲ, ವೈದ್ಯರನ್ನು ಕರೆಸಿ ಔಷಧಿ ಕೊಡಿಸಿ. ಅಲ್ಲೊಬ್ಬ ಮಂತ್ರವಾದಿ ಇದ್ದಾನೆ ಅವನನ್ನಾದರೂ ಕರೆಸಿ ಮಂತ್ರ ಹಾಕಿಸಿ ಎಂದು ಕೂಗಿ ಹೇಳುತ್ತಿದ್ದರು. ಜನಗಳ ಈ ಗುಜುಗುಜು ಶಬ್ದದ ನಡುವೆ ಪುರೋಹಿತರು ಮಂತ್ರೋಚ್ಚಾರ ಮಾಡುತ್ತಾ ಅಭಿಷೇಕ ಮಾಡತೊಡಗಿದ್ದರು. ಅಷ್ಟರಲ್ಲಿಯೆ ಅವನಿಗೆ ಒಂದು ಬವಳಿ ಬಂದಿತು. ''ಓಹ್! ಅಲ್ಲಿ ನೋಡಿ! ಇನ್ನೇನು ಹತ್ತಿರ'' ಎಂದು ಗುಸುಗುಸು ಮಾತಾಡತೊಡಗಿದರು. ಇನ್ನರೆಕ್ಷಣದಲ್ಲೇ ಮತ್ತೊಮ್ಮೆ ಬವಳಿ ಬಂದಿತು. ಜನ ಅವನನ್ನು ಒರಗಿಸಿ ಕೂಡಿಸಿಕೊಂಡರು. ಅವನು ತೀವ್ರ ದಾಹದಿಂದ ಬಳಲುತ್ತಿದ್ದ. ಬಾಯಲ್ಲಿ ನೊರೆಯುಕ್ಕುತ್ತಿತ್ತು. ಕಣ್ಣುಗಳು ಕೆಂಪಡರಿದ್ದವು. ಅಷ್ಟರಲ್ಲಿಯೇ ಮೂರನೆ ಬಾರಿ ಬವಳಿ ಬಂದು ಬುಡ ಕಡಿದ ಮರದಂತೆ ತಲೆ ಜೋತು ಬಿಟ್ಟು ನೆಲಕ್ಕೊರಗಿದ. ಮುಗಿಯಿತು ಬಿಡಿ ಅವನ ಕಥೆ. ಸಾಯುವ ಮುನ್ನ ಹೀಗೆಯೇ ಆಗುವುದು ಎಂದು ಜನ ಗೊಂದಲವೆಬ್ಬಿಸಿದರು. ಅಷ್ಟರಲ್ಲಿಯೇ



ಅಭಿಷೇಕ ಮುಗಿದಿತ್ತು. ಅಭಿಷೇಕ ಜಲವನ್ನು ಮೈಗೆ ಹಚ್ಚುತ್ತಾ ಸುರುವಿ ಬಿಟ್ಟರು. ಅಭಿಷೇಕ ಜಲ ಮೈಗೆ ಸ್ಪರ್ಷವಾಗುತ್ತಿದ್ದಂತೆ, ಇಡೀ ಶರೀರವೇ ಅಡಿಯಿಂದ ಮುಡಿಯವರೆಗೆ ಬೆವರತೊಡಗಿತು. ಏನಾಶ್ಚರ್ಯ! ಇನ್ನರೆ ಕ್ಷಣದಲ್ಲೇ ಕಣ್ಣು ಬಿಟ್ಟು ನೋಡತೊಡಗಿದ! ಸುತ್ತ ನೆರೆದವರು ಬೆಪ್ಪಾಗಿ ಹೋದರು. ಪಂಚನಮಸ್ಕಾರ ಘೋಷ ಮಾಡುತ್ತಾ ಪುರೋಹಿತರು ಗಂಧೋದಕವನ್ನು ಅವನ ಶರೀರಕ್ಕೆ ಸವರುತ್ತಲೇ ಇದ್ದರು. ಉಳಿದವರೂ ಅವನ ಬೆನ್ನು ಕಾಲುಗಳನ್ನು ಗಂಧೋದಕದಿಂದ ಸವರುತ್ತಿದ್ದರು. ಇನ್ನು ಸ್ವಲ್ಪ ಸಮಯದಲ್ಲೇ ಆಸರೆ ಇಲ್ಲದೆ ಕೂತು ಬಿಟ್ಟ. ನಂತರ ಮಾತಾಡತೊಡಗಿದ್ದ. ಅವನ ಮುಖದಲ್ಲಿ ಈಗ ವೇದನೆಯ ಛಾಯೆ ಇರಲಿಲ್ಲ. ಸ್ವಲ್ಪ ಈಗ ತಣ್ಣಗಾಯಿತು ನೋಡಿ ಎಂದು ಮೆಲ್ಲನೆ ಹೇಳಿದ! ಈ ಆಶ್ಚರ್ಯವನ್ನು ನೋಡಿ ಅನ್ಯಧರ್ಮೀಯರ ಬಾಯಿ ಕಟ್ಟಿ ಹೋಯಿತು. ಬಿಟ್ಟಕಣ್ಣು ಬಿಟ್ಟ ಬಾಯಿಂದ ಒಬ್ಬರ ಮುಖ ಇನ್ನೊಬ್ಬರು ನೋಡ ತೊಡಗಿದರು. ಅವರಂತೂ ಇಂತಹ ಆಶ್ಚರ್ಯದ ಘಟನೆಯನ್ನೆಂದೂ ಕಂಡವರಲ್ಲ. ಈ ಘಟನೆ ಅವರ ಹೃದಯದಲ್ಲೂ ಆಳವಾದ ಪರಿಣಾಮ ಬೀರಿತು. ಭಕ್ತಿಯ ಬೀಜವನ್ನು ಬಿತ್ತಿತು. ಜಿನೇಂದ್ರನಲ್ಲಿ ಶ್ರದ್ಧೆ ಆಗಲೇ ಹುಟ್ಟಿತು. ಓಹ್! ಎಂತಹ ತಪ್ಪು ಮಾಡುತ್ತಿದ್ದೆವಲ್ಲ. ಎಲ್ಲವೂ ಇಲ್ಲಿಯೇ ಇದೆ. ತಿಳಿಯದೆ ಎಲ್ಲೆಲ್ಲೊ ತಿರುಗುತ್ತಿದ್ದೆವು ಎಂದು ಪಶ್ಚಾತ್ತಾಪಗೊಂಡರು. ಪಾರ್ಶ್ವನಾಥ ಭಗ ವಾನ್‌ಕೀಜೈ ಎನ್ನುವ ಉದ್ಘೋಷ ಎಲ್ಲರಲ್ಲೂ ಭಕ್ತಿಯ ಕಾರಂಜಿಯನ್ನು ಚಿಲ್ಲನೆ ಚಿಮ್ಮುವಂತೆ ಮಾಡಿತು.

ಈಗಲೂ ಆ ಜನ ಭಗವಂತನಲ್ಲಿ ಬಹಳ ಶ್ರದ್ಧೆ ಇಟ್ಟಿದ್ದಾರೆ. ಜಿನೇಶ್ವರನಲ್ಲಿ ಶ್ರದ್ಧೆ ಇಟ್ಟವರಿಗೆ ಜಗತ್ತಿನಲ್ಲಿ ಯಾವ ಆಪತ್ತು ಬಾರದು. ಹಡಗೇರಿದವರಿಗೆ ಜಲಚರಗಳ ಭಯವೆಲ್ಲಿದೆ? ಜಿನೇಶ್ವರನ ಚರಣ ಭಕ್ತಿ ನಮ್ಮನ್ನು ಭಯಂಕರ ಆಪತ್ತಿನಿಂದ ಕೂಡಿದ ಸಂಸಾರವೆಂಬ ಸಾಗರವನ್ನು ಸುಖಪೂರ್ವಕ ದಾಟಿಸುವ ಹಡಗು! ಭಗವಂತನ ಭಕ್ತಿಯಿಂದ ದೂರ ಸರಿದವ ಅಪಾರ ಜಲರಾಶಿಯಲ್ಲಿ ಬಿದ್ದಂತೆ! ಸಮಸ್ತ ದಿಕ್ಕಿನಿಂದಲೂ ಅಪಾಯವೇ ಅಪಾಯ. ಅವನನ್ನು ಯಾರು ಆರಕ್ಷಿಸಬಲ್ಲರು? ಈಗ ಆ ಭಕ್ತಿ ಭಗವಂತನಿಂದ ಸರಿದ ಮನಸ್ಸು ಭೌತಿಕ ಸುಖದ ಪ್ರಾಪ್ತಿಯತ್ತ ಕೇಂದ್ರೀಕೃತವಾಗಿದೆ. ಶ್ರದ್ಧೆ ಇದ್ದರೂ ಇಂದ್ರಿಯ ಭೋಗ, ಹಣದ ಪ್ರಾಪ್ತಿಗಾಗಿ ಮಾತ್ರ! ಭಗವಂತನನ್ನು ಭಜಿಸಿದರೂ, ಸ್ತುತಿಸಿದರೂ ನಿಜವಾದ ಶ್ರದ್ಧೆ ಇಲ್ಲದ ಕಾರಣ ಯಾವ ಫಲವೂ ಸಿಗುತ್ತಿಲ್ಲ. ಅನೇಕ ಮಹಾನ್ ವಿದ್ವಾಂಸರೂ ಶ್ರದ್ಧೆಯ ದೃಷ್ಟಿಯಿಂದ ದಿವಾಳಿಗಳಾಗಿದ್ದಾರೆ.

ಜನಗಳು ಒಬ್ಬರನ್ನು ಇನ್ನೊಬ್ಬರು ಸ್ವಾರ್ಥಕ್ಕಾಗಿ ಹೊಗಳುತ್ತಾರೆ. ಪೂಜಿಸುತ್ತಾರೆ. ದೋಷಗಳನ್ನೇ ಗುಣಗಳೆಂದು ಆದರಿಸುತ್ತಾರೆ. ಆದರೆ ಭವ

ಭವದಲ್ಲೂ ಪರಮ ಹಿತಕಾರಿಯಾದ ಜಿನೇಶ್ವರನನ್ನು ಒಂದರೆಕ್ಷಣವೂ ಧ್ಯಾನಿಸಲಾರರು, ಚಿಂತಿಸಲಾರರು. ಭಕ್ತಿ ಮಾಡಲಾರರು. ಅವರಿಗೆ ಮಿಥ್ಯಾತ್ವದ ಹುಚ್ಚು ನೆತ್ತಿಗೇರಿದೆ!

## ಸಮ್ಯಗ್ದೃಷ್ಟಿ ಮತ್ತು ಮಿಥ್ಯಾಮಂತ್ರ

ಬಾರಾಮತಿಯಲ್ಲಿ ಆಚಾರ್ಯ ಶ್ರೀಯವರೊಡನೆ ವಿರಾಮವಾಗಿ ಹಲವರು ಚರ್ಚೆಯಲ್ಲಿ ಪಾಲ್ಗೊಂಡಿದ್ದರು. ಒಂದು ವಿಚಿತ್ರ ಪ್ರಶ್ನೆ ಆಗ ಎದುರಾಯಿತು.

''ಸಮ್ಯಗ್ದೃಷ್ಟಿ ತನ್ನ ರೋಗ ನಿವಾರಣೆಗೆ ಮಿಥ್ಯಾ ಮಂತ್ರದ ಉಪಯೋಗ ಪಡೆಯಬೇಕೇ ಬೇಡವೇ?''

ಪಕ್ಕದಲ್ಲಿ ಕೂತಿದ್ದ ಒಬ್ಬ ಪಂಡಿತ ಮಧ್ಯೆ ಬಾಯಿ ಹಾಕಿ ಉತ್ತರಿಸತೊಡಗಿದ.

''ಸಮ್ಯಗ್ದೃಷ್ಟಿ ಔಷಧಿ ತೆಗೆದುಕೊಂಡು ತನ್ನ ಕಾಯಿಲೆ ಗುಣಪಡಿಸಿಕೊಳ್ಳುವಂತೆ, ಮಿಥ್ಯಾಮಂತ್ರವನ್ನು ಉಪಯೋಗಿಸುವುದರಲ್ಲಿ ತಪ್ಪೇನು?'' ಈ ಉತ್ತರ ಕೆಲವರಿಗೆ ಸಮಂಜಸವೆನಿಸಲಿಲ್ಲ. ಆಚಾರ್ಯ ಶ್ರೀಯವರನ್ನು ನಿರೀಕ್ಷಿಸತೊಡಗಿದರು. ಆಗ ಅವರು ಹೇಳತೊಡಗಿದರು.

''ಔಷಧಿ ತೆಗೆದುಕೊಳ್ಳುವುದರಲ್ಲಿ ಯಾವ ಭಾದೆಯೂ ಇಲ್ಲ. ಏಕೆಂದರೆ ಔಷಧಿಯಲ್ಲಿ ಸಮ್ಯಕ್ತ್ವವೂ ಇಲ್ಲ. ಮಿಥ್ಯಾತ್ವವೂ ಇಲ್ಲ. ಆದರೆ ಮಿಥ್ಯಾ ದೇವತೆಗಳ ಆರಾಧನಾ ಪೂರ್ವಕ ಸಾಧಿಸಿದ ಮಂತ್ರವನ್ನು ಉಪಯೋಗಿಸುವುದರಿಂದ ಸಮ್ಯಕ್ತ್ವದಲ್ಲಿ ಮಲಿನತೆ ಅವಶ್ಯ ಉಂಟಾಗುತ್ತದೆ.'' ಅವರ ಈ ಉತ್ತರ ಎಲ್ಲರಿಗೂ ಪರಮ ಹರ್ಷವನ್ನುಂಟುಮಾಡಿತು. ಇದೇ ಸತ್ಯ ವಿಚಾರ ಎಂದು ತಲೆದೂಗಿದರು.

ಕುದೇವತೆಗಳು ಅನಾಯತಗಳಾಗಿವೆ. ಅನಾಯತಗಳೆಂದರೆ ಪೂಜೆಗೆ ಅನರ್ಹರು ಎಂದರ್ಥ. ಅವುಗಳ ಮಂತ್ರಪಠನೆಯಲ್ಲಿ ಅವುಗಳಿಗೆ ನಮಸ್ಕಾರ ಮಾಡಬೇಕಾಗುತ್ತದೆ. ಪೂಜಿಸಬೇಕಾಗುತ್ತದೆ. ವಿನಯ ಭಕ್ತಿ ಮಾಡಬೇಕಾಗುತ್ತದೆ. ಹಾಗೆ ಮಾಡದೆ ಅವುಗಳು ಪ್ರಸನ್ನವಾಗುವುದೇ ಇಲ್ಲ. ಆದ್ದರಿಂದ ಸಮ್ಯಕ್ತ್ವದಲ್ಲಿ ದೋಷ ಬಂದೇ ಬರುತ್ತದೆ. ಸಮ್ಯಕ್ತ್ವ ನಷ್ಟಕ್ಕಿಂತ ಇನ್ನೊಂದು ದೊಡ್ಡ ನಷ್ಟ ಜಗತ್ತಿನಲ್ಲಿ ಯಾವುದಿದೆ? ಅಣಿಮಾದಿ ವೃದ್ಧಿಗಳಲ್ಲೂ ಸಮ್ಯಕ್ತ್ವವೇ ದೊಡ್ಡದು ಎಂದಿದ್ದಾರೆ. ದೇವೇಂದ್ರ, ಧರಣೇಂದ್ರ ಚಕ್ರವರ್ತಿತ್ವ ಇವು ಮೂರು ಲೋಕದಲ್ಲೂ ಶ್ರೇಷ್ಠ ಪದವಿಗಳು. ಇವುಗಳಿಗಿಂತಲೂ ಶ್ರೇಷ್ಠ ಸಂಪತ್ತು ಸಮ್ಯಕ್ತ್ವ ಏಕೆಂದರೆ ಅವು ಭೋಗಭಾಗ್ಯಗಳನ್ನು ಕೊಡಬಲ್ಲವೇ ವಿನಃ ಮುಕ್ತಿಯನ್ನು ಕೊಡಲಾರವು. ಸಮ್ಯಕ್ತ್ವ ಸಂಪತ್ತು ಐಹಿಕ ಭೋಗವನ್ನೂ ಒದಗಿಸಿ ಕಟ್ಟಕಡೆಗೆ ಮುಕ್ತಿಯನ್ನು ಕರುಣಿಸುತ್ತದೆ.



ಆದರಿಂದ ಮೂರು ಲೋಕದಲ್ಲೇ ಶ್ರೇಷ್ಠ ಸಂಪತ್ತೆಂದರೆ ಸಮ್ಯಕ್ತ್ವ ಅದರ ನಷ್ಟವಾಯಿತೆಂದರೆ ಇನ್ನುಳಿದುದಾದರೂ ಏನು?

ಸಮ್ಯಕ್ತ್ವವನ್ನು ನಷ್ಟಗೊಳಿಸಿ ಮಿಥ್ಯಾಮಂತ್ರದ ಲಾಭ ಪಡೆಯುವುದೆಂದರೆ ಅಮೂಲ್ಯವಾದ ರತ್ನವನ್ನು ಬೂದಿಗಾಗಿ ಸುಟ್ಟಂತೇ

ಆಚಾರ್ಯಶ್ರೀಯವರು ಸದ್ದುಗದ್ದಲವಿಲ್ಲದೆ ಸಾಮೂಹಿಕ ಆಂದೋಲನವನ್ನೇ ಮಾಡುತ್ತಿದ್ದರೆನ್ನಬೇಕು. ಮಿಥ್ಯಾತ್ವದಂತಹ ಮಹಾ ವಿಷವನ್ನು ಜನಗಳಿಂದ ವಮನಮಾಡಿಸಿ, ಸಮ್ಯಕ್ತ್ವದ ಅಮೃತ ಪಾನ ಮಾಡಿಸಿ ಮಹಾ ಉಪಕಾರ ಮಾಡುತ್ತಿದ್ದರು. ಅವರ ಆ ಮಹಾನ್ ಕಾರ್ಯದ ಮುಂದೆ ಲೌಕಿಕದ ಯಾವುದೇ ದೊಡ್ಡ ಸಾಧನೆಯೂ ಮಹಾಮೇರುವಿನೆದುರು ಒಂದು ಗುಂಡುಕಲ್ಲಿದ್ದಂತೆ!

ಯಾರು ಆತ್ಮನಲ್ಲಿ ಪ್ರವಾಹ ರೂಪದಲ್ಲಿ ಬಂಧಿಸಲ್ಪಟ್ಟಿರುವ ಮಿಥ್ಯಾತ್ವ ಅಂಧಕಾರವನ್ನು ದೂರಮಾಡಿ ಸಮ್ಯಕ್ತ್ವ ಜ್ಯೋತಿಯನ್ನು ಮನಮನದಲ್ಲೂ ಹಚ್ಚಿದರೊ, ಆಗ ಅವರು ಅನಂತ ಉಪಕಾರವನ್ನೇ ಮಾಡಿದಂತಾಯಿತು. ಅನಂತ ಕಲ್ಯಾಣವನ್ನೇ ಮಾಡಿದಂತಾಯಿತು. ಕ್ಷಯರೋಗ ನಿವಾರಣೆಗೆ ವೈದ್ಯ ಔಷಧ ಕೊಡಬಲ್ಲ. ಆದರೆ ಆತ್ಮನಿಗೆ ಅಂಟಿರುವ ಮಿಥ್ಯಾತ್ವ ರೂಪಿ ಕ್ಷಯರೋಗಕ್ಕೆ ಯಾವ ವೈದ್ಯ ಔಷಧಿ ಕೊಡಬಲ್ಲ? ಜಿನೇಂದ್ರವಾಣಿಯಲ್ಲಿ ಪೂರ್ಣಶ್ರದ್ಧೆ ಮತ್ತು ದೃಢಾಚರಣೆಯಿಂದ ಮಾತ್ರ ಆ ರೋಗ ನಿವಾರಣೆಯಾಗಬಲ್ಲದು. ಯಾವ ರೋಗಿಯ ಆಗಲಿ ಔಷಧಿಯಲ್ಲಿ ಕೇವಲ ಶ್ರದ್ಧೆಯನ್ನಷ್ಟೆ ಇಟ್ಟುಕೊಂಡಿದ್ದರೆ ಸಾಲದು. ಅವನು ಔಷಧಿ ಸೇವನೆಯೊಡನೆ ಯುಕ್ತ ಆಹಾರಾದಿಗಳನ್ನು ತೆಗೆದುಕೊಂಡಾಗಲೇ ರೋಗಮುಕ್ತನಾಗುತ್ತಾನೆ. ಅದೇ ರೀತಿ ಭಗವಂತನ ವಾಣಿಯಲ್ಲಿ ಶ್ರದ್ಧೆ ಇಡುವುದರೊಡನೆ ಯಥಾಶಕ್ತಿ ಆಚರಣೆಯೂ ಅತ್ಯಗತ್ಯ. ಹಾಗಲ್ಲದೆ ಬರೀ ಶ್ರದ್ಧೆ ಇಟ್ಟು ವಿಪರೀತಾಚರಣೆಯಲ್ಲಿ ತೊಡಗಿ ಆತ್ಮಕಲ್ಯಾಣದ ಬಗ್ಗೆ ಮಾತಾಡುವವರ ಕಣ್ಣಲ್ಲಿ ಮಿಥ್ಯಾತ್ವರೂಪಿ ಕಾಮಾಲೆ ರೋಗವಿನ್ನೂ ಬಾಕಿ ಉಳಿದಿರುತ್ತದೆ ಎಂದು ತಿಳಿಯಬೇಕು.

ಈಗ ಎಷ್ಟೋ ಜನ ಜಿನೇಂದ್ರನ ಶಾಸನದ ವಂಶದಲ್ಲಿ ಜನ್ಮ ಪಡೆದರೂ ಶ್ವಾನಗಳು ಬಂಗಾರದ ತಳಿಗೆಯಲ್ಲಿ ಭಕ್ಷ್ಯ ಭೋಜ್ಯ ತಿಂದರೂ ಹೊಲಸು ಕಂಡೊಡನೆ ಹಾರುವಂತೆ ಮಿಥ್ಯಾತ್ವದ ಕೊಳಕಿಗೆ ಹಾರಿಹೋಗುತ್ತಾರೆ. ಮತ್ತೆ ಅಂತವರೇ ಸರ್ವಧರ್ಮ ಸಮನ್ವಯದಂತಹ ದೊಡ್ಡ ಮಾತುಗಳನ್ನಾಡುತ್ತಾ ಆತ್ಮ ವಂಚನೆಯಲ್ಲಿ ತೊಡಗಿರುತ್ತಾರೆ. ಕಂಚು ಮತ್ತು ಕಾಂಚನ, ಕಾಗೆ ಮತ್ತು ಕೋಗಿಲೆಗಳಲ್ಲಿ ಸಮಾನತೆಯನ್ನು ಸ್ಥಾಪಿಸ ಹೊರಡುವ ಈ ಏಕಾಂತವಾದಿಗಳು ಹೇಗೆ ತತ್ವಜ್ಞರಾದಾರು? ವ್ಯವಹಾರ ಮೂಢರಾದ ಈ ಪಾಕಂಡಿಗಳು ಭೇದಾಭೇದ ವಿಜ್ಞಾನವನ್ನು ಹೇಗೆ ತಿಳಿದಾರು? ದುರ್ಗಮವಾದ ಜಿನೇಂದ್ರ ವಾಣಿಯ

ಕೋಟೆಯನ್ನು ಹೇಗೆ ಪ್ರವೇಶಿಸಿಯಾರು? ಮುಖ್ಯತಃ ಹೀನ ಸಂಸಾರಿಗಳಿಗೆ ಹಾಲೂ ಹುಳಿಯಾಗುತ್ತದೆ. ಅಮೃತವೂ ವಿಷವಾಗುತ್ತದೆ. ಅಂತವರು ಎಲ್ಲಿ ಹುಟ್ಟಿದರೇನು? ಎಷ್ಟಿದ್ದರೇನು?

ವಿಶ್ವದ ಜೀವಿಗಳನ್ನು ಉದ್ಧರಿಸಬಲ್ಲ ವೀತರಾಗ ಪೂರ್ಣ ಸ್ಯಾದ್ವಾದ ಶಾಸನವನ್ನು ವಿಷಯ ಕಷಾಯಗಳ ಆರಾಧಕರಾದ ಮದೋನ್ಮತ್ತ ಜನಗಳು ಏಕಾಂತ ದುರಾಗ್ರಹದಿಂದ ತ್ಯಜಿಸಿದರೆ ಆಗುವ ನಷ್ಟ ಯಾರಿಗೆ? ಅಂತವರನ್ನು ತತ್ವಜ್ಞರೆಂದು ಕರೆಯುವುದಾದರೂ ಹೇಗೆ? ಲೋಕ ವ್ಯವಹಾರದ ದೃಷ್ಟಿಯಿಂದ ತತ್ವಜ್ಞಾನದ ಯುಕ್ತಾಯುಕ್ತವನ್ನು ವಿಮರ್ಶಿಸಲೆತ್ನಿಸುವವರಿಗೆ ಸಮ್ಯಕ್ತ್ವ ಸೂರ್ಯ ಸದಾ ಅಸ್ತನಾಗಿಯೇ ಇರುತ್ತಾನೆ.

ಸಮ್ಯಕ್ತ್ವ ಅದ್ಭುತ ಸಾಮರ್ಥ್ಯದ ಜನನಿ! ಸಮ್ಯಕ್ತ್ವದ ಮಹಿಮೆಯಿಂದ ಸಂಸಾರದ ಮಹಾ ಸಂಕಟಗಳು ನಿರ್ನಾಮವಾಗಿ ಬಿಡುತ್ತವೆ. ಸೂರ್ಯನ ಅಭಾವದಿಂದ ಕತ್ತಲೆ ವಿಜೃಂಭಿಸುವಂತೆ, ಸಮ್ಯಕ್ತ್ವದ ಅಭಾವದಿಂದಲೇ ಅನಂತ ಕೋಟಲೆಯ ಸಂಕೋಲೆ ಬಿಗಿದಿದೆ. ಸಮ್ಯಕ್ತ್ವ ಸೂರ್ಯನು ಥಳಥಳಿಸುತ್ತಾ ಉದಯಿಸಿದನೆಂದರೆ ಜಗತ್ತಿನ ಮಾಯಾಮಯ ಬದುಕಿನ ಕತ್ತಲೆ ಓಡಿ ಹೋಗಿ ಆತ್ಮ ಸುಪ್ರಬುದ್ಧನಾಗುತ್ತಾನೆ. ಭೂತ ಭವಿಷತ್ ವರ್ತಮಾನಗಳ ಜೀವಿಯ ಸಕಲ ಹೋರಾಟದ ಕಾರಣಗಳು ತಟ್ಟನೆ ತಿಳಿಯತೊಡಗುತ್ತವೆ. ಅನಂತ ಕಾಲದಿಂದಲೂ ಸಂಸಾರದ ಅನಂತ ಯಾತನೆಯಿಂದ ಬಿಡುಗಡೆ ಮಾಡುವ ಯಾವ ಮಾರ್ಗಕ್ಕಾಗಿ ಈ ಜೀವ ಹುಡುಕಾಡುತ್ತಿತ್ತೋ ಆ ಪ್ರಕಾಶಮಾನವಾದ ಮುಕ್ತಿಮಾರ್ಗ ತಟ್ಟನೆ ಹೊಳೆಯುತ್ತದೆ. ಸಮ್ಯಕ್ತ್ವ ಜ್ಯೋತಿ ಉದಯಿಸಿತೆಂದರೆ ಅನಂತ ಶಾಂತಿಯ ಆರಾಮಧಾಮ, ಮುಕ್ತಿ, ಹತ್ತಿರದಲ್ಲೇ ಕೈಬೀಸಿ ಕರೆಯುತ್ತದೆ. ಕ್ಷಣಕ್ಷಣಕ್ಕೂ, ಹೆಜ್ಜೆ ಹೆಜ್ಜೆಗೂ ದುಃಖವನ್ನುಂಟುಮಾಡುತ್ತಿದ್ದ ಎಲ್ಲಾ ವಸ್ತುಗಳು ಸಮ್ಯಕ್ತ್ವದ ಮಹಿಮೆಯಿಂದ ಪರಮಹಿತಕಾರಿಗಳಾಗುತ್ತವೆ. ನಿಂದಿಸುತ್ತಿದ್ದವರು ವಂದಿಸುತ್ತಾರೆ. ಕಡೆಗಣಿಸಿ ಕಂಡವರು, ಅಡಿಗಡಿಗೆ ಸ್ಮರಿಸುತ್ತಾರೆ. ದೇವತೆಗಳೂ ಕಿಂಕರರಾಗುತ್ತಾರೆ. ಜಗತ್ತಿನ ಎಲ್ಲಾ ಶ್ರೇಷ್ಠ ಭೋಗ ವಸ್ತುಗಳು ಸಮ್ಯಕ್ತ್ವದ ಮಹಿಮೆಯಿಂದ ಪ್ರಾಪ್ತಿಯಾಗುತ್ತವೆ. ಎಲ್ಲಾ ಕಲೆಗಳಲ್ಲೂ ಪಟುತ್ವ ಉಂಟಾಗುತ್ತದೆ. ಜಗತ್ತೇ ಸಮ್ಯಗ್ದೃಷ್ಟಿ ಮಹಾನುಭಾವನ ಸೌಮ್ಯ ಮುಖ ಚಂದ್ರಿಕೆಯನ್ನು ದರ್ಶನ ಮಾಡಿ ಪಾವನವಾಗಲು ಹಾತೊರೆಯುತ್ತದೆ. ಸಮ್ಯಕ್ತ್ವ ಎನ್ನುವ ಮಾತೇ ಚೇತೋಹಾರಿಯಾದುದು! ಜಢದಲ್ಲಿ ಹೂತಿದ್ದ ಜಡಮಯ ಜೀವನವನ್ನು ಚೇತನಗೊಳಿಸಿ ಚಿನ್ಮಯವನ್ನಾಗಿ ಮಾಡುವ ಸಂಜೀವಿನಿ ಸಮ್ಯಕ್ತ್ವ! ಅಮರ ಸುಖದ ಅರವಟ್ಟಿಗೆ! ಮುಕ್ತಿ ಕನ್ಯಾಕರಾಗ್ರಹಣದ ಮಂಗಳದ ಮುಂಬೆಳಕು! ಮುಕ್ತಿ ಕನ್ನೆಯ ವಕ್ಷಸ್ಥಳವನ್ನು ಜಗಮಗಿಸುವ ಸುಂದರ ಹಾರ!



ಆಚಾರ್ಯ ಸಮಂತ್ರ ಭದ್ರಾಚಾರ್ಯರು ಒಂದು ಸುಂದರವಾದ ಮಾತು ಹೇಳಿದ್ದಾರೆ.

''ಈ ಜೀವಕ್ಕೆ ತ್ರಿಕಾಲದಲ್ಲೂ, ತ್ರಿಲೋಕದಲ್ಲೂ ಸಮ್ಯಕ್ತ್ವ ಸಮಾನ ಹಿತಕಾರಿ ಯಾವುದೂ ಇಲ್ಲ. ಮಿಥ್ಯಾತ್ವ ಸಮಾನ ಶತ್ರು ಯಾವುದೂ ಇಲ್ಲ.''

ಈ ಮಾತು ಜೈನ ಧರ್ಮದ ಸಾರ. ಸಕಲ ಶಾಸ್ತ್ರಗಳ ಸಾರ. ಈ ಮಾತುಗಳನ್ನು ಚೆನ್ನಾಗಿ ತಿಳಿದುಕೊಂಡರೆ ಎಲ್ಲವನ್ನು ತಿಳಿದುಕೊಂಡಂತೆಯೇ!

ಸಮ್ಯಕ್ತ್ವದ ಪ್ರಾಣವೆಂದರೆ ವೀತರಾಗಿಯೂ ಪರಮಹಿತೋಪದೇಶಿಯೂ ಆದ ಜಿನೇಂದ್ರನಲ್ಲಿ ಇಡುವ ಅಚಲ ಶ್ರದ್ಧೆ ಮತ್ತು ಭಕ್ತಿ! ನಿಗ್ರಂಥಗುರು ಹಾಗೂ ಜಿನವಾಣಿಯಲ್ಲಿ ಇಡುವ ಅಪಾರ ವಿಶ್ವಾಸ. ಇಂತಹ ಅದ್ಭುತ ವಿಚಾರಗಳನ್ನು ಹೃದಯದಲ್ಲಿ ಮೂಡಿಸಿಕೊಂಡು ಪೂಜ್ಯಶ್ರೀಯವರು ಮಿಥ್ಯಾತ್ವದ ವಿರುದ್ಧ ದೀರ್ಘ ಸಮರವನ್ನೇ ಸಾರಿದರು. ಅಪಯಶಸ್ಸನ್ನು ಅವರು ಕನಸಿನಲ್ಲೂ ಕಾಣಲಿಲ್ಲ. ಸ್ಮರಿಸಿದ ಕಾರ್ಯ ಸಮ್ಯಕ್ತ್ವದ ಮಹಿಮೆಯಿಂದ ಕ್ಷಣದಲ್ಲೇ ನೆರವೇರುತ್ತಿತ್ತು. ಮಿಥ್ಯಾತ್ವದ ಅಂಧಕಾರದಲ್ಲಿ ಕೊಳೆಯುತ್ತಿರುವ ಅನಂತ ಜೀವಿಗಳನ್ನು ಬಿಡಿಸುವ ಕೋಮಲ ಭಾವ ಅವರಲ್ಲಿ ಸದಾ ಮಿಡಿಯುತ್ತಿತ್ತು. ಆ ಮಹಾನ್ ಕಾರ್ಯಕ್ಕಾಗಿ ಅವರ ಪವಿತ್ರ ಕ್ಷಣಗಳು ವ್ಯಯವಾಗುತ್ತಿದ್ದವು. ಈ ಕಾರಣದಿಂದಲೇ ತೀವ್ರ ಅಡ್ಡಿಯನ್ನುಂಟುಮಾಡುವ ಗೃಹವಾಸ ತ್ಯಜಿಸಲು ಮನಸ್ಸು ಸದಾ ಹಾತೊರೆಯುತ್ತಿತ್ತು. ಅವರು ಗೃಹವಾಸದಲ್ಲಿದ್ದಾಗ ಗೃಹಸ್ಥರಂತಿದ್ದರೂ ಎಂದೋ ಗೃಹವಾಸ ಮುಕ್ತರಂತಿದ್ದರು. ಸರಾಗಿಗಳಾಗಿದ್ದರೂ ವೀತರಾಗಿಗಳಂತೇ ಇದ್ದರು. ಮೋಹಿಯಂತೆ ಇದ್ದರೂ ನಿರ್ಮೋಹಿಯಾಗಿಯೇ ಇದ್ದರು. ಅವರ ಜೀವನದ ಪ್ರತಿಕ್ಷಣಗಳೂ ಮುಕ್ತಿ ಪ್ರತೀಕ್ಷೆಯ ಮಹಾತಪಸ್ಸಾಗಿತ್ತು. ಮೋಕ್ಷ ಮಾರ್ಗದ ಅವರ ಹೆಜ್ಜೆ ಹುಟ್ಟಿನಿಂದಲೇ ಆರಂಭಗೊಂಡಿತ್ತು. ಸೂರ್ಯ ಮೇಲೇರಿದಂತೆ ತನ್ನ ಪ್ರತಾಪವನ್ನು ಹೆಚ್ಚಿಸುವಂತೆ ಅವರು ದಿನದಿಂದ ದಿನಕ್ಕೆ ತಮ್ಮ ವೈರಾಗ್ಯದ ವೇಗವನ್ನು ಹೆಚ್ಚಿಸುತ್ತಾ ಸಮ್ಯಕ್ತ್ವ ಸೂರ್ಯನಾಗಿ ಮೇಲೇರಿ ಬಂದರು. ಅವರ ತಪೋಮಯ ಜೀವನದಲ್ಲಿ ಕಠಿಣ ಮತ್ತು ಅಸಂಭವ ಕಾರ್ಯಗಳು ಸುಲಭವಾಗಿ ಬಿಡುತ್ತಿದ್ದವು. ಜೈನವಾಡಿಯನ್ನು ನಿಜವಾದ ಅರ್ಥದಲ್ಲಿ ಜಿನವಾಣಿಯ ನಾಡಿಯನ್ನಾಗಿ ಮಾಡಿದ ಮಹಾ ಸಾಧಕ ಆಚಾರ್ಯ ಶಾಂತಿ ಸಾಗರರು! ಈಗ ಅಲ್ಲಿ ಕುದೇವತೆಗಳ ಆರಾಧನೆಯ ಸುಳಿವೇ ಇಲ್ಲ! ಸೂರ್ಯ ಹೋದತ್ತ ಬೆಳಗು ಎನ್ನುವಂತೆ ಈ ಸಮ್ಯಕ್ತ್ವ ಸೂರ್ಯ ವಿಹರಿಸಿದತ್ತ ಮಿಥ್ಯಾತ್ವ ಅಂಧಕಾರ ನೀಗಿ ಸಮ್ಯಕ್ತ್ವ ಜ್ಯೋತಿ ಝಗಝಗಿಸುತ್ತಿತ್ತು.

## ನಿರ್ದೋಷ ಆಹಾರ ಕ್ರಮ

ಬಾಲ್ಯದಿಂದಲೂ ಅವರು ಮಹಾನ್ ಸ್ವಾಧ್ಯಾಯ ಶೀಲ ವ್ಯಕ್ತಿಯಾಗಿದ್ದರು. ಸತತ ಅಧ್ಯಯನ ಮನನ ಮತ್ತು ಚಿಂತನದಿಂದ ಧರ್ಮ ಸೂಕ್ಷ್ಮವನ್ನು ಸ್ವಯಂ ತಿಳಿಯಬಲ್ಲವರಾಗಿದ್ದರು. ಆದ್ದರಿಂದ ಅಂದಿನ ತ್ಯಾಗಿಗಳ ದೋಷಪೂರ್ಣ ಆಹಾರಕ್ರಮ ಅವರಿಗೆ ಸರಿಬೀಳಲಿಲ್ಲ. ಆಗಿನ ಆಹಾರ ಕ್ರಮದ ಬಗ್ಗೆ ಅವರೇ ಹೇಳಿದರು.

''ಉಪಾಧ್ಯಾಯನ ಮೂಲಕ ಪೂರ್ವನಿಶ್ಚಿತ ಗೃಹದಲ್ಲಿ ಆಹಾರ ಸ್ವೀಕರಿಸುವುದು ಯೋಗ್ಯವಲ್ಲ ಎಂದು ನಾವು ಯೋಚಿಸಿದೆವು. ಆದ್ದರಿಂದ ಅಂತಹ ಸದೋಷ ಆಹಾರ ಸ್ವೀಕರಿಸಲು ನಾವು ನಿರಾಕರಿಸಿದೆವು. ಆದ್ದರಿಂದ ನಮ್ಮ ಮಾರ್ಗದಲ್ಲಿ ಅಪರಿಮಿತ ಕಷ್ಟಗಳು ಬಂದವು. ತ್ಯಾಗಿಗಳು ಪೂರ್ವ ನಿಶ್ಚಿತ ಗೃಹಗಳಲ್ಲಿ ಆಹಾರ ಸ್ವೀಕರಿಸಬಾರದೆಂದು ಅವರಿಗೆ ತಿಳಿಯುತ್ತಿರಲಿಲ್ಲ. ಆದ್ದರಿಂದ ಶ್ರಾವಕರು ತ್ಯಾಗಿಗಳು ಆಹಾರಕ್ಕೆ ಹೊರಟಾಗ ಅವರನ್ನು ತಡೆಯಬೇಕು''

ಅಂದು ಜನಗಳಿಗೆ ಆಹಾರವನ್ನು ಆಗಮೋಕ್ತರೀತಿ ಕೊಡುವ ವಿಧಾನ ತಿಳಿದಿರಲಿಲ್ಲ. ಸಾಮಾನ್ಯವಾಗಿ ಎಲ್ಲಾ ತ್ಯಾಗಿಗಳ ಆಹಾರ ಉಪಾಧ್ಯಾಯನ ಮೂಲಕ ಪೂರ್ವನಿಶ್ಚಿತ ಗೃಹದಲ್ಲೇ ಆಗುತ್ತಿತ್ತು. ಇದನ್ನೆಲ್ಲಾ ಗಮನಿಸಿದ ಆಚಾರ್ಯಶ್ರೀಯವರು ಆಗಮೋಕ್ತ ಚರ್ಯೆಯನ್ನು ಪುನಃ ಅನುಷ್ಠಾನಕ್ಕೆ ತರಲು ಪ್ರತಿಜ್ಞೆ ಮಾಡಿದರು. ಕಾಲ ದೋಷದಿಂದ ದೋಷಪೂರ್ಣವಾಗಿದ್ದ ಮುಕ್ತಿಮಾರ್ಗಕ್ಕೆ ಕಾಯಕಲ್ಪ ಮಾಡಲು ಮೊದಲಾದರು.

ಈ ಪ್ರತಿಜ್ಞೆಯ ಫಲವಾಗಿ ಅವರು ಹಲವಾರು ದಿನ ಉಪವಾಸ ಬೀಳಬೇಕಾಯಿತು. ಆದರೂ ಧೈರ್ಯಗೆಡಲಿಲ್ಲ. ಆದಿನಾಥ ಭಗವಾನರು ಪ್ರಥಮ ಚರಿಗೆಗಾಗಿ ಹೊರಟಾಗ ಉಂಟಾದ ಪರಿಸ್ಥಿತಿಯೇ ಆಚಾರ್ಯ ಶಾಂತಿಸಾಗರರಿಗೂ ಉಂಟಾಯಿತೆನ್ನಬೇಕು. ಅದು ಚತುರ್ಥಕಾಲ. ಇದು ಪಂಚಮಕಾಲ. ಆದಿನಾಥ ಭಗವಾನರ ಶರೀರ ಮಹಾ ಬಲಿಷ್ಠವಾಗಿತ್ತು. ವರ್ಷಗಟ್ಟಲೆ ಆಹಾರವಿಲ್ಲದಿದ್ದರೂ ಸಹಿಸಬಲ್ಲವರಾಗಿದ್ದರು. ಆದರೆ ಆಚಾರ್ಯ ಶಾಂತಿಸಾಗರರ ಶರೀರವೇನು ಅಷ್ಟು ಬಲಿಷ್ಠವೇ? ಖಂಡಿತಾ ಆಗಿರಲಿಲ್ಲ. ಆದರೆ ಅವರ ಮನಸ್ಸು ಮಾತ್ರ ಮಹಾ ಬಲಿಷ್ಠವಾಗಿತ್ತು. ಎಂತಹ ಪರಿಸ್ಥಿತಿ ಬಂದರೂ ವಿಚಲಿತರಾಗುತ್ತಿರಲಿಲ್ಲ. ಜನಗಳು ಚರಿಗೆಗೆ ಹೊರಟ ಶಾಂತಿಸಾಗರರನ್ನು ಅತಿಥಿಗಳನ್ನು ಕರೆಯುವಂತೆ ಕರೆಯತೊಡಗಿದರು. ಪ್ರತಿಗ್ರಹಣ, ಉಚ್ಚಾಸನಾದಿ ಕ್ರಮಗಳಾವುವು ಗೊತ್ತೇ ಇರಲಿಲ್ಲ. ನಿರಶನ ವ್ರತಬದ್ಧರಾಗಿ ಆ ದಿನ ನಿರಾಹಾರಿಗಳಾಗಿಯೇ ಶಾಂತಿಯಿಂದ ಕಳೆಯುತ್ತಿದ್ದರು. ಈ ರೀತಿ ಉಪವಾಸದ ಮೇಲೆ ಉಪವಾಸ ಬೀಳಬೇಕಾಗುತ್ತಿತ್ತು. ಆಗ ಉಪಾಧ್ಯಾಯನೂ ಇವರ ಪ್ರತಿಕೂಲವಾಗಿಬಿಟ್ಟಿದ್ದ. ಏಕೆಂದರೆ ತ್ಯಾಗಿಗಳ ಆಹಾರಕ್ಕೆ ಗೃಹಗಳನ್ನು ನಿಶ್ಚಿತಗೊಳಿಸುವುದು ಅವನ ಕೈಯ್ಯಲ್ಲಿತ್ತು. ತ್ಯಾಗಿಗಳ



ಆಹಾರದ ನಂತರ ಆ ಉಪಾಧ್ಯಾಯನಿಗೂ ಅಲ್ಲಿ ಭೂರಿ ಭೋಜನ ಮಾಡಿಸಬೇಕಾಗಿತ್ತು. ಆಚಾರ್ಯ ಶ್ರೀಯವರ ಕ್ರಮದಿಂದ ಅವನಿಗೆ ಪುಷ್ಕಳ ಭೋಜನದ ಅವಕಾಶ ತಪ್ಪಿ ಹೋಗುತ್ತಿತ್ತು.

ಇವರ ಚರ್ಯೆ ಬಗ್ಗೆ ಅನೇಕ ತ್ಯಾಗಿಗಳಲ್ಲೂ ಬಿಸಿಬಿಸಿ ಚರ್ಚೆಗೆ ಇಂಬುಕೊಟ್ಟಿತು. ಹೀಗೆ ನಿಷ್ಠುರವಾಗಿ ವರ್ತಿಸಿದರೆ ಕೆಲಸ ನಡೆಯದು ಎಂದು ಬಹಿರಂಗವಾಗಿ ಹೇಳತೊಡಗಿದರು. ಇದು ಪಂಚಮಕಾಲ ಕಾಲಸ್ಥಿತಿಯನ್ನರಿತು ನಡೆಯುವುದು ಒಳ್ಳೆಯದು ಎಂದು ಹೇಳತೊಡಗಿದರು. ಈ ಎಲ್ಲಾ ಪ್ರತಿಕ್ರೀಯೆಗಳನ್ನೂ ಸಾವಧಾನ ಪೂರ್ವಕ ಸ್ವೀಕರಿಸಿದ ಅವರು.

''ಒಂದು ವೇಳೆ ಶಾಸ್ತ್ರಾನುಸಾರ ಜೀವನ ನಡೆಸಲಾಗದಿದ್ದರೆ ಉಪವಾಸ ಮಾಡುತ್ತಾ ಸಮಾಧಿ ಮರಣ ಸ್ವೀಕರಿಸುತ್ತೇವೆ. ಆದರೆ ಶಾಸ್ತ್ರಾಜ್ಞೆಯನ್ನು ಎಂದೂ ಉಲ್ಲಂಘಿಸಲಾರೆವು'' ಎಂದು ಘೋಷಿಸಿದರು.

ಉಪಾಧ್ಯಾಯ ತನ್ನ ರಸನೇಂದ್ರಿಯ ಲಾಲಸೆಯಿಂದ ಶ್ರಾವಕರನ್ನು ತಪ್ಪು ಹೆಜ್ಜೆಗೆ ಎಳೆದಿದ್ದ. ಯಾರು ಏನೇ ಹೇಳಲಿ, ಏನೇ ಮಾತಾಡಲಿ ಅದರ ಬಗ್ಗೆ ಅವರಿಗೆ ಸ್ವಲ್ಪವೂ ವಿಕಲ್ಪವಿರಲಿಲ್ಲ. ಚಿಂತೆ ಇದ್ದುದು ಆಗಮೋಕ್ತ ಚರ್ಯೆಯನ್ನು ಪುನರುಜ್ಜೀವನ ಗೊಳಿಸುವುದರತ್ತ. ಅದು ಮುನಿಪರಂಪರೆಯ ರಕ್ಷಣೆಯತ್ತ ಮಹಾನ್ ಪ್ರತಿಜ್ಞೆಯಾಗಿತ್ತು. ಜಿನಧರ್ಮದ ರಕ್ಷಣೆಯತ್ತ ಒಂದು ದೊಡ್ಡ ಹೆಜ್ಜೆಯಾಗಿತ್ತು. ಆಗಮ ವಿರುದ್ಧ ಜೀವನವೆಂದರೆ ಸಾಕ್ಷಾತ್ ಮೃತ್ಯು ಎಂದು ಅವರು ಭಾವಿಸುತ್ತಿದ್ದರು.

ಈ ಪರಿಸ್ಥಿತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ನಾನು ಪ್ರಶ್ನಿಸಿದೆ.

''ಮಹರಾಜ್! ಅಂತಹ ಪರಿಸ್ಥಿತಿಯಲ್ಲಿ ಜನಗಳ ಅಜ್ಞಾನದ ಬಗ್ಗೆ ನಿಮಗೆ ರೋಷ ಭಾವನೆ ಏನಾದರೂ ಉತ್ಪನ್ನವಾಗಿರಬಹುದೇ?'' ಹಾಗಾಗುವುದು ಸ್ವಾಭಾವಿಕ.

ಆಚಾರ್ಯ ಶ್ರೀ: ''ನಾವೆಂದೂ ಅಂತಹ ರೋಷ ಭಾವನೆಯನ್ನು ಯಾರ ಮೇಲೂ ಮಾಡಲಿಲ್ಲ. ನಮ್ಮ ಪೂರ್ವಾರ್ಜಿತ ಕರ್ಮ ತೀವ್ರವಾಗಿ ಉದಯವಾಗಿರುವುದು ಎಂದಿಷ್ಟೇ ವಿಚಾರಿಸುತ್ತಿದ್ದೆವು. ಅಂತಹ ಸಮಯದಲ್ಲಿ ನಮ್ಮ ಪರಿಣಾಮ ಮತ್ತಷ್ಟು ಶುದ್ಧಿಯಾಗುತ್ತಿತ್ತು. ನಾವು ಪೂರ್ವದಲ್ಲಿ ಬಂಧಿಸಿಕೊಂಡಿರುವ ಕರ್ಮವನ್ನು ಅದರ ಉದಯಕಾಲದಲ್ಲಿ ಸಮತಾಪೂರ್ವಕ ಸಹನೆ ಮಾಡತಕ್ಕದ್ದು''

ಈ ಮಾತುಗಳು ಅವರ ಅದ್ಭುತ ತಪಶ್ಚರ್ಯೆಯ ದ್ಯೋತಕವಾಗಿದ್ದವು. ರಸನೇಂದ್ರಿಯ ವಿಜಯಿಗೆ ಮಾತ್ರ ಇಂತಹ ಎದೆಗಾರಿಕೆ ಸಾಧ್ಯವಾಗುತ್ತದೆ.

ಉಪವಾಸದ ಮೇಲೆ ಉಪವಾಸ ಬೀಳುವಂತಹ ಉತ್ಕಟ ಪರಿಸ್ಥಿತಿಯಲ್ಲೂ ಶರೀರ ಸ್ಥಿತಿಯ ಕಡೆ ತಿಲ ಮಾತ್ರವೂ ಗಮನ ಕೊಡದೆ ಧರ್ಮ ರಕ್ಷಣೆಯತ್ತ ಗಮನ ಕೊಡುವವರು ಮಹಾಪುರುಷರು. ಅವರ ಧೈರ್ಯ ಸ್ಥೈರ್ಯ ಅದ್ವಿತೀಯ. ಮುಂದಿನ ತ್ಯಾಗಿ ಪೀಳಿಗೆಗೆ ಮಾರ್ಗದರ್ಶಕವಾಗಿದೆ.

## ಕ್ರಾಂತಿಕಾರಿ ಧಾರ್ಮಿಕ ಸಂತ

ಈ ರೀತಿ ಎರಡು ಮೂರು ವರ್ಷಗಳ ಪರ್ಯಂತ ಅವರ್ಣನೀಯ ಎಡರುತೊಡರುಗಳನ್ನು ಎದುರಿಸುತ್ತಾ ಆಗಮೋಕ್ತ ಮಾರ್ಗದಲ್ಲಿ ತಮ್ಮ ಚಾರಿತ್ರವನ್ನು ಮತ್ತಷ್ಟು ಬಲಪಡಿಸಿಕೊಳ್ಳುತ್ತಾ ಆತ್ಮಶಕ್ತಿಯನ್ನು ಬೆಳೆಸಿದರು. ಎಂತಹ ದುರ್ನಿವಾರ ಪರಿಸ್ಥಿತಿ ಬಂದರೂ ಅವರು ಶಾಂತಿಯ ಸಾಗರವೇ ಆಗಿದ್ದರೇ ಹೊರತು ಎಂದೂ ಜ್ವಾಲಾಮುಖಿಯಾಗಲಿಲ್ಲ. ಕ್ರಮೇಣ ಜನಗಳು ಅವರ ವಿಧಿ ವಿಧಾನಗಳ ಬಗ್ಗೆ ಯೋಚನೆ ಹರಿಸತೊಡಗಿದರು. ಅವರ ನಡೆ-ನುಡಿ, ಆಚಾರ-ವಿಚಾರ, ಧ್ಯಾನ-ಅಧ್ಯಯನ ಜನಗಳ ಮೇಲೆ ತೀಕ್ಷ್ಣ ಪರಿಣಾಮ ಬೀರತೊಡಗಿದವು. ಜನಗಳು ನಿರ್ದೋಷ ಆಹಾರ ಕ್ರಮವನ್ನು ಅನುಸರಿಸತೊಡಗಿದರು. ತಮ್ಮ ಆಗಮನಿಷ್ಠ ತಪೋಸಾಮರ್ಥ್ಯದಿಂದ ಜನಗಳ ಮನಸ್ಸಿನಲ್ಲಿ ತೀಕ್ಷ್ಣ ಪ್ರಭಾವ ಬೀರಿದರು. ತೊಡಕುಗಳು ಕ್ರಮೇಣ ತಾವಾಗಿಯೇ ದೂರಾದವು.

ಈಗ ಎಲ್ಲಿ ನೋಡಿದರೂ ಸಮ್ಯಕ್ತ್ವ ರೂಪಿ ಅಮೃತ ಕಲಶವನ್ನು ಒಡೆದು ಹಾಕಿ ವಿಷರೂಪಿ ವಿಷಯಸುಖ ವಿಷವನ್ನು ಪಾನ ಮಾಡುವವರೇ ಹೆಚ್ಚು. ಹೃದಯದಲ್ಲಿ ವಿಷಯ ಸುಖ ವಿಷವನ್ನು ತುಂಬಿಕೊಂಡು ಬಾಯಲ್ಲಿ ಅಮೃತದಂತಹ ಮಾತಾಡುತ್ತಾರೆ. ಯಾವ ಸುಧಾರಣೆಯನ್ನು ಆಚಾರ್ಯಶ್ರೀಯವರು ಮಾಡಿದರೋ, ಅದನ್ನು ಅವರು ಸ್ವಯಂ ಆಚರಿಸಿ ತೋರಿಸಿ ನಂತರ ಆಚರಿಸಲು ಹೇಳಿದರು. ಆ ಮಹಾನ್ ಕಾರ್ಯ ಯುಗ ಯುಗಗಳವರೆಗೆ ನಿಲ್ಲತಕ್ಕದ್ದಾಗಿದೆ. ಆ ದಿವ್ಯ ಮಾರ್ಗದಲ್ಲಿ ನಡೆದು ಅನೇಕ ಜೀವಿಗಳು ಇಹಪರ ಸುಖವನ್ನು ಸಾಧಿಸಿಕೊಳ್ಳುತ್ತಿವೆ.

## ಬಾಹು ಬಲಿಯತ್ತ ವಿಹಾರ

ಕ್ಷುಲ್ಲಕ ೧೦೫ ಶಾಂತಿಸಾಗರರು ವಿಹರಿಸುತ್ತಾ ಅತಿಶಯ ಕ್ಷೇತ್ರ ಬಾಹುಬಲಿಯತ್ತ ಹೊರಟರು. ಈಗ್ಗೆ ೩೦೦ ವರ್ಷಗಳ ಹಿಂದೆ ಬಾಹುಬಲಿ ಎಂಬ ಹೆಸರಿನ ಮಹಾ ತಪಸ್ವಿ ಮುನಿ ಇಲ್ಲಿ ತಪಸ್ಸು ಮಾಡುತ್ತಿದ್ದರು. ಆಗಾಗ್ಗೆ ಸಿಂಹಗಳು ಬಂದು ಈ ಮುನಿಯ ಪಾದದಡಿ ಶಾಂತವಾಗಿ ಕೂತಿದ್ದು ಹೋಗುತ್ತಿದ್ದವಂತೆ!



ಆದ್ದರಿಂದ ಈ ಬೆಟ್ಟಕ್ಕೆ ಬಾಹುಬಲಿ ಬೆಟ್ಟ ಎಂದು ಹೆಸರು ಬಂತು. ಕ್ರಮೇಣ ಈ ಪ್ರದೇಶ ಬಾಹುಬಲಿ ಕ್ಷೇತ್ರವಾಯಿತು.

## ಗಿರಿನಾರ್ ಯಾತ್ರೆಯ ಸಂಕಲ್ಪ

ಒಮ್ಮೆ ಕ್ಷುಲ್ಲಕ ಶಾಂತಿಸಾಗರರು ಶ್ರಾವಕರೊಡನೆ ಚರ್ಚೆಯಲ್ಲಿ ನಿರತರಾಗಿದ್ದಾಗ ಒಬ್ಬ ಶ್ರಾವಕ ಬಾಹುಬಲಿ ಮತ್ತು ಗಿರಿನಾರ್ ಕ್ಷೇತ್ರಗಳ ದರ್ಶನ ನಿಮಿತ್ತವಾಗಿ ಅಲ್ಲಿಗೆ ಬಂದು ಪೂಜ್ಯ ಶ್ರೀಯವರಿಗೆ ವಂದಿಸಿ ತನ್ನನ್ನು ಕೃತಾರ್ಥನನ್ನಾಗಿ ತಿಳಿದ. ಅವನಲ್ಲಿ ಪೂಜ್ಯ ಶ್ರೀಯವರಿಗೂ ಆ ಕ್ಷೇತ್ರದರ್ಶನ ಮಾಡಿಸಬೇಕೆಂಬ ಸತ್ಸಂಕಲ್ಪ ಮೂಡಿತು. ಅವರಲ್ಲಿ ತನ್ನ ಮನದ ಭಾವನೆಯನ್ನು ಸವಿನಯ ಪೂರ್ವಕ ವಿನಂತಿಸಿದ. ಪೂಜ್ಯ ಶ್ರೀಯವರ ತೀರ್ಥ ಭಕ್ತಿ ಅಸಾಧಾರಣವಾಗಿತ್ತು. ಅದಕ್ಕೆ ಸಮ್ಮತಿಸಿ ರೈಲಿನಲ್ಲಿ ಹೊರಡಲು ನಿಶ್ಚಯಿಸಿದರು.

ಸಮಡೊಳಿ ಶ್ರಾವಕರೊಡನೆ ಪೂಜ್ಯಶ್ರೀಯವರು ಭಗವಾನ್ ನೇಮಿನಾಥರ ಪಾದ ಧೂಳಿಯಿಂದ ಪವಿತ್ರಗೊಂಡಿರುವ ಗಿರಿನಾರ್ ಪರ್ವತ ಸೇರಿದರು. ಅವರು ಜಗದ್ಬಂಧು ನೇಮಿನಾಥರ ಪಾದುಕೆಗಳಿಗೆ ಪುಳಕಿತರಾಗಿ ಅತ್ಯಂತ ಭಕ್ತಿ ಭಾವದಿಂದ ಎರಗಿದರು. ಪಾದುಕೆಗಳ ದರ್ಶನದ ಸ್ಮರಣಾರ್ಥ ಏನಾದರೊಂದು ಸ್ಮೃತಿ ಸಾಮಾಗ್ರಿ ಕೊಂಡೊಯ್ಯಬೇಕೆಂಬ ಭಾವ ಅವರಲ್ಲಿ ಮೂಡಿತು. ಅಲ್ಲಿಯೇ ಐಲಕ ದೀಕ್ಷೆ ಕೈಗೊಳ್ಳುವುದಕ್ಕಿಂತ ಉತ್ತಮ ಸ್ಮೃತಿ ಇನ್ನಾವುದಿದೆ ಎಂದು ಭಾವಿಸಿದರು. ಆ ಮಹಾಪುರುಷ ಹೇಗೆ ವಿಚಾರಸುತ್ತಿದ್ದರೋ ಅದರಂತೆಯೇ ಆಚರಿಸಿ ತೋರಿಸುತ್ತಿದ್ದರು. ಮನವಚನ ಕಾಯಗಳ ಸಾಮರಸತೆಯೇ ಮಹಾ ಮಾನವತೆಯ ದ್ಯೋತಕ. ಅವುಗಳ ವಿಷಮತೆಯೇ ಅಧಮತೆಯ ಧ್ಯೋತಕ, '' ಮನಸ್ಯೇಕ ವಚಸ್ಯೇಕ ಕರ್ಮಣ್ಯೇಕ ಮಹಾತ್ಮನಃ'' ಎನ್ನುವಂತೆ ಆಚಾರ್ಯ ಶ್ರೀಯವರು ಅಕ್ಷರಸಃ ಆಚರಿಸುತ್ತಿದ್ದರು. ಐಲಕ ದೀಕ್ಷಾ ಕಾರ್ಯ ಸಾಂಗವಾಗಿ ನಡೆದು ಹೋಯಿತು.

ಐಲಕ ದೀಕ್ಷೆಯ ನಂತರ ಅವರು ಚೈತನ್ಯದ ಚಿಲುಮೆಯಾದರು. ಮಹಾನ್ ಸ್ಫೂರ್ತಿ ಅವರಲ್ಲಿ ಉಕ್ಕಿತು. ಮಹಾ ವ್ರತಧಾರಣೆ ಮಾಡಿಕೊಳ್ಳುವ ಸಬಲ ಸಾಮಾಗ್ರಿಗಳನ್ನು ಅವರು ಸಂಗ್ರಹಿಸುತ್ತಿದ್ದರು. ಗಿರಿನಾರ್‌ನಿಂದ ವಾಪಾಸಾದ ಕೂಡಲೇ ಸಾಂಗಲಿಯ ಸಮೀಪದಲ್ಲಿರುವ ಜಿನಮಂದಿರದಲ್ಲಿ ಜೀವನ ಪರ್ಯಂತ ವಾಹನ ತ್ಯಾಗ ವ್ರತ ಬದ್ಧರಾದರು.

ಈ ಧರ್ಮಮೂರ್ತಿ ಅನೇಕ ಸ್ಥಳಗಳಲ್ಲಿ ಪಾದಚಾರಿಗಳಾಗಿ ವಿಹರಿಸುತ್ತಾ ಧರ್ಮಾಮೃತವನ್ನು ವರ್ಷಿಸುತ್ತಿದ್ದರು. ವರ್ಷಾಯೋಗದಲ್ಲಿ ಒಂದೆಡೆ ನಿಂತು ಸ್ವಪರ ಹಿತ ಚಿಂತನೆಯಲ್ಲಿ ನಿರತರಾಗುತ್ತಿದ್ದರು. ಮಳೆಗಾಲದಲ್ಲಿ ಅಧಿಕ

ತೇವಾಂಶದಿಂದ ಎಲ್ಲೆಡೆ ಧಾನ್ಯಗಳು ಮೊಳೆಯುತ್ತವೆ. ಕ್ರಿಮಿಗಳ ಉತ್ಪತ್ತಿಯೂ ಅಧಿಕವಿರುತ್ತಿದೆ. ಆದ್ದರಿಂದ ತ್ಯಾಗಿಗಳು ಈ ನಾಲ್ಕು ತಿಂಗಳು ವಿಹಾರ ತ್ಯಜಿಸಿ ಒಂದೆಡೆ ನಿಲ್ಲುತ್ತಾರೆ. ಆಗ ಅವರು ಉಗ್ರ ತಪಶ್ಚರ್ಯೆಯಲ್ಲಿ ನಿರತರಾಗುತ್ತಾರೆ. ಸುದರ್ಶನ, ಸಿಂಹನಿಃಕ್ರೀಡಿತ, ಕನಕಾವಲಿ, ಮುಕ್ತಾವಲಿ, ರತ್ನಾವಲಿ, ಆಚಮ್ಲವರ್ಧನ ಇತ್ಯಾದಿ ಉಪವಾಸಗಳನ್ನು ಆಚರಿಸುತ್ತಾರೆ. ತೀಕ್ಷ್ಣ ಅಧ್ಯಯನ ನಡೆಸಿ ಜ್ಞಾನ ಜ್ಯೋತಿಯನ್ನು ಸಮುಜ್ವಲಗೊಳಿಸುತ್ತಾರೆ. ಶ್ರಾವಕರಿಗೆ ತ್ಯಾಗಿಗಳಿಂದ ಆಗ ಆಗುವ ಲಾಭ ಅಪಾರ.



# ದಿಗಂಬರ ದೀಕ್ಷೆ ೫

ಪೂಜ್ಯ ಶ್ರೀಯವರು ವಿಹರಿಸುತ್ತಾ ಐನಾಪುರಕ್ಕೆ ಬಂದರು. ಅಲ್ಲಿ ಒಬ್ಬ ನಿಗ್ರಂಥ ಮುನಿಗಳ ಸಮಾಗಮವಾಯಿತು. ಅದರಿಂದ ಅವರ ಅಂತಃಕರಣದಲ್ಲಿ ಅತೀವ ಹರ್ಷವಾಯಿತು. ಅವರ ಜೀವನದಲ್ಲಿ ಒಂದು ವಿಶೇಷವೇನೆಂದರೆ, ಗುಣೀಪುರುಷರನ್ನು ನೋಡಿದಾಗ ಅವರ ಹೃದಯ ಪ್ರಮೋದ ಭಾವದಿಂದ ಅರಳುತ್ತಿತ್ತು.

ಐನಾಪುರದಲ್ಲಿ ಒಂದು ವಾರದ ವಾಸ್ತವ್ಯದಿಂದ ಎರನಾಲ ಗ್ರಾಮದತ್ತ ಹೊರಟರು. ಅಲ್ಲಿ ಪಂಚಕಲ್ಯಾಣ ಮಹೋತ್ಸವ ಅದ್ದೂರಿಯಾಗಿ ನಡೆಯುವುದರಲ್ಲಿತ್ತು. ಸುತ್ತ ಮುತ್ತಲ ಪ್ರದೇಶಗಳಲ್ಲಿ ಲಕ್ಷಾಂತರ ಶ್ರಾವಕರು ವಾಸವಾಗಿದ್ದರು. ಅಧಿಕ ಸಂಖ್ಯೆಯಲ್ಲಿ ಜನ ಸೇರುವ ನಿರೀಕ್ಷೆ ಇತ್ತು. ಈ ಸಂದರ್ಭದಲ್ಲಿ ಮುನಿ ದೇವೇಂದ್ರ ಕೀರ್ತಿಗಳೂ ಆಗಮಿಸಿದ್ದರು.

ಐಲಕ ಶಾಂತಿಸಾಗರರು ಪೂಜ್ಯ ದೇವೇಂದ್ರ ಕೀರ್ತಿ ಮುನಿಗಳ ಸಮೀಪಕ್ಕೆ ಹೋಗಿ ವಂದಿಸಿ ಪ್ರಾರ್ಥಿಸಿದರು.

''ಭಗವನ್! ತಮ್ಮ ಆಜ್ಞಾನುಸಾರ ನಾನು ವ್ರತಗಳನ್ನು ಪಾಲನೆ ಮಾಡಿದ್ದೇನೆ. ಮನುಷ್ಯ ಜನ್ಮದ ಉತ್ಕೃಷ್ಟ ನಿಧಿ ನಿಗ್ರಂಥ ದೀಕ್ಷೆ ಕೊಟ್ಟು ನನ್ನ ಜನ್ಮ ಸಫಲಗೊಳಿಸಬೇಕಾಗಿ ವಿನಮ್ರ ಪ್ರಾರ್ಥನೆ''

ಆಗ ದೇವೇಂದ್ರ ಕೀರ್ತಿಗಳು ಬಹಳ ಪ್ರಸನ್ನರಾಗಿ ಒಂದೆರಡು ಮಾತುಗಳನ್ನು ಅವರಿಗೆ ಬೋಧಿಸಿದರು.

''ದಿಗಂಬರ ದೀಕ್ಷೆ ತೆಗೆದುಕೊಳ್ಳುವುದು ಸಾಧಾರಣ ಮಾತಲ್ಲ. ಇಂದಿನ ಪರಿಸ್ಥಿತಿ ವಿಚಿತ್ರವಾಗಿದೆ. ಮಿಥ್ಯಾತ್ವಿ ಜೀವಿಗಳು ಅಧಿಕವಾಗಿ ಹುಟ್ಟುತ್ತವೆ. ದುಷ್ಟ ಮತ್ತು ಮಹಾಕೋಪಿಷ್ಟ ಜನರ ಕಠೋರ ಶಬ್ದಗಳಿಂದ ಮನಸ್ಸಿನಲ್ಲಿ ಸಹಜವಾಗಿ ಮಲಿನತೆ ಮತ್ತು ವ್ರತ ಭ್ರಷ್ಟತೆ ಉಂಟಾಗುವ ಸಂಭವವಿದೆ. ಪರೀಷಹಗಳ ಪ್ರಚಂಡ ಪ್ರಹಾರಗಳಿಂದ ಮನಸ್ಸು ವಿಚಲಿತವಾಗಿ ಪರಿಣಾಮ ಕೆಡುತ್ತದೆ. ಒಂದು ವೇಳೆ ಶ್ರೇಷ್ಠ ನಿಗ್ರಂಥ ದೀಕ್ಷೆ ತೆಗೆದುಕೊಂಡೂ ನಿರ್ದೋಷ ಚಾರಿತ್ರ ಪಾಲನೆ ಮಾಡದಿದ್ದರೆ ಜೀವ ಪಾಪಭಾರದಿಂದ ನೀಚ ಗತಿಗಳಲ್ಲಿ ಜನ್ಮಧಾರಣೆ ಮಾಡಬೇಕಾಗುತ್ತದೆ. ಆದ್ದರಿಂದ ಅಸಮರ್ಥ ಆತ್ಮ ಇಂತಹ ಕಠಿಣ ವ್ರತಗಳನ್ನು ಧಾರಣೆ ಮಾಡದೆ ಸಾಮರ್ಥ್ಯಕ್ಕೆ ತಕ್ಕಷ್ಟು ವ್ರತಗಳನ್ನು ಧರಿಸಬೇಕು. ಯೋಚಿಸು! ನೀನು ಇಂತಹ ದುರ್ಧರ ದಿಗಂಬರ

ದೀಕ್ಷೆಯ ಭಾರ ಹೊರಬಲ್ಲೆಯಾ? ನಿಧಾನವಾಗಿ ಯೋಚಿಸಿ ಅನಂತರ ತೀರ್ಮಾನ ತೆಗೆದುಕೋ. ದುಡುಕಿ ನಂತರ ಪಶ್ಚಾತ್ತಾಪ ಪಡಬೇಡ''

ಮಹಾವ್ರತ ಎನ್ನುವುದು ಕತ್ತಿಯು ಅಲಗಿನ ಮೇಲೆ ನಡೆದಂತೆ! ಜ್ಞಾನ ವೈರಾಗ್ಯ ಭೂಷಿತ ಆತ್ಮನಿಗೆ ಮುನಿ ಪದ ಪುಷ್ಪ ಶಯ್ಯೆಇದ್ದಂತೆ! ಆದರೆ ಭೋಗೋಪಭೋಗ ಕಾಂಕ್ಷಿಗೆ ಮುಳ್ಳಿನ ಹಾಸಿಗೆ!

ಐಲಕ ಶಾಂತಿಸಾಗರರು ಗುರುಚರಣಗಳಿಗೆ ಮತ್ತೊಮ್ಮೆ ವಿನಯ ಪೂರ್ವಕ ವಂದಿಸಿ ಹೇಳತೊಡಗಿದರು.

''ಸ್ವಾಮಿನ್! ನಿಮ್ಮ ಮಾತು ಅಕ್ಷರಶಃ ಸತ್ಯವಾಗಿದೆ. ಆದರೆ ನಾನು ಒಂದು ವರ್ಷದಿಂದಲೂ ನಿಗ್ರಂಥ ದೀಕ್ಷೆಗಾಗಿ ಸಿದ್ಧತೆ ನಡೆಸಿದ್ದೇನೆ. ಜಿನೇಂದ್ರ ಭಗವಾನರ ಪ್ರಸಾದದಿಂದ ಮತ್ತು ನಿಮ್ಮ ಶುಭಾಶೀರ್ವಾದದಿಂದ ಈ ಪದದ ಪ್ರತಿಷ್ಠೆಯನ್ನು ಸದಾ ರಕ್ಷಿಸುತ್ತೇನೆ. ಒಂದು ವೇಳೆ ಪ್ರಾಣ ಹೋದರೂ ಚಿಂತಿಸೆನು.''

ಅವರು ಸದಾ ವೈರಾಗ್ಯ ಸಾಗರದಲ್ಲಿ ಮುಳಿಗೇಳುತ್ತಿದ್ದರು. ಅವರಿಗೆ ಸಂಯಮ ಸತ್ಯ, ಸದಾಚಾರದ ಬಲವಿತ್ತು. ಅಲ್ಲಿ ನೆರೆದಿದ್ದ ಅನೇಕ ಶ್ರಾವಕರು ದೇವೇಂದ್ರ ಕೀರ್ತಿಗಳಲ್ಲಿ ಅರಿಕೆ ಮಾಡಿಕೊಳ್ಳತೊಡಗಿದರು. ''ಮಹರಾಜ್! ಇವರು ಪವಿತ್ರಾತ್ಮರು. ಸ್ವಪ್ನದಲ್ಲಿಯೂ ತಮ್ಮ ವ್ರತಕ್ಕೆ ಅತಿಚಾರ ಹಚ್ಚಗೊಡರು''

## ನಿಗ್ರಂಥ ದೀಕ್ಷೆ

ನಿಗ್ರಂಥ ದೀಕ್ಷೆ ಕೊಡಲು ನಿಶ್ಚಯಿಸಲಾಯಿತು. ದೀಕ್ಷೆ ಕೊಡುವ ಸಮಯವೂ ಸಮೀಪಿಸುತ್ತಿತ್ತು. ಪಂಚಕಲ್ಯಾಣದಲ್ಲಿ ಜಿನೇಂದ್ರನ ವೈರಾಗ್ಯ ಕಲ್ಯಾಣ ನಡೆದಿತ್ತು. ತೀರ್ಥಂಕರ ಕುಮಾರನು ಪಾಲಕಿಯಲ್ಲಿ ವಿರಾಜಮಾನನಾಗಿ ದೀಕ್ಷಾ ವನದತ್ತ ನಡೆದಿದ್ದನು. ಬಹು ದೊಡ್ಡ ಪರಿವಾರವೇ ಅವನನ್ನು ಅನುಸರಿಸಿತ್ತು. ಎಷ್ಟೋ ಜನ ರಾಜರು, ರಾಜಕುಮಾರರು ಅವರ ಮೇಲಿನ ಭಕ್ತಿಯಿಂದ ಸಕಲವನ್ನು ತ್ಯಜಿಸಿ ದೀಕ್ಷಾವನದತ್ತ ಧಾವಿಸಿದ್ದರು. ದೇವೇಂದ್ರನ ಕೈ ಲಾಗವದೊಡನೆ ತೀರ್ಥಂಕರ ಪ್ರಭುವು ಜಗತ್ಕಲ್ಯಾಣಕಾರಿ ಭಗವತಿ ದಿಗಂಬರ ದೀಕ್ಷೆ ತೆಗೆದುಕೊಳ್ಳಲು ವಾಹನದಿಂದಿಳಿದರು. ದಶದಿಕ್ಕುಗಳು ಬಿರಿಯುವಂತೆ ಜಯಘೋಷ ನಿನದಿಸುತ್ತಿತ್ತು. ದೇವ ವಿದ್ಯಾಧರರು ದಿಕ್ಕುದಿಕ್ಕುಗಳನ್ನಾವರಿಸಿ ಕುತೂಹಲಗೊಂಡು ಭಗವಂತನ ದೀಕ್ಷಾ ಕಲ್ಯಾಣವನ್ನು ವೀಕ್ಷಿಸುತ್ತಿದ್ದರು. ದೀಕ್ಷಾ ಕಲ್ಯಾಣವು ದೇವೇಂದ್ರನ ಸಮಕ್ಷಮ ನಡೆಯಿತು. ಅನೇಕ ರಾಜ ಮಹರಾಜರೂ ದೀಕ್ಷೆಗೊಂಡರು. ಇದು ಐತಿಹಾಸಿಕ ಚಿತ್ರ. ಅದೇ ಸಂದರ್ಭದಲ್ಲಿ ಇನ್ನೊಂದು ಐತಿಹಾಸಿಕ ಘಟನೆಯೂ ಜರುಗಿತ್ತು. ಐಲಕ ಶಾಂತಿಸಾಗರರು ದೇವೇಂದ್ರ ಕೀರ್ತಿಗಳ ಸಮಕ್ಷಮ ಮಾನವ ಭವದ ಶ್ರೇಷ್ಠ ನಿಧಿ, ತ್ರೈಲೋಕ್ಯ ದುರ್ಲಭ ದಿಗಂಬರ ದೀಕ್ಷೆಯನ್ನು ಸ್ವೀಕರಿಸಿದರು. ಅವರು



೧೦೮ಶಾಂತಿಸಾಗರರೆಂದೇ ಪುನಃ ಕರೆಯಲ್ಪಟ್ಟರು. ''ಶಾಂತಿಸಾಗರ ಮುನಿ ಮಹರಾಜ್ ಕೀ ಜೈ'' ಎನ್ನುವ ಘೋಷಣೆ ಮಾರ್ದನಿಗೊಳ್ಳತೊಡಗಿತು. ಜನಗಳು ಈ ಪವಿತ್ರ ಘಟನೆಯನ್ನು ನೋಡಿ ಕೃತಕೃತ್ಯರಾದೆವೆಂದುಕೊಂಡರು. ಜಗತ್ತಿನ ಒಂದು ದೊಡ್ಡ ನಿಧಿ ಅಂದು ಜನ ಸಾಮಾನ್ಯರ ನಡುವೆ ಆವಿರ್ಭಾವಗೊಂಡಂತಾಗಿತ್ತು. ಜ್ಞಾನವೈರಾಗ್ಯಗಳ ಮೂರ್ತಿಮಂತ ರೂಪದಂತ್ತಿದ್ದ ಆ ಮಹಾಮುನಿ ಚರಣಗಳಿಗೆ ನೆರೆದಿದ್ದ ಶ್ರಾವಕ ವೃಂದ ನಮಿಸತೊಡಗಿತು. ಅಪೂರ್ವ ಶಾಂತಿ ಅವರ ಮುಖಮಂಡಲದಲ್ಲಿ ಲಾಸ್ಯವಾಡುತ್ತಿತ್ತು. ಅವರು ಮೊದಲೇ ನೈಸರ್ಗಿಕ ಮುನಿಯಂತಿದ್ದರು. ಅವರ ಚಿರಕಾಂಕ್ಷಿತ ಮುನಿದೀಕ್ಷೆ ಪ್ರಾಪ್ತಿಯಾದಮೇಲೆ ಮುನಿ ಧರ್ಮವೇ ಮಾನವ ರೂಪ ಧಾರಣೆ ಮಾಡಿತೋ ಎನ್ನುವಂತೆ ಕಾಣುತ್ತಿದ್ದರು. ದೇವೇಂದ್ರ ಕೀರ್ತಿ ಮುನಿಗಳು ಅವರ ಮುಖದಲ್ಲಿ ಮಿನುಗುತ್ತಿದ್ದ ಅಪೂರ್ವ ಶಾಂತಿಯನ್ನು ಗಮನಿಸಿ ಶಾಂತಿಸಾಗರರೆಂದೇ ಕರೆದಿರಬೇಕು.

## ಭಕ್ತನ ಪ್ರೇಮ

ಯಾವಾಗ ಅವರು ಮುನಿ ಧರ್ಮ ಸ್ವೀಕರಿಸಿದರೋ ಆಗ ಅವರ ಒಬ್ಬ ಭಕ್ತನ ಕಣ್ಣಲ್ಲಿ ನೀರು ಹನಿಯತೊಡಗಿತು. ಆವನು ವಿಚಿತ್ರ ಚಿಂತೆಯಲ್ಲಿ ಕಳವಳಗೊಂಡಿದ್ದ. ಅತಿಶಯ ಭಕ್ತಿಯಿಂದ ಉದ್ರೇಕಗೊಂಡು ನಾನಾ ವಿಕಲ್ಪಗಳಲ್ಲಿ ತೊಳಲಾಡುತ್ತಿದ್ದ. ''ಯಾವ ರೀತಿ ಈ ಮುನಿ ಮಹಾತ್ಮನ ನಿರ್ವಾಹ ಆಗುವುದೋ ಏನೋ? ಗೃಹಸ್ಥರು ಈಗ ಮಹಾ ಮೋಹಿಗಳು; ವಿಷಯಲಂಪಟರು; ಧರ್ಮಾಂಧರು. ಶ್ರಾವಕರಿಗೆ ಆಗಮದ ಆಜ್ಞೆಯ ಕಲ್ಪನೆಯೇ ಇಲ್ಲ. ಇವರಾದರೋ ಕಟ್ಟಾ ಆಗಮ ಭಕ್ತರು. ಒಂದು ಅಣುವಿನಷ್ಟೂ ಆಗಮಾಜ್ಞೆಯನ್ನು ಉಲ್ಲಂಘಿಸುವವರಲ್ಲ. ಹೀಗಿರುವಾಗ ಅವರ ಪರಿಸ್ಥಿತಿ ಏನಾದೀತೋ? ಭವಿಷ್ಯ ಬಹಳ ಭಯಂಕರವಾಗಿ ತೋರುತ್ತಿದೆಯಲ್ಲ'' ಹೀಗೆ ವಿಚಾರ ಮಾಡುತ್ತಾ ಆ ಶ್ರೀಮಂತನ ಕಣ್ಣಲ್ಲಿ ನೀರು ಹರಿಯತೊಡಗಿತು. ಆಚಾರ್ಯ ಶ್ರೀಯವರಿಗೆ ಆ ಶ್ರೀಮಂತನ ಹೊಯ್ದಾಟ ತಿಳಿಯಿತು. ಅವರು ಅತ್ಯಂತ ಪ್ರಸಾದಿಕವಾಣಿಯಲ್ಲಿ ಸಾಂತ್ವನಗೊಳಿಸತೊಡಗಿದರು.

''ಹೆದರುವಂತಹದ್ದೇನಾಗಿದೆ? ಒಂದು ವೇಳೆ ವ್ರತಪಾಲನೆ ಮಾಡಲು ಯೋಗ್ಯ ಸಾಮಾಗ್ರಿ ದೊರೆಯದಿದ್ದ ಪಕ್ಷದಲ್ಲಿ ನಾವು ಅರಣ್ಯಕ್ಕೆ ಹೋಗಿ ಸಮಾಧಿಧಾರಣೆ ಮಾಡುತ್ತೇವೆ''

ಅಂತಹ ಉತ್ಕಟ ಪರಿಸ್ಥಿತಿಯಲ್ಲೂ ಅವರು ನಿರ್ಭೀತರಾಗಿದ್ದರು.

ಶಾಂತಿಸಾಗರರಲ್ಲಿ ಪ್ರೇಮ ಮತ್ತು ಕರುಣಾಭಾವ ತುಂಬಿತ್ತು. ಸಣ್ಣಸಣ್ಣ ಪ್ರಾಣಿಗಳಿಗೂ ಅಭಯ ಸಿಗುತ್ತಿತ್ತು. ಐಲಕ ಅವಸ್ಥೆಯಲ್ಲಿ ಲಂಗೋಟಿ ಮಾತ್ರ ಪರಿಗ್ರಹವಿರುತ್ತದೆ. ಅದನ್ನು ಜಿನ ಮುದ್ರೆ ಎಂದು ಹೇಳಲು ಬರುವುದಿಲ್ಲ.

ಲಂಗೋಟ ಮಾತ್ರ ಪರಿಗ್ರಹವೂ ಅವರನ್ನು ಸಂಯತಾಸಂಯತ ಗುಣಸ್ಥಾನಕ್ಕಿಂತ ಮೇಲೇರಲು ಬಿಡುವುದಿಲ್ಲ. ಯಥಾಜಾತ ಮುದ್ರೆ ಧಾರಣೆ ಮಾಡಿದ ಮೇಲೆಯೇ ಸಂಯತ ಎನ್ನಿಸುವುದು. ಅಪ್ರಮತ್ತ ಸಂಯಮ ಗುಣಸ್ಥಾನಾರೋಹಣ ಮಾಡುವ ಕಾರಣ ದೇಶ ಸಂಯಮಿ ಯಾವಾಗ ವ್ರತಧಾರಣೆ ಮಾಡುತ್ತಾನೋ ಆಗ ಭಾವದಲ್ಲಿ ಅದ್ಭುತ ನಿರ್ಮಲತೆ ಉಂಟಾಗುವುದರಿಂದ ಆರನೇ ಗುಣಸ್ಥಾನದಿಂದ ಏಳನೇ ಗುಣಸ್ಥಾನವರ್ತಿಯಾಗುತ್ತಾನೆ. ಆಗ ಉದಯದಲ್ಲಿ ಬರುವ ಸಂಜ್ವಲನ ಕಷಾಯಗಳ ಅವಧಿ ಅಲ್ಪ ಕಾಲ ಮಾತ್ರವಿರುತ್ತದೆ. ಗೋಮಟಸಾರ ಕರ್ಮಕಾಂಡದಲ್ಲಿ ಹೀಗೆ ಹೇಳಿದೆ.

''ಮಿಥ್ಯಾತ್ವ ಗುಣ ಸ್ಥಾನವರ್ತಿ ಜೀವ ಸಸಾದನ ಮತ್ತು ಮಿಶ್ರ ಗುಣಸ್ಥಾನಗಳೆರಡನ್ನು ಬಿಟ್ಟು ಅಪ್ರಮತ್ತ ಗುಣಸ್ಥಾನ ಪರ್ಯಂತ ಉಳಿದ ನಾಲ್ಕು ಸ್ಥಾನಗಳನ್ನು ಪ್ರಾಪ್ತಿ ಮಾಡಿಕೊಳ್ಳುತ್ತದೆ. ಮಿಥ್ಯಾತ್ವದ ನಂತರ ಬರುವ ಸಸಾದನ ಗುಣಸ್ಥಾನದಲ್ಲಿರುವ ಜೀವ ಪುನಃ ಕೆಳಕ್ಕೆ ಜಾರಿ ಮಿತ್ಯಾತ್ವ ಗುಣಸ್ಥಾನಕ್ಕೆ ಬರುತ್ತದೆ. ಮೂರನೆಯ ಮಿಶ್ರಗುಣಸ್ಥಾನವರ್ತಿ ಜೀವ ಇಲ್ಲವೆ ನಾಲ್ಕನೆಯ ಅವಿರತ ಸಮ್ಯಗ್ದೃಷ್ಟಿ ಸ್ಥಾನಕ್ಕೇರುತ್ತದೆ. ಅಥವಾ ಪತಿತವಾಗಿ ಒಂದನೆ ಗುಣಸ್ಥಾನಕ್ಕೆ ಜಾರಿ ಬೀಳುತ್ತದೆ. ನಾಲ್ಕನೆ ಮತ್ತು ಐದನೆ ಗುಣಸ್ಥಾನವರ್ತಿಯಾದ ಅವಿರತ ಸಮ್ಯಗ್ದೃಷ್ಟಿ ಹಾಗೂ ದೇಶ ಸಂಯತಿ ಭಾವಶುದ್ಧಿಯಿಂದ ಮೇಲೇರುತ್ತಾ ಪ್ರಮತ್ತ ಗುಣಸ್ಥಾನವನ್ನು ಬಿಟ್ಟು ಅಪ್ರಮತ್ತ ಗುಣಸ್ಥಾನದವರೆಗೆ ಏರುತ್ತದೆ. ಆದರೆ ಪ್ರಮತ್ತ ಗುಣಸ್ಥಾನವರ್ತಿ ಜೀವ ಕೆಳಕೆಳಗಿನ ನಾಲ್ಕು ಗುಣ ಸ್ಥಾನಗಳವರೆಗೂ ಜಾರಿ ಬೀಳಬಲ್ಲದು. ಮತ್ತು ಮೇಲೇರಿ ಅಪ್ರಮತ್ತ ಗುಣಸ್ಥಾವರ್ತಿಯೂ ಆಗಬಲ್ಲದು. ಅಲ್ಲಿಂದ ಆರನೇ ಗುಣ ಸ್ಥಾನವರ್ತಿ ಜೀವ ಇನ್ನಷ್ಟು ಭಾವ ಶುದ್ಧಿ ಹೊಂದಿ ಏಳನೇ ಗುಣಸ್ಥಾನಕ್ಕೆ ಏರುತ್ತದೆ. ...''

## ನೈಜ ನಿಗ್ರಂಥಗುರು

ಈಗ ಶಾಂತಿ ಸಾಗರ ಮುನಿ ಮಹರಾಜರ ಮುದ್ರೆಗೂ ಜಿನೇಂದ್ರ ಭಗವಾನರ ಮುದ್ರೆಗೂ ಯಾವ ಅಂತರವೂ ಕಾಣುತ್ತಿರಲಿಲ್ಲ. ವಸ್ತ್ರ-ವೈಭವ ಸ್ಥಾನ-ಮಾನಗಳಿಂದ ಮಾನವ-ಮಾನವರಲ್ಲಿ ಅಂತರ ಎಣಿಸಲಾಗುತ್ತದೆ. ಜಿನಮುದ್ರೆ ಧಾರಣೆ ಮಾಡಿದ ಮೇಲೆ ಭಾವಶುದ್ಧಿಯಿಂದ ಮೇಲೇರುತ್ತಾ ಹೋದಂತೆ ವ್ಯತ್ಯಾಸ ಸಂಪೂರ್ಣ ಅಳಿದು ಹೋಗುತ್ತದೆ. ದೊಡ್ಡದು- ಚಿಕ್ಕದು, ಮೇಲು-ಕೀಳು ಎನ್ನುವ ನಾನಾ ವಿಕಲ್ಪ ಅಜ್ಞಾನ ಜನ್ಯ. ಅಜ್ಞಾನಾತೀತ ಸಂಸಾರಾತೀತ ಪರಮಹಂಸಭಾವವುಳ್ಳವರಿಗೆ ಈ ತರತಮ ಭಾವಗಳ ತುಮಲಗಳೇ ಇರುವುದಿಲ್ಲ.



ಸರ್ವ ಸ್ವತಂತ್ರದತ್ತ ಏರುವ ಆತ್ಮರುಗಳೆಲ್ಲಾ ಸ್ವಸಮಯ ಸಮಾಹಿತರಾಗಿ ಸರಿಸಮನೆನಿಸುವರು.

ಭಾವ ಸಂಗ್ರಹದಲ್ಲಿ ದೇವಸೇನರ ಅಭಿಪ್ರಾಯ ಹೀಗಿದೆ:

''ಸರ್ವ ಸಂಗ ವಿನಿರ್ಮುಕ್ತರಾದುದರಿಂದಲೇ ವೃಷಭ ಸ್ವಾಮಿಯು ನಿಗ್ರಂಥರಾದರು. ಅವರು ತಮ್ಮ ವಾಣಿಯ ಮೂಲಕ ನಿಗ್ರಂಥ ಮಾರ್ಗದ ಉಪದೇಶ ಮಾಡಿದರು. ಅವರ ಮಾರ್ಗದಲ್ಲಿ ಕ್ರಮಿಸುವವರೆಲ್ಲರೂ ನಿಗ್ರಂಥರಾದರು.''

ಸರ್ವ ಸಂಗ ಪರಿತ್ಯಾಗಿಯಾದ ವೃಷಭದೇವ ನಿಗ್ರಂಥನಾದ. ಅಂದರೆ ನಿಗ್ರಂಥ ಮುನಿಯಾಗಲು ಸರ್ವಸಂಗ ಪರಿತ್ಯಾಗಿಯಾಗಬೇಕು. ಒಟ್ಟಿನಲ್ಲಿ ಸರ್ವಸಂಗ ಪರಿತ್ಯಾಗ ಮಾಡಿದವರೆಲ್ಲಾ ಸರ್ವಸಮಾನ ನಿಗ್ರಂಥ ಮುನಿಗಳಾಗುತ್ತಾರೆ. ಅವರು ತೀರ್ಥಂಕರರಾದರೇನು? ಅನ್ಯರೇನು? ಆಯಾ ಗುಣಸ್ಥಾನದಿಂದ ಸಮಾನರೆನಿಸುತ್ತಾರೆ. ಪರಿಗ್ರಹಧಾರಿಗಳು ಎಂದೂ ನಿಗ್ರಂಥರಾಗಲು ಸಾಧ್ಯವಿಲ್ಲ. ಪರಿಗ್ರಹಧಾರಿಗಳು ಪೂರ್ಣ ರತ್ನತ್ರಯ ಧರ್ಮಾರಾಧಕರಾಗಲೂ ಸಾಧ್ಯವಿಲ್ಲ.

ಪೂಜ್ಯ ಆಚಾರ್ಯ ಶ್ರೀಯವರು ನಿಗ್ರಂಥ ದೀಕ್ಷೆ ಧಾರಣೆಮಾಡಿಕೊಂಡು ಪರಕಲ್ಯಾಣದೊಡನೆ ಸ್ವಕಲ್ಯಾಣವನ್ನು ಬಹಳ ವೇಗದಿಂದ ಮಾಡಿಕೊಳ್ಳತೊಡಗಿದರು. ತಪೋಧನರು ಉಗ್ರ ತಪಶ್ಚರ್ಯೆಯ ಮೂಲಕ ಚಿರಸಂಚಿತ ಕರ್ಮಗಳನ್ನು ಉದಯಾವಲಿಯಲ್ಲಿ ಪ್ರವಿಷ್ಟಗೊಳಿಸಿ ತೀಕ್ಷ್ಣಕರ್ಮ ನಿರ್ಜರೆ ಮಾಡುತ್ತಿರುತ್ತಾರೆ. ಅವರ ಅಸಾಧಾರಣ ತಪಶ್ಚರ್ಯೆಯ ಮೂಲಕ ಅಸಾತಾಕರ್ಮದ ಉದೀರಣ ಪ್ರಾರಂಭವಾಗಿ ಬಿಟ್ಟಿತು. ಯರನಾಲಾ ಪಂಚಕಲ್ಯಾಣದಲ್ಲಿ ಜನದಟ್ಟಣೆಯ ಕಾರಣ ಜಲ ದೂಷಿತವಾಯಿತು. ರೋಗಗಳು ಮುನಿ ಸಂಘವನ್ನೂ ಆಕ್ರಮಿಸಿಬಿಟ್ಟವು. ಆಚಾರ್ಯ ಶ್ರೀಯವರೂ ರೋಗಗ್ರಸ್ತರಾದರು. ಶ್ರಾವಕ ಭಕ್ತರು ಮುನಿಸಂಘವನ್ನು ನಸಲಾಪುರಕ್ಕೆ ವಿಹಾರ ಮಾಡಿಸಿ ಅತಿಭಕ್ತಿಯಿಂದ ವೈಯಾವೃತ್ಯದಲ್ಲಿ ತೊಡಗಿದರು.

## ಜ್ವರ ಪ್ರಕೋಪ

ಒಂದು ತಿಂಗಳ ನಿರಂತರ ಜ್ವರ ತಾಪ ಆಚಾರ್ಯಶ್ರೀಯವರ ಶರೀರವನ್ನು ಜರ್ಝರಿತಗೊಳಿಸಿತು. ಆಹಾರಕ್ಕಾಗಿ ಹೋಗಲೂ ಶರೀರದಲ್ಲಿ ತ್ರಾಣವಿರಲಿಲ್ಲ. ಅಂತಹ ಸಂಕಟ ಪರಿಸ್ಥಿತಿಯಲ್ಲೂ ಅವರು ಆವಶ್ಯ ಕ್ರಿಯೆಗಳನ್ನು ತೊರೆಯಲಿಲ್ಲ. ಆರ್ತ ಧ್ಯಾನವನ್ನು ಹತ್ತಿರವೂ ಸುಳಿಯಗೊಡಲಿಲ್ಲ. ಆ ಮಹಾಮಾನವನ ಆಚಾರ ಶುದ್ಧಿ ಅತ್ಯದ್ಭುತವಾಗಿತ್ತು. ಉಚ್ಚತಮ ಮಾದರಿಯದು.

ಆತ್ಮನಿಗೆ ಯಾವ ರೋಗವೂ ಬಾರದು. ಆದರೆ ಶರೀರ ಚಿರರೋಗಿ. ಪೂರ್ವೋಪಾರ್ಜಿತ ಕರ್ಮೋದಯವಾದಾಗಲೇ ಶರೀರಕ್ಕೆ ರೋಗ ಬರುವುದು. ಯಾವಾಗ ಅಸಾತಾವೇದನೀಯ ಕರ್ಮದ ಮಂದೋದಯವಾದೀತೋ ಆಗ ರೋಗದ ಉಪಶಾಂತಿ ಆದೀತು. ಇಷ್ಟು ಭಾವನೆ ಮಾತ್ರವೇ ಅವರು ತೆಗೆದುಕೊಳ್ಳುತ್ತಿದ್ದ ಔಷಧಿಯಾಗಿತ್ತು. ಅವರ ಧೈರ್ಯ ಅಪಾರ. ಜೈನ ಮುನಿಗಳ ಚರ್ಯೆ ಎಷ್ಟು ಮಹೋನ್ನತ ಎಂದು ನೋಡಿದವರು ಆಶ್ಚರ್ಯದಿಂದ ಬೆರಳು ಕಚ್ಚಿಕೊಳ್ಳುತ್ತಿದ್ದರು. ಸ್ವಯಂ ನಡೆದು ಹೋಗಿ ಆಹಾರ ಸ್ವೀಕರಿಸಲಾಗದಿದ್ದರೆ ಆಹಾರವನ್ನೇ ತ್ಯಜಿಸಿ ನಿರಶನ ವ್ರತ ಸ್ವೀಕರಿಸಿ ಬಿಡುತ್ತಿದ್ದರು. ಇದೇ ಮುನಿಗಳ ಸಿಂಹವೃತ್ತಿ. ಮುನಿವೃತ್ತಿ ಹೇಡಿಗಳ ವೃತ್ತಿ ಅಲ್ಲ. ಅಂಜುಬುರುಕರ ಆಡೊಂಬಲವಲ್ಲ. ವಿಷಯ ಲಂಪಟಿಗಳ ವಿಲಾಸ ಭೂಮಿಯಲ್ಲ. ಮಾಯಾಚಾರಿಗಳ ವಿಕಟಾಟ್ಟಹಾಸವಲ್ಲ. ಹುಲಿಯ ಬೆನ್ನುತಟ್ಟಿ ಬದುಕಬಹುದು. ಸಿಂಹನ ಮೀಸೆ ಎಳೆದು ಸೆಣೆಸಬಹುದು. ಆದರೆ ಮುನಿವೃತ್ತಿ ಧರಿಸಿ ಪರೀಷಗಳೊಡನೆದಿರಾಗಿ ಹೋರಾಡುವುದು ಮಹಾ ಧೈರ್ಯದ ಮಾತು. ಅಂತಹ ಧೀರ ವೃತ್ತಿಧಾರಿಗಳಾದ ದಿಗಂಬರಮುನಿಗಳಿಗೆ ದ್ವಾದಶಾಂಗ ಶ್ರುತ ಜ್ಞಾನಿಯಾದ ಸೌಧರ್ಮೇಂದ್ರನ ಮಸ್ತಕವೂ ಕ್ಷಣದಲ್ಲೇ ಮಣಿದು ಹೋಗುತ್ತದೆ. ಮುನಿಗಳು ಮೂರು ಲೋಕದ ಪರಮ ಮಂಗಲ ಸ್ವರೂಪಿಗಳು.

## ಕೊಗನೊಲಿಯಲ್ಲಿ ಚಾತುರ್ಮಾಸ

ವಿಹಾರ ಮಾಡುತ್ತಾ ಮುಂದಿನ ಚಾತುರ್ಮಾಸಕ್ಕಾಗಿ ಕೊಗನೊಲಿ ಗ್ರಾಮದ ಹತ್ತಿರ ಅರ್ಧಮೈಲಿ ದೂರದಲ್ಲಿ ನಿರ್ಮಾಣಗೊಂಡಿದ್ದ ಗುಹೆಯಲ್ಲಿ ವಿಶ್ರಮಿಸಿದರು. ಆದರೆ ಅಲ್ಲಿ ದೀರ್ಘ ವರ್ಷಧಾರೆಯಿಂದ ಅವರ ಶರೀರಕ್ಕೆ ಬಹಳ ಬಾಧೆಯಾಯಿತು. ಅವರು ಅದನ್ನು ಸಹರ್ಷ ಸಹಿಸಿದರು. ಅವರೀಗ ಸಾಮಾನ್ಯ ವ್ಯಕ್ತಿಯಾಗಿರಲಿಲ್ಲ. ಕ್ಷಣಕ್ಷಣವೂ ಉದಯವಾಗುವ ಅಸಾತವೇದನೀಯ ಕರ್ಮದೊಡನೆ ಹೋರಾಡುವ ಸನ್ನದ್ಧ ಸಿಪಾಯಿಯಂತಿದ್ದರು. ವಿಷಮ ಪರಿಸ್ಥಿತಿಯೊದಗಿದಾಗಲೂ ಅದನ್ನು ದೂರೀಕರಿಸಲು ಬಾಹ್ಯ ಪ್ರತೀಕಾರವನ್ನು ಅವರು ಅಪೇಕ್ಷಿಸುತ್ತಿರಲಿಲ್ಲ. ಕರ್ಮೋದಯವು ಹತ ಬ್ರಷ್ಟವಾಗುವವರೆಗೆ ಅವರು ನೇರ ಅಂತರಂಗ ಯುದ್ಧದಲ್ಲಿ ತೊಡಗುತ್ತಿದ್ದರು. ಆದ್ದರಿಂದ ಅಧಿಕಾಧಿಕ ಕರ್ಮ ನಿರ್ಜರೆಯಾಗಿ ಅವರ ಮುಖ ಮಂಡಲ ತೇಜಃಪುಂಜ ಸೂರ್ಯನಂತೆ ಕಂಗೊಳಿಸುತ್ತಿತ್ತು. ಪ್ರಕೃತಿ ಚಿಕಿತ್ಸೆಯಲ್ಲಿ ವಿಶ್ವಾಸವುಳ್ಳವರು ರೋಗ ಬಾಧೆಯನ್ನು ಔಷದೋಪಚಾರದಿಂದ ಗುಣಪಡಿಸಿಕೊಳ್ಳಲು ಯತ್ನಿಸುತ್ತಾರೆ. ಯಥಾಜಾತ ಶಿಶುವಿನಂತಿರುವ ಆಚಾರ್ಯಶ್ರೀಯವರು ಬಂದ ಸಂಕಟಗಳನ್ನು ಆತ್ಮ ಸ್ವರೂಪ ಆಧರಿತ ಪ್ರಕೃತಿ ಚಿಕಿತ್ಸೆಯ ಮೂಲಕ ಪರಿಹರಿಸಿಕೊಳ್ಳುತ್ತಿದ್ದರು. ಬಹಳ ಶಾಂತ



ಭಾವದಿಂದ ದೊಡ್ಡ ದೊಡ್ಡ ಸಂಕಟಗಳನ್ನು ಸಹಿಸುತ್ತಿದ್ದರು. ಎಲ್ಲಿಯವರೆಗೆ ಕರ್ಮೋದಯವಿದೆ ಅಲ್ಲಿಯವರೆಗೆ ಕರ್ಮಫಲ ಭೋಗಿಸುವುದು ಅನಿವಾರ್ಯ. ಶೋಕ ಮಾಡಿದರೆ, ಆರ್ತ ರೌದ್ರ ಧ್ಯಾನದಲ್ಲಿ ಮುಳುಗಿದರೆ ಬಿಟ್ಟೀತೆ? ಜಿನನಾಮಸ್ಮರಣೆ, ಆತ್ಮಚಿಂತನೆ ಮತ್ತು ಸಮತಾಭಾವ ಧರಿಸಿದರೆ ಮಾತ್ರ ಕರ್ಮೋದಯ ಛಿನ್ನ-ಭಿನ್ನವಾಗಿ ಹೋಗುತ್ತದೆ. ದುಃಖ ಶಮನಕ್ಕೆ ಇದೊಂದೇ ಆಗಮೋಕ್ತ ಮಾರ್ಗ. ಅನ್ಯ ಮಾರ್ಗಗಳೆಲ್ಲಾ ದುಃಖವನ್ನು ಮತ್ತಷ್ಟು ಹೆಚ್ಚಿಸಿ ಪುನರಪಿ ಜನನಂ ಪುನರಪಿ ಮರಣಂ ಚಕ್ರಕ್ಕೆ ಸಿಕ್ಕಿಸಿ ಬಿಡುತ್ತವೆ. ಇಂತಹ ಅಪೂರ್ವ ಭಾವನೆಯಿಂದ ಅವರ ಮನಸ್ಸು ಸದಾ ಭೂಯಿಷ್ಠವಾಗಿರುತ್ತಿತ್ತು. ಆದ್ದರಿಂದಲೇ ವಿಪತ್ತಿ ಉಂಟಾದಾಗ ಅವರು ಮೇರುವಿನಂತೆ ಅಚಲರಾಗಿರುತ್ತಿದ್ದರು. ಅವರು ಅಪೂರ್ವ ಪ್ರಾಕೃತಿಕ ಆತ್ಮ ವಿಚಿಕಿತ್ಸಕರಾಗಿದ್ದರು.

## ಹುಚ್ಚನಿಂದ ಭಯಂಕರ ಉಪಸರ್ಗ

ಕೊಗನೊಲಿ ಗುಹೆಯಲ್ಲಿ ಅವರು ಧ್ಯಾನಮಗ್ನರಾಗಿದ್ದರು. ಒಂದು ರಾತ್ರಿ ಕೊಗನೊಲಿ ಗ್ರಾಮದಿಂದ ಒಬ್ಬ ಹುಚ್ಚ ಅತ್ತ ಸುಳಿದ. ಅವನು ಆಚಾರ್ಯಶ್ರೀಯವರ ಬಳಿ ಬಂದು ಆಹಾರ ಬೇಡಿದ. ಅವರೇನನ್ನು ಕೊಟ್ಟಾರು? ಪರಮ ಏಕಾಗ್ರ ಚಿಂತಾನಿರೋಧ ಧ್ಯಾನದಲ್ಲಿ ಮುಳುಗಿ ಹೋಗಿದ್ದರು. ಬಾಹ್ಯದ ಅರಿವೇ ಅವರಲ್ಲಿರಲಿಲ್ಲ. ಇವನ ಮಾತೇನು? ಪ್ರಕೃತಿಯೇ ಮುಳಿದು ಮೈಮೇಲೆ ಒರಗಿದರೂ ಧ್ಯಾನ ವಿಮುಖರಾಗುತ್ತಿರಲಿಲ್ಲ. ಅಂತಹ ಮಹಾತ್ಮನ ಎದುರು ಹುಚ್ಚನೊಬ್ಬನ ಹುಚ್ಚಾಟ ನಡೆದಿತ್ತು! ಅದೆಂತಹ ವಿಧಿಯ ವಿಕಟ? ಅವರು ಅವನ ಮಾತಿಗೆ ಸ್ವಲ್ಪವೂ ಪ್ರತಿಕ್ರೀಯೆ ತೋರಿಸದೆ ಕೂತಿದ್ದುದು ಅವನ ಕೋಪವನ್ನು ನೆತ್ತಿಗೇರಿಸಿತ್ತು. ಕೆಂಗಣ್ಣನಾಗಿ ಅವರ ಮೇಲೆ ಆಕ್ರಮಣ ಮಾಡತೊಡಗಿದ. ಕೈಗೆ ಸಿಕ್ಕ ವಸ್ತುವಿನಿಂದ ಅವರನ್ನು ಹೊಡೆಯಲು ಅತ್ತಿತ್ತ ಜಿಗಿದಾಡಿದ. ದುರದೃಷ್ಟದಿಂದ ಗುಹೆಯ ಸಮೀಪ ಯಾರೂ ಇರಲಿಲ್ಲ. ಸಮೀಪದಲ್ಲೇ ಇಟ್ಟಿಗೆಗಳ ರಾಶಿ ಕಣ್ಣಿಗೆಬಿತ್ತು. ಇಟ್ಟಿಗೆಗಳನ್ನು ಹಿಡಿಹಿಡಿದು ಗಹಗಹಿಸಿ ನಗುತ್ತಾ ಬೈಗುಳಗಳ ಮಳೆಯನ್ನೇ ಸುರಿಸುತ್ತಾ ಬೀಸತೊಡಗಿದ. ಆದರೆ ಈ ಭೀಕರ ಉಪಸರ್ಗದಿಂದ ಆ ಮಹಾಮುನಿಯ ಮುಖಚರ್ಯೆಯಲ್ಲಿ ಸ್ವಲ್ಪವೂ ವ್ಯತ್ಯಾಸ ಕಾಣಲಿಲ್ಲ. ಹೊಡೆಹೊಡೆದು ಆ ಹುಚ್ಚ ಸೋತು ಹೋದ. ದಾಪುಕಾಲು ಹಾಕುತ್ತಾ ಬೇರೆಡೆ ನಡೆದ.

ಇದು ಸಾಧಾರಣ ಮಾತಲ್ಲ. ಪಂಚಮ ಕಾಲದ, ಹೀನ ಸಂಹನನದ ದುರ್ಬಲ ಶರೀರ ಧಾರಿಗಳು ಈ ಉಪಸರ್ಗ ಸಹನ ಮಾಡುವುದೆಂದರೆ ಸಾಮಾನ್ಯ ಮಾತಲ್ಲ.

ಚತುರ್ಥಕಾಲದ ಮುನಿಗಳ ಶರೀರ ವಜ್ರದಂತೆ ಬಲಿಷ್ಠವಾಗಿರುತ್ತಿತ್ತು. ಅಂತವರು ಎಂತಹ ಭಯಂಕರ ಉಪಸರ್ಗವನ್ನೂ ಸಹಿಸುತ್ತಿದ್ದುದೇನೂ

ಹೆಚ್ಚುಗಾರಿಕೆಯ ಮಾತಾಗುತ್ತಿರಲಿಲ್ಲ. ಇಂದಿನ ದುರ್ಬಲ ಶರೀರಧಾರಿಗಳಿಗೆ ಅಲ್ಪ ಪರೀಷಹ ಮತ್ತು ಉಪಸರ್ಗಗಳು ಬಂದರೂ ಮಹಾ ಸಂಕಟ ಉಂಟಾಗುತ್ತದೆ. ಮನಸ್ಸು ಅಲ್ಲೋಲ ಕಲ್ಲೋಲವಾಗುತ್ತದೆ. ಆರ್ತ ರೌದ್ರ ಧ್ಯಾನಗಳು ಕೋಡಿ ಬಿದ್ದ ಕೆರೆ ನೀರಿನಂತೆ ನುಗ್ಗಿ ಬರುತ್ತವೆ. ಇಂತಹ ಮಾನಸಿಕ ಸಂತಾಪವನ್ನು ಸಂಯಮದಿಂದ ಒತ್ತಿ ಹಿಡಿಯಬೇಕಾದರೆ ಮಾನಸಿಕ ಸ್ಥೈರ್ಯ ಎಷ್ಟು ಬಲಿಷ್ಠವಾಗಿರಬೇಡ? ಪೂಜ್ಯ ಶ್ರೀಯವರು ಕಾಲದೋಷದಿಂದ ಬಲಿಷ್ಠ ಶರೀರಧಾರಿಗಳಲ್ಲದಿದ್ದರೂ, ಮಾನಸಿಕವಾಗಿ ವಜ್ರಕ್ಕಿಂತಲೂ ಕಠೋರವಾಗಿದ್ದರು.

## ದುಷ್ಟನ ದುಶ್ಚೇಷ್ಟೆ

ಪೂಜ್ಯಶ್ರೀಯವರು ಕೋಗನೊಳಿ ಗುಹಾದಲ್ಲಿ ಇರುತ್ತಿದ್ದರು. ಆಹಾರಾರ್ಥ ಯೋಗ್ಯಕಾಲದಲ್ಲಿ ಹೊರಹೊರಡುತ್ತಿದ್ದರು. ಉಳಿದ ಕಾಲ ಅಲ್ಲಿಯೇ ಧ್ಯಾನ ಅಧ್ಯಯನದಲ್ಲಿ ಕಳೆಯುತ್ತಿದ್ದರು. ಅವರು ಆಹಾರಾರ್ಥ ಬಂದು ಹೋಗುವ ಮಾರ್ಗ ಮಧ್ಯದಲ್ಲಿ ಒಬ್ಬ ಬ್ರಾಹ್ಮಣನ ಮನೆ ಇತ್ತು. ಒಬ್ಬ ದಿಗಂಬರ ಮುನಿ ತನ್ನ ಮನೆ ಮುಂದೆ, ನಿತ್ಯವೂ ಬಂದು ಹೋಗುವುದು ಆ ಬ್ರಾಹ್ಮಣನಿಗೆ ಪಿತ್ತ ನೆತ್ತಿಗೇರಿಸಿತು. ಆ ಬ್ರಾಹ್ಮಣ ಅವಾಚ್ಯ ಶಬ್ದಗಳಿಂದ ಪೂಜ್ಯ ಶ್ರೀಯವರನ್ನು ನಿಂದಿಸುತ್ತಾ ಅವರ ಗಮನಾಗಮನಕ್ಕೆ ಅಡ್ಡಿ ಮಾಡತೊಡಗಿದ. ನನ್ನಿಂದ ಈ ಬಡಪಾಯಿ ಬ್ರಾಹ್ಮಣನಿಗೇಕೆ ವ್ಯರ್ಥ ತೊಂದರೆ ಎಂದು ಭಾವಿಸಿ ಆ ಮಾರ್ಗವನ್ನೇ ಬದಲಿಸಿದರು. ಸುಮಾರು ಒಂದೆರಡು ವಾರಗಳ ನಂತರ ಅವರ ಅಪಾರ ಶಾಂತಮಯ ಮುದ್ರೆ ಬ್ರಾಹ್ಮಣನ ಮೇಲೆ ತೀಕ್ಷ್ಣ ಪ್ರಭಾವ ಬೀರಿತು. ಬ್ರಾಹ್ಮಣನಿಗೆ ಪಶ್ಚಾತ್ತಾಪವಾಗಿತ್ತು. ತನ್ನ ದುಷ್ಟಚೇಷ್ಟೆಯನ್ನು ತಾನೆ ನಿಂದಿಸಿಕೊಳ್ಳುತ್ತಿದ್ದ. ಒಬ್ಬ ನಿರ್ದೋಷ ಸಾಧುವಿಗೆ ನಿರ್ನಿಮಿತ್ತ ಉಪದ್ರವ ಕೊಟ್ಟೆನಲ್ಲ, ಎಂದು ಪಶ್ಚಾತ್ತಾಪದಿಂದ ಬೇಯುತ್ತಿದ್ದ. ತನ್ನ ಅಶಾಂತಿಗೆ ಅದೊಂದೇ ಪರಿಹಾರವೆಂದು ಚಿಂತಿಸಿ ಓಡಿ ಬಂದು ಪೂಜ್ಯಶ್ರೀಯವರ ಕಾಲು ಹಿಡಿದು ಕ್ಷಮೆ ಬೇಡತೊಡಗಿದ. ಅವರು ಪುನಃ ತನ್ನ ಮನೆಯ ಮುಂಭಾಗದಿಂದಲೇ ಬಂದು ಹೋಗುತ್ತಿದ್ದರೆ ಮಾತ್ರ ತನ್ನ ಮಾನಸಿಕ ಅಶಾಂತಿ ನಿವಾರಣೆಯಾಗಬಲ್ಲದೆಂದು ವಿನಂತಿಸತೊಡಗಿದ. ಅವನ ನಿಷ್ಕಲ್ಮಶ ಭಾವವನ್ನು ಪೂಜ್ಯಶ್ರೀಯವರು ಗ್ರಹಿಸಿ ಪುನಃ ಅದೇ ಮಾರ್ಗದಲ್ಲಿ ನಿಶ್ಚಿಂತರಾಗಿ ವಿಹರಿಸತೊಡಗಿದರು.

ಪರಮ ದಯಾಳುಗಳಾದ ಮುನಿಗಳು ಅನ್ಯರಿಗೆ ಸಂತಾಪವಾಗುವ ಯಾವುದೇ ಮಾತು ಮತ್ತು ಕೃತಿಯನ್ನು ದೂರದಿಂದಲೇ ವರ್ಜಿಸುತ್ತಾರೆ. ಮಾನಸಿಕ ಶಾಂತಿಯನ್ನುಂಟುಮಾಡುವ ಯಾವುದೇ ಕ್ರಿಯೆಯನ್ನು ಕೂಡಲೇ ಮಾಡುತ್ತಾರೆ. ಮಹಾ ಪುರುಷರ ಸ್ವಕಲ್ಯಾಣದಲ್ಲಿ ಪರಕಲ್ಯಾಣವೂ ಗರ್ಭಿತವಾಗಿರುತ್ತದೆ. ಆದರೆ



ದುಷ್ಟರ ಜೀವನ ಪರಘಾತದೊಡನೆ ಸ್ವಘಾತದಲ್ಲಿ ಪರ್ಯಾವಸಾನವಾಗುತ್ತದೆ. ಪೂಜ್ಯ ಶ್ರೀಯವರು ಅನಂತ ಜೀವಕೋಟಿಯ ಹಿತಚಿಂತಕರಾಗಿದ್ದರು. ಅವರು ನಿಜವಾದ ಅರ್ಥದಲ್ಲಿ ವಸುಧೈವ ಕುಟುಂಬಕರಾಗಿದ್ದರು. ಅವರ ಮನಸ್ಸಿನಲ್ಲಿ ಯಾವುದೇ ಕಷಾಯ ಭಾವಗಳಿರಲಿಲ್ಲ. ಹಾಗಿದ್ದಲ್ಲಿ ಬ್ರಾಹ್ಮಣನ ಮೇಲೆ ವೈರಭಾವ ಉಂಟಾಗಬೇಕಾಗಿತ್ತು. ಪ್ರತೀಕಾರ ಭಾವವೂ ಹುಟ್ಟಬೇಕಾಗಿತ್ತು. ಅವರ ಹೃದಯದಲ್ಲಿ ಯಾವುದೇ ವಿಕಾರ ಭಾವ ಹುಟ್ಟುತ್ತಿರಲಿಲ್ಲ. ಆದ್ದರಿಂದಲೇ ಬ್ರಾಹ್ಮಣನ ಪ್ರಾರ್ಥನೆಯನ್ನು ಮನ್ನಿಸಿದರು. ಮುನಿ ಜೀವನದಲ್ಲಿ ದುಷ್ಟರಿಂದ ಉಪಸರ್ಗ ಸದಾ ಬರುತ್ತಲೇ ಇರುತ್ತದೆ. ಅಂತಹ ಉಪಸರ್ಗಗಳು ಬಂದಾಗ ಕಷಾಯ ಭಾವಗಳನ್ನು ಏಳಗೊಡದೆ ಕರ್ಮ ವಿಪಾಕ ಚಿಂತನೆ ಮಾಡುವುದರಿಂದಲೇ ಮುನಿ ಕಷಾಯ ವಿಜಯಿ, ಕರ್ಮ ವಿಜಯಿ ಎಂದು ಕರೆಸಿಕೊಳ್ಳುತ್ತಾನೆ. ಆಗ ಅಸಾಂಖ್ಯಿತ ಗುಣ ಕರ್ಮ ನಿರ್ಜರೆಯಾಗುತ್ತಿರುತ್ತದೆ. ಉಪಸರ್ಗ ಬಂದಾಗ ಶಾಂತಭಾವದಿಂದ ಸಹಿಸುವುದೂ ಒಂದು ದೊಡ್ಡ ತಪಸ್ಸೆಂದು ಹೇಳಿದೆ.

ಚಾತುರ್ಮಾಸ ಮುಗಿದ ನಂತರ ಪೂಜ್ಯಶ್ರೀಯವರ ವಿಹಾರ ಹಲವಾರು ಪ್ರದೇಶಗಳತ್ತ ನಿರಾತಂಕವಾಗಿ ಸಾಗಿತ್ತು. ದಶದಿಕ್ಕುಗಳೂ ಮೊಳಗುವಂತೆ ಧರ್ಮ ಡಿಂಡಿಮವನ್ನು ಮೊಳಗಿಸುತ್ತಾ ಅಜ್ಞಾನದ ಜಡ ನಿದ್ರೆಯಲ್ಲಿ ಮಲಗಿದ್ದ ಜೀವಿಗಳನ್ನು ಎಚ್ಚರಿಸುತ್ತಿದ್ದರು. ಮುಂಗಾರಿನ ಧಾರಾ ವರ್ಷದಿಂದ ನಳನಳಿಸುವ ತರುಲತೆಗಳಂತೆ ಅವರ ದರ್ಶನದಿಂದ ಜನಗಳ ಮನಸ್ಸು ಹೂವಿನಂತೆ ಅರಳುತ್ತಿತ್ತು. ಅವರ ಮಾತು ಹಾಲ್ಜೇನು ಸವಿದಂತೆ ಹಿತಕರವಾಗಿತ್ತು. ಅವರ ಕರುಣಾಮಯ ದಿವ್ಯ ನೋಟ ಜೀವಿಗಳನ್ನು ಅಪೂರ್ವ ಶಾಂತಿಯ ಕಡಲಲ್ಲಿ ಮುಳುಗಿಸುತ್ತಿತ್ತು. ಪೂಜ್ಯ ಶ್ರೀಯವರ ಆಗಮನವಾಗುತ್ತಿದೆಯೆಂದು ವಾರ್ತೆ ಬಂದರೆ ತೀರಿತು ಕೈ ಕಾಲು ಮುದುರಿ ಮೂಲೆಯಲ್ಲಿ ಬಿದ್ದಿರುತ್ತಿದ್ದ ಮುಪ್ಪಿನವರಿಗೂ ಹರ್ಷದಿಂದ ಹರೆಯ ಉಕ್ಕಿ ಹುಡುಗರಂತೆ ಸಡಗರಗೊಂಡು ಓಡಾಡುತ್ತಿದ್ದರು.

ಮುಂದಿನ ಚಾತುರ್ಮಾಸ ಓಡೋಡಿ ಬಂದಿತು. ನಸಲಾಪುರ ನಿವಾಸಿಗಳ ಬಾಗಿಲನ್ನು ಭಾಗ್ಯದ ದೇವತೆ ತಟ್ಟತೊಡಗಿದಳು. ಅವರ ಆನಂದಕ್ಕೆ ಸೀಮೆಯೇ ಇರಲಿಲ್ಲ. ಊರಿಗೆ ಊರೇ ವಾದ್ಯಘೋಷ ಜಯಘೋಷದಿಂದ ಪೂಜ್ಯಶ್ರೀಯವರನ್ನು ಎದುರ್ಗೊಂಡಿತು. ಪೂಜ್ಯ ಶ್ರೀಯವರು ಚಾತುರ್ಮಾಸ ನಿಯಮಬದ್ಧರಾಗಿ ಅಲ್ಲಿ ನಿಂತರು. ಅವರ ಕೀರ್ತಿ ಆಸೇತು ಹಿಮಾಚಲದವರೆಗೆ ಮೀರಿ ನಿಂತಿತ್ತು. ಅವರ ಪುಣ್ಯಮಯ ದರ್ಶನದಿಂದ ಕೃತಾರ್ಥರಾದೆವೆಂದು ಜನ ಭಾವಿಸುತ್ತಿದ್ದರು. ನಿತ್ಯವೂ ಅವರ ದರ್ಶನಾರ್ಥ ಬಂದು ಹೋಗುವ ಸ್ತ್ರೀಪುರುಷರ ಸಂಖ್ಯೆ ನೆರೆಯ ನೀರಿನಂತೆ ಏರತೊಡಗಿತು. ಅವರ ಪ್ರಭಾವವನ್ನು ದೂರದ ನಸಲಾಪುರ ಗ್ರಾಮದಿಂದ ಕೇಳಿದ ಅನ್ಯಗ್ರಾಮವಾಸಿಗಳೂ ಲಗುಬಗೆಯಿಂದ ಅವರ

ದರ್ಶನಾರ್ಥ ಬಂದು ಹೋಗುತ್ತಿದ್ದರು. ಪೂಜ್ಯ ಶ್ರೀಯವರ ಸಾನಿಧ್ಯ ಬಿಟ್ಟು ಹೋಗುವುದೇ ಕಷ್ಟವಾಗುತ್ತಿತ್ತು. ಅದೆಷ್ಟೋ ಜನಗಳಿಗೆ ಪೂಜ್ಯಶ್ರೀಯವರ ಬಗ್ಗೆ ಪ್ರಶಂಸೆ ಮಾಡದಿದ್ದರೆ ಅನ್ನಾಹಾರಗಳೇ ಸೇರುತ್ತಿರಲಿಲ್ಲ. ರತ್ನತ್ರಯ ಧಾರಿ ಮಹಾನ್ ಮುನಿಯ ದರ್ಶನವೇ ಅಂತಹದ್ದಾಗಿತ್ತು.

## ವಿಚಿತ್ರ ಘಟನೆ

ಚಾತುರ್ಮಾಸ ಕೊನೆಗೊಂಡಿತ್ತು. ಸಂಘವೀಗ ಐನಾಪುರದತ್ತ ರವಾನೆಯಾಯಿತು. ಆಗ ಒಂದು ವಿಶೇಷ ಘಟನೆ ನಡೆದುಹೋಯಿತು. ಶಾಸ್ತ್ರಾನುಸಾರ ತನ್ನ ಮನೆಯಲ್ಲೇ ತನಗಾಗಿ ತಯಾರಿಸಿದ ಶುದ್ಧಾಹಾರವನ್ನು ಮುನಿಗಳಿಗೆ ಕೊಡಬೇಕು. ಅನ್ಯ ಗೃಹದಲ್ಲಿ ತಯಾರಿಸಿದ ಆಹಾರವನ್ನು ತಂದು ಕೊಡಬಾರದು. ಒಮ್ಮೆ ಪೂಜ್ಯಶ್ರೀಯವರು ಆಹಾರಕ್ಕೆ ಹೊರಟರು. ಒಬ್ಬ ಗೃಹಸ್ಥ ಅವರನ್ನು ವಿಧಿಪೂರ್ವಕ ತಡೆದು ನಿಲ್ಲಿಸಿದ್ದ. ಆದರೆ ಆ ಗೃಹಸ್ಥನ ತಲೆ ಬಿಸಿಯಾಗತೊಡಗಿತು. ಏಕೆಂದರೆ ಅವನು ಆಹಾರ ತಯಾರಿಸಿಯೇ ಇರಲಿಲ್ಲ. ಇದೇನು ಹುಚ್ಚು ಕೆಲಸ ಮಾಡಿಬಿಟ್ಟೆ. ಇದು ತಿಳಿದು ಉಪವಾಸ ಮಾಡಿಬಿಟ್ಟರೆ ಮುಂದೇನು ಗತಿ? ಜನಗಳು ನನ್ನನ್ನು ಸುಮ್ಮನೆ ಬಿಟ್ಟಾರೇ ಎಂದು ಗಡಗಡ ನಡುಗತೊಡಗಿದ ಮುನಿಗಳು ಒಳಗೆ ಬಂದೂ ಆಗಿತ್ತು. ಹೆಚ್ಚು ಯೋಚಿಸಲು ಸಮಯವೇ ಇರಲಿಲ್ಲ. ಆಗ ಅವನಿಗೆ ಒಂದು ಯುಕ್ತಿ ಹೊಳೆಯಿತು. ಅವನ ಪಕ್ಕದ ಮನೆಯವರು ಶುದ್ಧಾಹಾರ ತಯಾರಿಸಿ ಕಾದಿದ್ದರು. ಬಹಳ ಜಾಗರೂಕತೆಯಿಂದ ಅವರಿಗೆ ಕಾಣದಂತೆ ಆ ಎಲ್ಲಾ ಆಹಾರ ಪದಾರ್ಥಗಳನ್ನೂ ತರಿಸಿಟ್ಟು ನಿರಂತರಾಯ ಆಹಾರ ಕೊಟ್ಟೇಬಿಟ್ಟ. ಆಗ ಇದರ ಸುಳಿವೇ ಅವರಿಗೆ ಹತ್ತಲಿಲ್ಲ. ಇಲ್ಲದಿದ್ದರೆ ಆಹಾರವನ್ನೇ ತ್ಯಜಿಸಿ ಬಿಟ್ಟೇಳುತ್ತಿದ್ದರು.

## ಭಯಂಕರ ಪ್ರಾಯಶ್ಚಿತ್ತ

ಆಹಾರಾನಂತರ ಈ ವಿಚಾರ ಅವರಿಗೆ ಹೇಗೋ ತಿಳಿದು ಹೋಯಿತು. ಆಹಾರವನ್ನೇ ತೆಗೆದುಕೊಳ್ಳಬಾರದಾಗಿತ್ತು ಎಂದು ಚಿಂತಿಸತೊಡಗಿದರು. ಕಾಲಿ ಮಿಂಚಿಹೋಗಿತ್ತು. ಅವರ ತಲೆಯಲ್ಲಿ ನಾನಾ ತುಮುಲಗಳೇಳತೊಡಗಿದವು. ಅಂತಹ ಸ್ಥಿತಿಯಲ್ಲಿ ಪ್ರಾಯಶ್ಚಿತ್ತದ ಬಹುದೊಡ್ಡ ಆಯುಧ ಮುನಿಗಳ ಬಳಿ ಸದಾ ಇರುತ್ತದೆ. ಪ್ರಾಯಶ್ಚಿತ್ತದ ಖಡ್ಗದಿಂದ ಆ ದೋಷವನ್ನು ತುಂಡರಿಸಲು ನಿರ್ಧರಿಸಿದರು. ಯಾವಾಗ ಏನೇ ಕೇಡಾದರೂ ಮಹಾಪುರುಷರು ಅದಕ್ಕೆ ಕಾರಣವನ್ನು ಬಾಹ್ಯದಲ್ಲಿ ನೋಡದೆ ಅಂತರಂಗದಲ್ಲೇ ಹುಡುಕುತ್ತಾರೆ. ರೋಗ ಅಲ್ಪ ಪ್ರಮಾಣದಲ್ಲೇ ಇದ್ದರೂ ಉಪೇಕ್ಷಿಸಿ ಬಿಟ್ಟರೆ ಕ್ಷಣಾರ್ಧದಲ್ಲೇ ಉಗ್ರವಾಗಿ ಬಿಡುತ್ತದೆ. ಆದ್ದರಿಂದ ದೋಷಗಳನ್ನು ಎಂದೂ ಬೆಳೆಯಗೊಡಬಾರದೆಂದು ಚಿಂತಿಸಿ ನೇರ ಕ್ರಮಕ್ಕೆ ಕೈ



ಹಾಕಿದರು. ಆಹಾರದಲ್ಲಿ ದೋಷ ಉಂಟಾಗಿರುವುದಕ್ಕೆ ಕಾರಣ ಬಾಹ್ಯದಲ್ಲಿ ಯಾರೂ ಅಲ್ಲ. ಯಾವುದೂ ಅಲ್ಲ. ಇದಕ್ಕೆ ನನ್ನ ಕರ್ಮೋದಯವೇ ಕಾರಣ. ಸದೋಷ ಆಹಾರವನ್ನು ತ್ಯಜಿಸುವುದು ನನ್ನ ಕರ್ತವ್ಯವಾಗಿತ್ತು. ಅದನ್ನು ತಿಳಿದುಕೊಳ್ಳುವ ಜ್ಞಾನವೇ ನನ್ನಲ್ಲಿರಲಿಲ್ಲ. ಇದು ಅಜ್ಞಾನ ಜನಿತ ದೋಷ. ಈ ರೀತಿ ನಾನಾ ರೀತಿ ಚಿಂತಿಸಿ ಆ ದೋಷ ನಿವಾರಣೆಗಾಗಿ ಮಧ್ಯಾಹ್ನದ ಸೂರ್ಯನ ಪ್ರಚಂಡ ಕಿರಣಗಳಿಂದ ಕಾದಿದ್ದ ಕಲ್ಲು ಹಾಸಿನ ಮೇಲೆ ಕೂತು ಉಗ್ರ ಧ್ಯಾನದಲ್ಲಿ ಮುಳುಗಿಬಿಟ್ಟರು. ಸೂರ್ಯನ ಪ್ರಖರ ಕಿರಣಗಳಿಂದ ಬೆಂದು ಸುರಿದ ಬೆವರು ಹನಿಗಳಿಂದ ಅವರ ಶರೀರ ಅಭಿಷೇಕಗೊಳ್ಳುತ್ತಿತ್ತು. ಅವರ ಆತಪ ಯೋಗ ಮುದ್ರೆ ನೋಡಿದರೆ ಎದೆ ನಡುಗುತ್ತಿತ್ತು.

ನಾಲ್ಕನೇ ಚಾತುರ್ಮಾಸದ ಸೌಭಾಗ್ಯ ಕೋಣ್ಣೂರಿಗೆ ಪ್ರಾಪ್ತಿಯಾಯಿತು. ಕೊನ್ನೂರು ಬೆಳಗಾಂ ಜಿಲ್ಲೆಯ ಗೋಕಾಕ್ ಸಮೀಪವಿದೆ. ಇಲ್ಲಿಯ ಪ್ರಾಚೀನ ಮಂದಿರದಲ್ಲಿರುವ ಒಂದು ಮಾನಸ್ತಂಭದಲ್ಲಿ ಮಹತ್ವಪೂರ್ಣ ಶಾಸನ ಕನ್ನಡ ಭಾಷೆಯಲ್ಲಿದೆ. ಇಲ್ಲಿ ವಿಹಾರ ಮಾಡುವ ತ್ಯಾಗಿಗಳ ಅನುಕೂಲಕ್ಕಾಗಿ ಕೆಲವು ಗ್ರಾಮಗಳನ್ನು ಒಬ್ಬ ರಾಜನು ಉಂಬಳಿ ಬಿಟ್ಟಿದ್ದನೆಂದು ಈ ಶಾಸನದಿಂದ ತಿಳಿದು ಬರುತ್ತದೆ. ಈ ಗ್ರಾಮದ ಸಮೀಪವೇ ಅನೇಕ ಗುಫಾಗಳಿವೆ. ಹಿಂದೆ ಅಲ್ಲಿ ಜೈನ ಧರ್ಮೀಯರು ಕೋಟಿ-ಕೋಟಿ ಸಂಖ್ಯೆಯಲ್ಲಿದ್ದರು. ಮಹಾಮುನಿಗಳು ಆ ಭೂಪ್ರದೇಶವನ್ನು ತಮ್ಮ ಚರಣ ಧೂಳಿಯಿಂದ ಸದಾ ಪವಿತ್ರಗೊಳಿಸುತ್ತಿದ್ದರು. ದೂರದೂರದಿಂದ ಆಗಮಿಸಿದ ಭಕ್ತಾದಿಗಳು ಪೂಜ್ಯಶ್ರೀಯವರ ದರ್ಶನದಿಂದ ಬಹಳ ಶಾಂತಿ ಪ್ರಾಪ್ತಿ ಮಾಡಿಕೊಳ್ಳುತ್ತಿದ್ದರು.

## ಗುಫಾದಲ್ಲಿ ಧ್ಯಾನ

ಮಹರಾಜರ ದರ್ಶನಕ್ಕೆ ದೂರದೂರದಿಂದ ಧರ್ಮಾತ್ಮ ಪುರುಷರು ಬಂದು ಹೋಗುತ್ತಿದ್ದರು. ಮಹಾಪುರುಷರ ಆಗಮನವು ಸತ್ಪುರುಷರಿಗೆ ಆನಂದವನ್ನುಂಟುಮಾಡುತ್ತದೆ. ಪೂಜ್ಯಶ್ರೀಯವರು ಕೀರ್ತಿಶಿಖರವನ್ನೇರಿದ್ದರೂ, ಅದರ ಬಗ್ಗೆ ಸ್ವಲ್ಪವೂ ಅಹಮಹಮಿಕೆ ಇರಲಿಲ್ಲ. ಅವರು ಬಾಲ್ಯದಿಂದಲೂ ಧ್ಯಾನಾಧ್ಯಯನ ಪ್ರಿಯರು. ಅವರ ಈ ಪ್ರಸಿದ್ಧಿಯ ಕಾರಣ ಬಂದು ಹೋಗುವವರ ಜನದಟ್ಟಣೆ ಅಧಿಕವಾಗತೊಡಗಿತು. ಆಗ ಅವರ ಧ್ಯಾನ ಅಧ್ಯಯನಕ್ಕೆ ಸ್ವಲ್ಪ ವಿಘಟನೆ ಉಂಟಾಗತೊಡಗಿತು. ಆದ್ದರಿಂದ ಅವರು ಒಂದು ಏಕಾಂತ ಗುಫಾದಲ್ಲಿ ಧ್ಯಾನ ಮಾಡುವ ಬಗ್ಗೆ ಆಲೋಚಿಸತೊಡಗಿದರು. ಒಂದು ಮಧ್ಯಾಹ್ನ ಸಾಮಾಯಿಕಕ್ಕಾಗಿ ನಿರ್ಜನ ಗುಫಾವೊಂದನ್ನು ಆರಿಸಿಕೊಂಡರು. ಆ ಗುಫಾದಲ್ಲಿ

ಕೊತು ಆನಂದದಿಂದ ಆತ್ಮ ಧ್ಯಾನದಲ್ಲಿ ಲೀನರಾದರು. ಅಲ್ಲಿ ಸರ್ಪಗಳು ಅಧಿಕವಾಗಿ ವಾಸವಾಗಿದ್ದವು.

## ಸರ್ಪಕೃತ ಉಪಸರ್ಗ

ಧ್ಯಾನಕ್ಕಾಗಿ ಬೇರೊಂದು ಗುಫಾಕ್ಕೆ ಹೋಗಿರುವುದನ್ನು ಶ್ರಾವಕರು ಗಮನಿಸಿದರು. ಶ್ರಾವಕರ ಒಂದು ಗುಂಪೇ ಪೂಜ್ಯಶ್ರೀಯವರನ್ನು ಹುಡುಕುತ್ತಾ ಅವರು ಧ್ಯಾನ ಮಾಡುತ್ತಿದ್ದ ಗುಫಾದತ್ತ ಬಂದಿತು. ಅಷ್ಟರಲ್ಲೇ ಒಂದು ಭಯಂಕರ ಸರ್ಪ ಪೂಜ್ಯ ಶ್ರೀಯವರು ಧ್ಯಾನ ಮಾಡುತ್ತಿದ್ದ ಗುಫಾದತ್ತ ಹೋಗುತ್ತಿರುವುದನ್ನು ಈ ಗುಂಪು ಗಮನಿಸಿತು. ಕ್ಷಣದಲ್ಲೇ ಆ ಸರ್ಪ ಗುಫಾದೊಳಗೆ ನುಗ್ಗಿ ಹೊರಬರಲು ಧಡಪಡಿಸುತ್ತಿತ್ತು. ಒಬ್ಬ ಶ್ರಾವಕ ಗುಫಾದ ಬಾಗಿಲಿಗೆ ಒಂದು ತೆಂಗಿನ ಕಾಯಿಯನ್ನು ಎಸೆದ. ಇದರಿಂದ ಕುಪಿತಗೊಂಡ ಆ ಸರ್ಪ ಒಳಕ್ಕೆ ಹೋಗಿ ಬುಸುಗುಟ್ಟತೊಡಗಿತು. ಅದು ಪೂಜ್ಯಶ್ರೀಯವರ ಶರೀರದ ಮೇಲೆಲ್ಲಾ ಹರಿದಾಡಿ ಅವರ ಧ್ಯಾನಕ್ಕೆ ಭಾದೆಯನ್ನುಂಟುಮಾಡತೊಡಗಿತು. ಬಾಹ್ಯದಲ್ಲಿ ನಡೆದ ಈ ಸರ್ಪ ಚೇಷ್ಟೆಯಿಂದ ಅವರ ಧ್ಯಾನಕ್ಕೆ ಯಾವ ಭಂಗವೂ ಉಂಟಾದಂತೆ ಕಾಣಲಿಲ್ಲ. ಅವರು ಶರೀರಾತ್ಮ ಭೇದವಿಜ್ಞಾನದಿಂದ ಶರೀರದಿಂದ ಆತ್ಮನನ್ನು ಬೇರೆಯಾಗಿ ಸಿದ್ಧಾಲಯದಲ್ಲಿಟ್ಟು ನೋಡುತ್ತಿದ್ದರೇನೋ? ಆಗ ಶರೀರಕ್ಕುಂಟಾದ ಭಾದೆಯನ್ನು ಹೇಗೆ ಗಮನಿಸಬಲ್ಲರು? ಅವರಂತೂ ಒಂದು ಶಿಲಾಮೂರ್ತಿಯೋ ಎಂಬಂತೆ ಬಾಹ್ಯದಲ್ಲಿ ಸಂಪೂರ್ಣ ನಿಷ್ಕಂಪರಾಗಿದ್ದರು. ಬಾಹ್ಯದಲ್ಲಿ ನಡೆದಿದ್ದ ವಿಷಧರನ ಚೇಷ್ಟೆ ಕೇವಲ ಶರೀರಕ್ಕೆ ಮಾತ್ರ ಸೀಮಿತವಾಗಿತ್ತು. ಆದರೆ ಅವರು ಶರಿರಾವಲಂಬನ ತೊರೆದು ಆತ್ಮನಲ್ಲಿ ಲೀನವಾಗಿ ಬಿಟ್ಟಿದ್ದರು. ಶರೀರ ನಿಷ್ಕಂಪವಾಗಿತ್ತು. ಮನಸ್ಸು ಮೇರುವಿನಂತೆ ದೃಢವಾಗಿತ್ತು. ಅವರಂತೂ ಸರ್ಪ ಸಿಂಹ ವ್ಯಾಘ್ರ ಅಗ್ನಿ ಆದಿಗಳ ಭಾದೆಯನ್ನು ಬಹಳ ನಿಕೃಷ್ಟವಾಗಿ ಭಾವಿಸುತ್ತಿದ್ದರು. ಅವರ ದೃಷ್ಟಿ ಮೋಹನೀಯಾದಿ ಅಂತರಂಗ ಕರ್ಮಗಳ ನಾಶದತ್ತವೇ ಇತ್ತು. ಈ ಸರ್ಪಾದಿಗಳು ಕರ್ಮೋದಯವನ್ನನುಸರಿಸಿಯೇ ಬಂದು ಉಪಸರ್ಗ ಕೊಡುತ್ತವೆಯೆಂದು ತಿಳಿಯುತ್ತಿದ್ದರು. ಇಂತಹ ಸಂಕಟಗಳ ಮೂಲಕಾರಣವಾದ ಕರ್ಮವನ್ನೇ ಸಂಹಾರ ಮಾಡಲು ಯೋಚಿಸುತ್ತಿದ್ದರು. ಈ ಕ್ರೂರ ಪ್ರಾಣಿಗಳು ನಮಗೆಂದೂ ಅಪಕಾರಿಗಳಲ್ಲವೆಂದು ಅವುಗಳ ಬಗ್ಗೆ ಸಮತಾಭಾವ ಧಾರಣೆಮಾಡುತ್ತಿದ್ದರು.

## ವಿಪತ್ತಿಯಲ್ಲಿ ದೃಢತೆ

ಗಜಪಂತದ ಪಂಚಕಲ್ಯಾಣ ಮಹೋತ್ಸವದ ಸಮಯ ಅದು. ಅವರಲ್ಲಿ ಒಂದು ಪ್ರಶ್ನೆ ಹಾಕಿದ್ದೆ.



ನಾನು: ಭಯಂಕರ ಸರ್ಪದಿಂದ ಉಪಸರ್ಗ ಉಂಟಾಗುತ್ತಿದ್ದರೂ ನಿಮ್ಮಲ್ಲಿ ಭಯದ ಚಿನ್ಹೆಯೇ ಮೂಡುವುದಿಲ್ಲ ಏಕೆ? ಸರ್ಪವಂತೂ ಸಾಕ್ಷಾತ್ ಮೃತ್ಯು ಸ್ವರೂಪದಂತಿರುತ್ತದೆ.

ಮಹರಾಜ್: ಎಂತಹ ವಿಪತ್ತಿನ ಪರಿಸ್ಥಿತಿಯಲ್ಲೂ ನಮ್ಮ ಹೃದಯದಲ್ಲಿ ಭಯ ಉತ್ಪನ್ನವಾಗುವುದಿಲ್ಲ. ಸರ್ಪವೇನೋ ಬಂದು ನಮ್ಮ ಶರೀರದ ಮೇಲೆ ಹರಿದಾಡಿ ಹೋಯಿತು. ನಿಜ. ಅದೆಂತಹ ಮಹತ್ಪೂರ್ಣ ಮಾತೆಂದು ಕೇಳುವಿರಿ?

ನಾನು: ಸರ್ಪದಿಂದ ಉಂಟಾದ ಭಾದೆ ಮಾತು ಹಾಗಿರಲಿ. ಅನ್ಯ ಹಿಂಸ್ರ ಜಂತುಗಳ ಉಪಸರ್ಗದಲ್ಲೂ ನೀವು ನಿರ್ಭೀತರಾಗಿರುವುದು ಪರಮಾಶ್ಚರ್ಯದ ಮಾತು.

ಮಹರಾಜ್: ನಮಗೆಂದೂ ಭಯ ಉಂಟಾಗಿಲ್ಲ. ಇಲ್ಲಂತೂ ಭಯದ ಪ್ರಶ್ನೆಯೇ ಇಲ್ಲ. ಒಂದು ವೇಳೆ ಆ ಸರ್ಪ ನಮ್ಮ ಪೂರ್ವದ ಶತೃವಾಗಿದ್ದರೆ ಅದು ನಮಗೆ ಭಾದೆಯನ್ನುಂಟು ಮಾಡದೆ ಬಿಡದು. ಹೆಚ್ಚೆಂದರೆ ಈ ಶರೀರ ಹೋಗಬಲ್ಲದು. ನಮ್ಮಾತ್ಮನಿಗೆ ಏನು ಮಾಡಬಲ್ಲದು?

ನಾನು: ಆ ಸರ್ಪ ನಿಮ್ಮ ಶರೀರವನ್ನು ಸುತ್ತಿಕೊಂಡಾಗ ನೀವೇನನ್ನು ಚಿಂತಿಸುತ್ತಿದ್ದಿರಿ?

ಮಹರಾಜ್: ಆ ಸಮಯ ನಾವು ಸಿದ್ಧ ಪರಮೇಷ್ಠಿಗಳ ಧ್ಯಾನ ಮಾಡುತ್ತಿದ್ದೆವು.

ನಾನು: ಯಾವಾಗ ಸರ್ಪ ನಿಮ್ಮ ಶರೀರದ ಮೇಲೆ ಓಡಾಡುತ್ತಿತ್ತೋ ಆಗ ನಿಮಗೆ ಸ್ಪರ್ಷಜನ್ಯ ವಿಶೇಷ ಅನುಭವವಾಗಿರಬೇಕಲ್ಲ?

ಮಹರಾಜ್: ನಾವು ಧ್ಯಾನದಲ್ಲಿದ್ದೆವು. ಬಾಹ್ಯದ ಅನುಭವವೇ ಆಗ ಆಗುತ್ತಿರಲಿಲ್ಲ.

ಸರ್ಪಕೃತ ಉಪಸರ್ಗ ಜೀವನದಲ್ಲಿ ಅಗ್ನಿ ಪರೀಕ್ಷೆಗಿಂತ ಕಡಿಮೆಯದೇನೂ ಆಗಿರಲಿಲ್ಲ. ಇಂತಹ ಉಪಸರ್ಗಗಳು ಆಗಿಂದಾಗ್ಗೆ ಆಗುತ್ತಲೇ ಇದ್ದವು.

## ಮತ್ತೊಂದು ಸರ್ಪಕೃತ ಉಪಸರ್ಗ

ತಾ. ೨೩.೧೦. ೫೮ರಲ್ಲಿ ಮಹರಾಜರೊಡನಿದ್ದ ನಿಗ್ರಂಥ ಮುನಿ ೧೦೮ ಶ್ರೀ ನೇಮಿಸಾಗರರನ್ನು ಭಾರಾಮತಿಯಲ್ಲಿ ದರ್ಶನಮಾಡಿದೆವು. ಶಾಂತಿಸಾಗರರ ಬಗ್ಗೆ ಕೆಲವು ಮಾಹಿತಿ ತಿಳಿಯಲು ಅವರಲ್ಲಿ ಪ್ರಶ್ನೆ ಮಾಡಿದೆವು. ಅವರು ಸುಮಾರು ೨೮ ವರ್ಷಗಳಿಂದ ಅವರೊಡನಿದ್ದವರು. ಪೂಜ್ಯಶ್ರೀಯವರ ಸರ್ಪಕೃತ ಉಪಸರ್ಗದ ಬಗ್ಗೆ ಮತ್ತಷ್ಟು ವಿವರಗಳನ್ನು ನೀಡಿದರು. ಅವರು ಹೇಳಲಾರಂಭಿಸಿದರು.

''ಕೊನ್ನೂರಿನಲ್ಲಿ ಏಳುನೂರಕ್ಕೂ ಹೆಚ್ಚು ಗುಹಾಗಳಿವೆ. ಅವುಗಳಲ್ಲಿ ಎರಡು ಮಾತ್ರ ಮುಖ್ಯವಾದವುಗಳು. ಪೂಜ್ಯಸ್ವಾಮಿಗಳವರು ಅಷ್ಟಮಿ. ಚತುರ್ದಶಿ ದಿನಗಳಲ್ಲಿ ಆ ಗುಹಾದಲ್ಲಿ ಧ್ಯಾನ ಮಾಡುತ್ತಿದ್ದರು. ಒಂದು ದಿನಾ ಹೀಗಾಯ್ತು....'' ಅವರ ವಿವರಣೆ ಮುಂದುವರಿಯಿತು.

''ಆ ದಿನ ಅವರು ಮೌನ ಧಾರಣೆ ಮಾಡಿದ್ದರು. ಅವರು ಗುಹಾದತ್ತ ಹೋಗುತ್ತಿದ್ದರು. ಒಂದು ಭಾರಿ ಸರ್ಪ ಸಾಕಿದ ನಾಯಿಯಂತೆ ಅವರೊಡನೆ ಹೋಗುತ್ತಿತ್ತು. ಅದು ಬಹಳ ಚಂಚಲವಾಗಿತ್ತು. ಅದನ್ನು ನೋಡಿದ ಜನ ಗಡಿಬಿಡಿಗೊಂಡರು. ಭಯದಿಂದ ಅತ್ತಿತ್ತ ಓಡಾಡತೊಡಗಿದರು. ಜನಗಳ ಕಲಕಲ ರವಕ್ಕೆ ಹೆದರಿದ ಸರ್ಪ ಭಯದಿಂದ ಗುಹಾದಲ್ಲಿ ಅತ್ತಿತ್ತ ಓಡಾಡತೊಡಗಿತ್ತು. ಆಗ ಮಧ್ಯಾನ್ಹದ ಸಮಯ. ಆ ಸರ್ಪ 2 ಗಂಟೆವರೆಗೂ ಅಲ್ಲಿಯೇ ಸುತ್ತಾಡುತ್ತಿತ್ತು. ನಂತರ ಹೊರಟು ಹೋಯಿತು. ಒಂದು ವೇಳೆ ಜನ ಅದನ್ನು ಹಿಡಿದು ಹೊರಗೋಡಿಸುವ ಪ್ರಯತ್ನಮಾಡಿದ್ದರೆ. ಎಲ್ಲಿಯಾದರೂ ಪೂಜ್ಯಶ್ರೀಯವರನ್ನು ಕಚ್ಚಿ ಬಿಡಬಹುದೆಂಬ ಭಯದಿಂದ ಕಿಂಕರ್ತವ್ಯ ಮೂಢರಾಗಿ ಹೋಗಿದ್ದರು. ಒಳಗಡೆ ಅದರ ಆರ್ಭಟದಿಂದ ಜನ ಆತಂಕ ಉದ್ವೇಗಗಳಿಂದ ಬೆದರಿ ಬೆವತು ಹೋಗಿದ್ದರು. ಇದಾವುದರ ಗಮನವೇ ಇಲ್ಲವೇನೋ ಎನ್ನುವಂತೆ ನಿರಾತಂಕ ಧ್ಯಾನದಲ್ಲಿ ಅವರು ಮುಳುಗಿ ಹೋಗಿದ್ದರು.

ನಾನು: ಅಂತಹ ವಿಪತ್ತಿನ ಪರಿಸ್ಥಿತಿಯಲ್ಲಿ ಮಹರಾಜರಿಗೆ ಮಾನಸಿಕ ಸ್ಥಿತ್ಯಂತರವಾಗಿದ್ದುದನ್ನೇನಾದರೂ ಗಮನಿಸಿದಿರಾ?

ನೇ. ಸಾ: ವಿಪತ್ತಿನ ಸಂದರ್ಭದಲ್ಲಿ ಅವರೆಂದೂ ಭಯಪಟ್ಟುಕೊಂಡಿರುವುದನ್ನು ನಾವು ನೋಡಿಯೇ ಇಲ್ಲ.

ಪ್ರಸಂಗಾನುಸಾರ ನಾನು ಕೇಳಿದೆ. ಮತ್ತಿನ್ನೇನಾದರೂ ಇಂತಹದ್ದೇ ಭೀಕರ ಉಪಸರ್ಗವನ್ನು ನೋಡಿದ್ದೀರಾ?

ನೆ. ಸಾ: ಎಷ್ಟೋ ಕೀಟಗಳು ಕಚ್ಚಿ ರಕ್ತ ಹರಿಯುತ್ತಿದ್ದರೂ ಅವರು ತಮ್ಮ ನಿಯಮವನ್ನು ಪೂರೈಸಿಯೇ ಮೇಲೇಳುತ್ತಿದ್ದರು.

## ಸೇಡಬಾಳದಲ್ಲಿ ಮತ್ತೊಂದು ಸರ್ಪ ಭಾದೆ

ನೇಮಿಸಾಗರರು ತಮ್ಮ ಸ್ಮರಣೆಯ ಭಂಡಾರವನ್ನು ತೆಗೆದು ಬಿಚ್ಚಿ ಒಂದೊಂದೇ ಘಟನೆಗಳನ್ನು ಹೊರತೆಗೆದು ಹೇಳತೊಡಗಿದ್ದರು. ಅವರು ಮತ್ತೆ ಮುಂದುವರೆಸಿದರು.



''...... ಸೇಡಬಾಳದಲ್ಲಿ ನಡೆದ ಘಟನೆ ಇದು. ಪೂಜ್ಯ ಶ್ರೀಯವರು ಒಮ್ಮೆ ಒಂದು ಹಾಸುಗಲ್ಲ ಮೇಲೆ ಮೌನ ಚಿಂತನೆಯಲ್ಲಿ ಮಗ್ನರಾಗಿದ್ದರು. ಅದರ ಕೆಳಗೆ ಸುಮಾರು ಐದು ಅಡಿ ಉದ್ದದ ಒಂದು ಘಟ ಸರ್ಪ ಮಲಗಿತ್ತು. ಅದು ಅದರ ವಾಸಸ್ಥಾನ. ರಾತ್ರಿ ಎಲ್ಲಾ ಅದು ಅಲ್ಲೇ ಇರುತ್ತಿತ್ತು. ಬೆಳಗಾಗುತ್ತಲೇ ಪೂಜ್ಯ ಶ್ರೀಯವರು ಕಸಗುಡಿಸುವ ಮಾಲಿಯನ್ನುದ್ದೇಶಿಸಿ ಒಳಗೆ ಎಚ್ಚರಿಕೆಯಿಂದ ಹೋಗು ಎಂದಿಷ್ಟೇ ಹೇಳಿ ಹೊರಟುಹೋದರು. ಅವರ ಮಾತನ್ನು ಕೇಳಿದ್ದೇ ತಡ ಅವನ ನರನಾಡಿಗಳು ಅವ್ಯಕ್ತ ಭಯದಿಂದ ನಿಮಿರಿ ನಿಂತವು. ಹಾವೋ ಚೇಳೋ ಇನ್ನೇನೋ ಎಂದು ಗೊಂದಲದಲ್ಲಿ ಬಿದ್ದ ಅವನು ಒಂದೊಂದಾಗಿ ಕಳ್ಳ ಹೆಜ್ಜೆ ಇಡುತ್ತಾ ಒಳ ನಡೆದ. ಕೈಕಾಲು ನಡುಗುತ್ತಿದ್ದವು. ಹಣೆಯಲ್ಲಿ ಬೆವರ ಹನಿ ಮೂಡಿದವು. ನಡುಗುವ ಕೈಯ್ಯಲ್ಲಿ ಬಗ್ಗಿ ಕಸಗುಡಿಸುವಾಗ ಅವನ ಅಧೋಮುಖ ದೃಷ್ಟಿ ಕಲ್ಲು ಹಾಸಿನ ಕೆಳಗೆ ಬಿತ್ತು. ಅದೇ ಸಮಯಕ್ಕೆ ಆ ಭಾರಿಸರ್ಪ ಹೆಡೆ ಬಿಚ್ಚಿ ಪೂತ್ಕರಿಸಿತು. ಆ ಬಡಪಾಯಿಗೆ ಜೀವವೇ ಬಾಯಿಗೆ ಬಂದು ಕೂತಿತು. ಒಮ್ಮೆಗೇ ಭೂತ ಮೆಟ್ಟಿದವರಂತೆ ಕಿರಿಚುತ್ತಾ ಹೊರ ಓಡಿ ಹೋದ. ಅವನ ಈ ಆಕಸ್ಮಿಕ ಕಿರುಚಾಟದಿಂದ ಜನ ಬೆರಗಾಗಿ ಅವನತ್ತ ಓಡಿಹೋಗಿ ಪ್ರಶ್ನಿಸತೊಡಗಿದರು. ಈ ಸುದ್ದಿ ಎಷ್ಟೋ ದಿನಗಳವರೆಗೆ ಢಣಾಡಂಗುರವಾಗಿ ಜನಗಳ ಬಾಯಿಂದ ಬಾಯಿಗೆ ಓಡಾಡತೊಡಗಿತ್ತು.''

ಕೊಗನೊಲಿ ಗ್ರಾಮದಲ್ಲಿ ನಡೆದ ಇನ್ನೊಂದು ಘಟನೆಯನ್ನು ನೇಮಿಸಾಗರರು ಜ್ಞಾಪಿಸಿಕೊಂಡರು.

''ಮಹರಾಜರು ಕ್ಷುಲ್ಲಕ ಅವಸ್ಥೆಯಲ್ಲಿದ್ದಾಗ ಕೊಗನೊಲಿ ಗ್ರಾಮಕ್ಕೆ ಬಂದಿದ್ದರು. ಅಲ್ಲಿಯ ಪ್ರಾಚೀನ ಮಂದಿರ ಒಂದರಲ್ಲಿ ಧ್ಯಾನಕ್ಕೆ ನಿಂತರು. ಧ್ಯಾನಕ್ಕೆ ಸ್ವಲ್ಪ ಮುನ್ನ ಜಿನೇಂದ್ರ ಭಗವಾನರನ್ನು ಮಧುರ ಕಂಠದಿಂದ ಸ್ತುತಿಸಿದರು. ನಂತರ ಧ್ಯಾನ ಮಗ್ನರಾಗಿ ಹೋದರು. ಸ್ವಲ್ಪ ಸಮಯದಲ್ಲೇ ಒಂದು ಸರ್ಪ ಕಾಣಿಸಿತು. ಬುಸುಗುಟ್ಟುತ್ತಾ ಅತ್ತಿತ್ತ ಹರಿದಾಡುತ್ತ ಬಂದು ನೇರವಾಗಿ ಒಂದು ಒಟ ವೃಕ್ಷವೇನೋ ಎನ್ನುವಂತೆ ನಿರ್ಭಯವಾಗಿ ಅವರ ಶರೀರವೇರಿ ಬಿಟ್ಟಿತು. ಅದು ಅವರ ಪರಮಾಪ್ತ ಮಿತ್ರನೇನೋ ಎನ್ನುವಷ್ಟು ಸಲಿಗೆಯಿಂದ ಅವರ ಶರೀರದ ಮೇಲೆ ನಿರ್ಭೀತವಾಗಿ ಕ್ರೀಡಿಸತೊಡಗಿತ್ತು. ಆಗ ಪೂಜ್ಯಶ್ರೀಯವರು ಕೃಷ್ಣಸರ್ಪದಿಂದ ಶೋಭಾಯಮಾನವಾದ ಚಂದನ ವೃಕ್ಷದಂತೆ ಶೋಭಿಸುತ್ತಿದ್ದರು!''

ನೇಮಿಸಾಗರರು ಸ್ವಲ್ಪ ತಡೆದು ಇನ್ನೇನನ್ನೋ ಜ್ಞಾಪಿಸಿಕೊಂಡವರಂತೆ ಬೇರೆ ವಿಷಯ ಹೇಳತೊಡಗಿದರು:

''ಪೂಜ್ಯ ಶ್ರೀಯವರು ಸಾಮಾಯಿಕ ಪಾಠದಲ್ಲಿ ಹೇಳುತ್ತಿದ್ದ ಮಾತು ''ಸಮತಾ ಸರ್ವಭೂತೇಷು- ಸರ್ವಜೀವಿಗಳಲ್ಲೂ ನನಗೆ ಸಮತಾ ಭಾವವಿರಲಿ''. ಇಲ್ಲಿ,

ಅಕ್ಷರಶಃ ಸತ್ಯವೆನಿಸಿತ್ತು. ಆ ದಯಾಮೂರ್ತಿಯ ಸನ್ನಿಧಿಯಲ್ಲಿ ಯಾವ ಪ್ರಾಣಿಗೆ ತಾನೇ ಭಯ ಹುಟ್ಟೀತು. ಯಾವ ಪ್ರಾಣಿ ಅವರಿಗೆ ಭಯ ಹುಟ್ಟಿಸೀತು? ಅವರಿಗಂತೂ ಕ್ರೂರಮೃಗ ಸಾಧುಮೃಗ ಎನ್ನುವ ಭೇದ ಭಾವವೇ ಇರಲಿಲ್ಲ. ಅಂತಹ ವೀತರಾಗ ಪರಮಹಂಸ ಮುನಿಯ ಸಾನಿಧ್ಯವು ಭಯಕ್ಕೆ ಕಾರಣ ಹೇಗಾದೀತು? ಚತುರ್ಥಕಾಲದ ಮಹಾ ಮುನಿಗಳ ಉಘ್ರ ತಪಶ್ಚರ್ಯೆಯಿಂದ ಆಜನ್ಮ ವೈರವುಳ್ಳ ಪ್ರಾಣಿಗಳೂ ತಮ್ಮತಮ್ಮ ವೈರ ತ್ಯಜಿಸಿ ಶಾಂತವಾಗಿರುತ್ತವೆಯೆಂದು ಶಾಸ್ತ್ರದಲ್ಲಿ ವರ್ಣಿಸಿದೆ. ಪೂಜ್ಯಶ್ರೀಯವರು ಅಂತಹ ವರ್ಣನೆಯನ್ನು ಪ್ರತ್ಯಕ್ಷ ಚರಿತ್ರಾರ್ತ ಮಾಡಿಕೊಟ್ಟರು. ಅವರ ಪುನೀತ ಸಾನಿಧ್ಯ ನಮ್ಮನ್ನು ಕೃತಾರ್ಥರನ್ನಾಗಿ ಮಾಡಿದೆ...'' ಇಷ್ಟು ಹೇಳುವ ಅವರ ಮುಖದಲ್ಲಿ ಗುರು ಭಕ್ತಿಯ ಕಾರಂಜಿ ಪುಟಿಯತೊಡಗಿತ್ತು.

''ಮಹಾತ್ಮ ಎಂದರೆ ಯಾರು? ಯಾರು ನುಡಿದಂತೆ ನಡೆಯುತ್ತಾರೋ. ಮತ್ತು ಮನಸ್ಸು- ಮಾತು- ಕೃತಿ ಈ ಮೂರು ಅನುರೂಪವಾಗಿರುತ್ತವೋ ಅವರೇ ಮಹಾತ್ಮ ಎಂದು ಶೃತಿಕಾರರು ಹೇಳುತ್ತಾರೆ. ಪೂಜ್ಯ ಶ್ರೀಯವರು ''ಮಹಾತ್ಮ'' ಎನ್ನುವುದನ್ನು ಪರೀಕ್ಷಿಸಲೆಂದೇ ಸರ್ಪಗಳು ಎಡಬಿಡದೆ ಅವರನ್ನು ಪರೀಕ್ಷೆಗೆ ಒಳಪಡಿಸುತ್ತಿರುವಂತೆ ಕಾಣುತ್ತಿತ್ತು. ಅವರ ಮಾನಸಿಕ ಸ್ಥಿರತೆಯನ್ನು ಪರೀಕ್ಷಿಸುವುದು ಕೇವಲ ವಿಡಂಬನೆಯ ಮಾತಾಗಿತ್ತು. ಸಾಕ್ಷಾತ್ ಸುರರಾಜನಿಗೆ ಅವರ ಮನಸ್ಸಿನ ಆಳವನ್ನು ತಿಳಿಯಲಸಾಧ್ಯವಿತ್ತು. ಇನ್ನು ಸರ್ಪರಾಜನಿಂದೇನಾದೀತು? ಅದ್ಭುತ ತಪ ಸಾಮರ್ಥ್ಯ ಸರ್ಪಗಳನ್ನು ಆಕರ್ಷಿಸುತ್ತಿದ್ದ ಘಟನೆಗಳು ವರ್ಣಿಸಲ್ಪಟ್ಟಿದೆ. ಪೂಜ್ಯಶ್ರೀಯವರು ಆ ಘಟನೆಗಳನ್ನು ಕಣ್ಣಾರೆ ಕಾಣುವಂತೆ ಮಾಡಿತೋರಿಸಿದ್ದರು. ಅಷ್ಟರಲ್ಲೇ ಉಪಾಧ್ಯಾಯ ದೀಪ ಹಚ್ಚಲು ಬಂದ. ಸಹಜವಾಗಿ ಅವನ ದೃಷ್ಟಿ ಮಹರಾಜರ ಮೇಲೆ ಬಿತ್ತು. ನಿಂತಲ್ಲಿಯೇ ನಾಲ್ಕರ ಛಳಿ ಬಂದವನಂತೆ ನಡುಗತೊಡಗಿದ. ಬೆಂಕಿಯ ಪೆಟ್ಟಿಣ ಕೈಯಿಂದ ಜಾರಿ ದೊಪ್ಪನೆ ಬಿತ್ತು. ಹೋ!. .. .ಹೇ! ಎಂದು ಕೂಗುತ್ತಾ ಅರ್ಕಿಮಿಡೀಸನಂತೆ ಮೈಮೇಲೆ ಪ್ರಜ್ಞೆ ಇಲ್ಲದೆ ಓಡುತ್ತಿದ್ದ. ಜನ ಅವನನ್ನು ಹಿಡಿದು ವಿಷಯ ತಿಳಿದು ಮಂದಿರದ ಹೊರಗೆ ಗುಂಪು ಕಟ್ಟಿ ನಿಂತರು. ಪೂಜ್ಯಶ್ರೀಯವರು ಚಂದನ ವೃಕ್ಷಕ್ಕೆ ತೆಕ್ಕೆ ಬಿದ್ದ ಹಾವಿನಂತೆ ಕಾಣುತ್ತಿದ್ದರು. ಜನಗಳ ಗುಜುಗಜು ಹೆಚ್ಚಿತು. ಭಯದಿಂದ ಸರ್ಪ ಮೈಮೇಲೆ ಬಿರುಸಾಗಿ ಚಲಿಸತೊಡಗಿತು. ಆಗ ಯಾರೇನು ಮಾಡಲಾದೀತು? ಆ ಸರ್ಪವನ್ನು ಅವರ ಶರೀರದಿಂದ ಹೊರಹಾಕುವುದು ಹೇಗೆ ಎನ್ನುವ ವ್ಯರ್ಥ ಪ್ರಶ್ನೆಯನ್ನು ಜನ ಜಗಿಯಲಾರಂಭಿಸಿದರು. ಅದರಿಂದ ಕೃದ್ಧವಾದ ಆ ಕ್ರೂರ ಸರ್ಪ ಆ ಮಹಾತ್ಮನನ್ನು ಕಚ್ಚಿ ಬಿಟ್ಟರೆ ಹೇಗೆ ಎನ್ನುವ ಭಯದಿಂದ ಎಲ್ಲರೂ ಬೆದರಿ ಸುಮ್ಮನೆ ನಿಂತಿದ್ದರು. ಬಹುಶಃ ಆ ಮಹಾತ್ಮನ ಧ್ಯಾನ ಮುಕ್ತಾಯಕ್ಕೆ ಬಂದಿತ್ತೇನೋ. ಅದರ ಸುಳಿವರಿತ ಆ ಸರ್ಪ ಆ ಯೋಗಿಯ ಮೈನಿಂದ ಇಳಿಯಲಾರಂಭಿಸಿತು. ಸರ್ಪ ಆಗ ಬಹಳ



ಶಾಂತವಾಗಿದ್ದಂತೆ ಕಂಡಿತು. ಜನಗಳ ಗುಂಪನ್ನು ನಿರ್ಭಯವಾಗಿ ಸೀಳುತ್ತಾ ಗುಂಪಿನ ಮಧ್ಯದಿಂದಲೇ ಹೊರ ಹರಿದು ಹೋಯಿತು. ಪೂಜ್ಯಶ್ರೀಯವರು ಸರ್ಪವೊಡ್ಡಿದ್ದ ಮತ್ತೊಂದು ಘಟನೆಯಲ್ಲಿ ಗೆದ್ದು ಶುದ್ಧ ಸುವರ್ಣದಂತೆ ವಿಶುದ್ಧಿ ಹೊಂದಿದ್ದರು.''

ಪೂಜ್ಯನೇಮಿಸಾಗರರು ಪೂಜ್ಯಶ್ರೀಯವರ ಶ್ರೇಷ್ಠ ಶಿಷ್ಯರಾಗಿದ್ದರು. ಅವರೊಬ್ಬ ಮಹಾತಪಸ್ವಿ. ಉಪವಾಸ ಮಾಡುವುದರಲ್ಲಿ ನಿಸ್ಸೀಮರು. ೧೯೩೨ರ ಚಾತುರ್ಮಾಸದಲ್ಲಿ ಅವರು ೧೨ ಉಪವಾಸ ಮಾಡಿದ್ದರು. ಅವರ ಅದ್ಭುತ ತಪದ ಪ್ರಭಾವದಿಂದ ದೊಡ್ಡ ದೊಡ್ಡ ಸಾಧುಗಳೂ ವಂದಿಸುತ್ತಿದ್ದರು. ಪೂಜ್ಯ ಆಚಾರ್ಯಶ್ರೀಯವರ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಮತ್ತಷ್ಟು ಚರ್ಚೆ ನಡೆಸಿದೆ. ಅವರು ಸಾವಧಾನ ಪೂರ್ವಕ ಹೇಳತೊಡಗಿದರು.

''ಅವರು ಕ್ಷುಲ್ಲಕರಾಗಿದ್ದಾಗ ನಮ್ಮ ಕುಡಚಿ ಗ್ರಾಮಕ್ಕೆ ಒಮ್ಮೆ ಬಂದಿದ್ದರು. ಅವರ ಆಹಾರ ನಮ್ಮ ಮನೆಯಲ್ಲೇ ಆಗಿತ್ತು. ಅವರ ತೇಜಃಪುಂಜ ವ್ಯಕ್ತಿತ್ವಕ್ಕೆ ನಾನು ಮಾರುಹೋಗಿದ್ದೆ. ಬರುಬರುತ್ತಾ ನನಗೆ ಅವರ ಆಕರ್ಷಣೆ ಉತ್ಕರ್ಷಣೆಯಾಗಿ ಹೋಗಿತ್ತು. ಒಮ್ಮೆ ಅವರು ನನಗೆ ಹೇಳತೊಡಗಿದ್ದರು.

''ನೀವೆಲ್ಲಾ ಭಗವಂತನ ಪೂಜೆ, ಅರ್ಚನೆ, ಶಾಸ್ತ್ರಶ್ರವಣ, ದಾನಾದಿಗಳನ್ನು ಮಾಡುತ್ತೀರಿ. ಇವೆಲ್ಲಾ ಗಜಸ್ನಾನವಿದ್ದಂತೆ. ನಂತರ ಸಂಸಾರಿಕ ಕಾರ್ಯದಲ್ಲಿ ಮುಳುಗಿ ಮತ್ತೆ ಪಾಪ ಮಲ ಕಟ್ಟಿಕೊಳ್ಳುತ್ತೀರಿ''. ಅವರ ಈ ಮಾತಿನಿಂದ ಗಂಭೀರ ವಿಚಾರಕ್ಕೊಳಗಾದೆ. ಅವರು ಸತ್ಯವನ್ನೇ ಹೇಳಿದ್ದರು. ಗೃಹಸ್ಥರ ಎಲ್ಲಾ ಶುಭಕ್ರಿಯೆಗಳು ಗಜಸ್ನಾನದಂತೆ ಇರುತ್ತವೆ. ಗೃಹಸ್ಥ ದೇವಪೂಜಾದಿ ಷಟ್ಕರ್ಮಾಚರಣೆಯಲ್ಲಿ ತೊಡಗಿದಾಗ ಪುಣ್ಯಬಂಧವನ್ನೇನೋ ಗಳಿಸಿಕೊಳ್ಳುತ್ತಾನೆ. ಉಳಿದ ಸಮಯದಲ್ಲಿ ಅವನ ಪರಿಣಾಮ ಅಶುಭವೇ ಇರುವುದರಿಂದ ಪಾಪ ಬಂಧ ಅತ್ಯಧಿಕವಾಗಿ ನಿರಂತರ ಬಂದಿಸಲ್ಪಡುತ್ತದೆ. ಅಂತೂ ಗೃಹಸ್ಥಾಸ್ರಮದಲ್ಲಿ ಜೀವ ಪಾಪ ಪುಣ್ಯಗಳ ರಾಡಿಯಲ್ಲೇ ಅತ್ತಿತ್ತ ಹೊರಳಾಡುವುದೇ ವಿನಃ ಅದರಿಂದ ಮೇಲೇಳುವ ಅವಕಾಶವೇ ಸಿಗದು. ಆದ್ದರಿಂದ ಗೃಹಜೀವನ ಗಜಸ್ನಾನದಂತೆ ವ್ಯರ್ಥ. ಗೃಹಸ್ಥಾಶ್ರಮದಲ್ಲಿ ಸಾಮಾನ್ಯತಃ ನಿರ್ಜರೆ ಕಡಿಮೆ. ಬಂಧವೇ ಅಧಿಕ. ಗೃಹಸ್ಥಾಶ್ರಮ ತ್ಯಜಿಸಿದಾಗಲೇ ಮೋಕ್ಷ ಮಾರ್ಗದ ಮೊದಲು ಮೆಟ್ಟಿಲ ಮೇಲೆ ಕಾಲಿಟ್ಟಂತಾಗುತ್ತದೆ. ಆದ್ದರಿಂದಲೇ ಪರೋಕ್ಷವಾಗಿ ಗೃಹಸ್ಥಾಶ್ರಮ ತ್ಯಾಗದ ಅಗತ್ಯವನ್ನು ಅವರು ಹೀಗೆ ಹೇಳಿದ್ದರೆನ್ನಿಸುತ್ತದೆ.

ಕೊಣ್ಣೂರಿನಲ್ಲಿ ಚಾತುರ್ಮಾಸ ಮಾಡಿದ್ದಾಗ ನಾವು ಕೆಲವರು ಅವರ ಸೇವೆ ಚೆನ್ನಾಗಿ ಮಾಡಿದ್ದೆವು. ನಾವು ನಮ್ಮ ಆಪ್ತ ಮಿತ್ರ ಬಂಡೋಬ ಕುಡಚೀಕರ್‌ರೊಡನೆ ಆಹಾರ ಕೊಡುತ್ತಿದ್ದೆವು. ಮುನಿಯಾಗುವ ಬಯಕೆ ನಮಗೆ ಮೊದಲಿನಿಂದಲೂ

ಇತ್ತು. ಆಚಾರ್ಯಶ್ರೀಯವರ ಸತ್ಸಂಗದಿಂದ ಆ ಭಾವನೆ ಹೆಡೆಯಾಡತೊಡಗಿತು. ಅವರ ಉಪದೇಶದಿಂದ ಕಾರಂಜಿಯಂತೆ ಪುಟಿಯತೊಡಗಿತು. ಅವರ ಶುಭಾಶೀರ್ವಾದದಿಂದ ದೃಢವಾಗಿ ಅಸ್ತಿಭಾರ ಬೆಳೆದು ಹೋಯಿತು.

ಅಲ್ಲಿಯ ಚಾತುರ್ಮಾಸ ಸಮಾಪ್ತಿಯಾಗುವ ಮುನ್ನವೇ ನಾವು ಮತ್ತು ಗೋಕಾಕದ ಪಾಯಸಾಗರರು ಐಕಲ ದೀಕ್ಷೆ ತೆಗೆದುಕೊಂಡಿದ್ದೆವು. ಇದಾದ ಹತ್ತು ತಿಂಗಳ ನಂತರ ಆಶ್ವಿನಿಶುದ್ಧ ೧೧ಕ್ಕೆ ನಾವು ಮುನಿದೀಕ್ಷೆ ಸ್ವೀಕರಿಸಿದ್ದೆವು. ವೀರಸಾಗರರೂ ಮುನಿಯಾಗಿದ್ದರು. ಚಂದ್ರಸಾಗರು ಐಲಕರಾದರು. ಆಚಾರ್ಯಶ್ರೀಯವರಂತಹ ವಿಶುದ್ಧ ಚಾರಿತ್ರಧಾರಿ ನಿಗ್ರಂಥ ಸಾಧುವನ್ನು ಎಲ್ಲಿಯೂ ನೋಡಿಲ್ಲ. ಅವರ ಸಮಾಗಮದಿಂದ ಕೃತಾರ್ಥನಾಗಿ ಹೋಗಿದ್ದೆ. ಗುರುಚರಣಗಳ ಸಮೀಪವೇ ಇರುವಂತದಾಗಿದ್ದು ನನ್ನ ಪರಮ ಭಾಗ್ಯವಾಗಿತ್ತು.''

ಪಾಯಸಾಗರರ ಬಗ್ಗೆಯೂ ಕೆಲವು ವಿಚಾರ ತಿಳಿಸುವುದು ಉಚಿತವಾದೀತು. ಕಾರಣವೇನೆಂದರೆ ಅವರೊಡನೆ ಚರ್ಚೆ ಮಾಡುವುದರಿಂದಲೂ ಆಚಾರ್ಯಶ್ರೀಯವರ ಬಗ್ಗೆ ಅನೇಕ ಮಹತ್ಪೂರ್ಣ ವಿಚಾರಗಳು ದೊರೆಯಬಹುದಿತ್ತು.

ಸ್ತವನಿಧಿ ಕ್ಷೇತ್ರದಲ್ಲಿ ಅವರೊಡನೆ ಚರ್ಚೆ ಮಾಡತೊಡಗಿದೆವು. ''ನನ್ನ ಜೀವನ ಆ ಸಂತರಾಜನ ಪ್ರಸಾದದಿಂದ ಪ್ರಭಾವಿತವಾಗಿದೆ. .. '' ಎಂದು ತಮ್ಮ ಆತ್ಮ ಕಥೆ ಹೇಳಲಾರಂಭಿಸಿದರು ಪಾಯಸಾಗರರು.

## ಪಾಯಸಾಗರರ ಅದ್ಭುತ ಜೀವನ

''ನಾನು ಒಂದು ನಾಟಕ ಕಂಪನಿಯ ಪ್ರಮುಖ ನಟನಾಗಿದ್ದೆ. ಕೆಲವು ಕಾರಣಗಳಿಂದ ಆ ಕಂಪನಿ ತ್ಯಜಿಸಿ ಒಂದು ಗಿರಣಿಯಲ್ಲಿ ಕೆಲಸಕ್ಕೆ ಸೇರಿದೆ. ಕೆಲಸಗಾರರ ಸಂಘಕ್ಕೆ ನಾಯಕನಾಗಿ ಕಾರ್ಮಿಕರ ಪರವಾಗಿ ಗಿರಣಿ ಮಾಲಿಕರ ವಿರುದ್ಧ ಸತ್ಯಾಗ್ರಹ ಸಂಘಟಿಸಿದೆ. ನನ್ನ ಮನಸ್ಸು ರೋಸಿಹೋಗಿತ್ತು. ಏಕಾಂಗಿಯಾಗಿ ಬಳಲುತ್ತಿದ್ದೆ. ಸಂಸಾರಿಕ ಜಂಝಾಟಗಳಿಂದ ಮನಸ್ಸು ಕೆಟ್ಟುಹೋಗಿತ್ತು.

ಜೈನ ಧರ್ಮೀಯನಾಗಿ ಹುಟ್ಟಿದ್ದರೂ. ಜೈನಧರ್ಮದ ಬಗ್ಗೆ ಏನೂ ತಿಳಿದಿರಲಿಲ್ಲ. ಣಮೋಕಾರ ಮಂತ್ರವೂ ಗೊತ್ತಿರಲಿಲ್ಲ, ಭೋಗ ವಿಲಾಸಗಳ ಬೆನ್ನಟ್ಟಿ ಸುಂಟರುಗಾಳಿಯಂತೆ ಸುತ್ತುತ್ತಿದ್ದ ನನಗೆ ಶಾಂತಿ ಎಲ್ಲಿಂದ ಸಿಕ್ಕೀತು. ನಾನು ಸಂಸಾರಿಕ ಯಾತನೆಯಿಂದ ಬಹಳ ದಣಿದಿದ್ದೆ. ಮನಃಶಾಂತಿಗಾಗಿ ಪರಿತಪಿಸುತ್ತಿದ್ದೆ. ನನಗೆ ಆಗ ಯಾವುದೋ ಒಂದು ದಾರಿ ಕಂಡಿತು. ಜಟಾವಿಭೂಷಿತ, ರುದ್ರಾಕ್ಷಿಮಾಲಾಲಂಕೃತ ಚಿದಂಬರ ಬಾಬುವಿನ ರೂಪಧಾರಣೆ ಮಾಡಿಕೊಂಡೆ. ಈ ಸಾಧು ವೇಷ ಧರಿಸಿ ಜೀವನ ನಾಟಕದಲ್ಲಿ ಇನ್ನೊಂದು ಪಾತ್ರ ವಹಿಸತೊಡಗಿದೆ.



ಬೊಂಬಾಯಿ ಮೂಲಕ ಕಾಶಿಗೆ ಬಂದು ಸೇರಿದೆ. ಅಲ್ಲಿ ನಾನಾ ಸಾಧು ಸಂತರ ಸಮಾಗಮವಾಯಿತು.

ನಾನು ಲೌಕಿಕ ಕಾರ್ಯಗಳಲ್ಲಿ ಅತ್ಯಂತ ಪ್ರವೀಣನಾಗಿದ್ದೆ. ಬಹಳ ದಕ್ಷನಾಗಿದ್ದೆ. ಹಿಡಿದ ಗುರಿಯನ್ನು ಪಟ್ಟು ಬಿಡದೆ ಸಾಧಿಸುವ ಛಲಗಾರನಾಗಿದ್ದೆ. ಒಂದು ರೀತಿಯ ಹಠಾಗ್ರಾಹಿ ಸಾಧನಾ ಸಾಮರ್ಥ್ಯ ನನ್ನಲ್ಲಿ ಇತ್ತು. ಹೀಗಾಗಿ ಬಾಹ್ಯದಲ್ಲಿ ಸಾಧುವಾಗಿ ವೇಷ ಪಲ್ಲಟಿಸಿಕೊಂಡರೂ, ಅಂತರಂಗದ ನನ್ನ ದೀಃಶಕ್ತಿ, ವಿಚಾರಶಕ್ತಿ ಪಲ್ಲಟಗೊಂಡಿರಲಿಲ್ಲ. ನಾನಾ ವೇಷಗಳ ಡೋಂಗಿ ಸಾಧುಗಳ ಅಂತಃಸತ್ವವೇನೆಂದು ಒಳ ಹೊಕ್ಕು ನೋಡಿದೆನು. ಉದರ ಪೋಷಣೆಗಾಗಿ ಒಬ್ಬೊಬ್ಬರು ಒಂದೊಂದು ವೇಷ ಕಟ್ಟಿದ್ದರು. ಪಾಪ! ನನಗೆ ಸಾಧು ಜೀವನದಲ್ಲೂ ಭ್ರಮರನಿರಸನವಾಗಿತ್ತು. ಹೀಗೆ ಈ ವೇಶದಲ್ಲೇ ತಿರುಗುತ್ತಾ ತಿರುಗುತ್ತಾ ಯಾವಾಗ ಸೋಲಾಪುರಕ್ಕೆ ಬಂದೆನೋ ಆಗ ನನ್ನಲ್ಲೇ ನಾನು ಕೆಲವು ವಿಚಿತ್ರ ಬದಲಾವಣೆಗಳನ್ನು ಕಂಡೆನು. ಈ ಪಾಖಂಡಿ ಸಾಧು ವೇಷ ಧರಿಸಿದ್ದರಿಂದ ನನಗೆ ಯಾವ ಲಾಭ ಆಯಿತು ಎನ್ನುವ ಪ್ರಶ್ನೆ ನನ್ನನ್ನು ಕಾಡತೊಡಗಿತು. ನನಗೆ ಈ ಪ್ರಶ್ನೆಗೆ ಉತ್ತರ ಸಿಗಲಿಲ್ಲ. ಹಾಗಾದರೆ ನಿನಗೆ ನೀನೇ ಆತ್ಮವಂಚನೆ ಮಾಡಿಕೊಳ್ಳುತ್ತಿದ್ದೀಯೆ ಎಂದು ನನ್ನ ಒಳ ಮನಸ್ಸು ನನ್ನನ್ನು ನಿರಂತರ ಚುಚ್ಚತೊಡಗಿತು. ಈ ಎರಡು ತುಮುಲಗಳಿಗೆ ಸಿಕ್ಕಿ ಮತ್ತಷ್ಟು ಹಣ್ಣುಗಾಯಿ ನೀರುಗಾಯಿ ಆದೆ. ಈ ದ್ವಂದದಿಂದ ಬಿಡಿಸಿಕೊಳ್ಳಲು ಅನೇಕ ಮತ ಮತಾಂತರಗಳ ಧರ್ಮಗ್ರಂಥಗಳನ್ನು ಆಳವಾಗಿ ಅಭ್ಯಸಿಸಲಾರಂಭಿಸಿದೆ. ಅವುಗಳೂ ನನಗೆ ತೃಪ್ತಿಯನ್ನುಂಟುಮಾಡಲಿಲ್ಲ. ಶಾಂತಿಯನ್ನು ಕೊಡಲಿಲ್ಲ. ನನ್ನ ಆಂತರಿಕ ದ್ವಂದಕ್ಕೆ ಸಮಾಧಾನವನ್ನೂ ಹೇಳಲಿಲ್ಲ. ಹಾಗಿದ್ದಮೇಲೆ ಈ ಜಟಾಧಾರಿ ಸನ್ಯಾಸಿ ವೇಷದಿಂದೇನು? ಕೂಡಲೇ ಮತ್ತೊಂದು ಪ್ರಶ್ನೆ ಬೇತಾಳದಂತೆ ಬೆನ್ನೇರಿತು!

ಈ ತಾಕಲಾಟಗಳ ಪರಿಣಾಮವಾಗಿ ನಾನು ನನ್ನ ಜೀವನದಲ್ಲಿ ಇನ್ನೊಂದು ವೇಷ ಕಟ್ಟಲು ತಯಾರಿ ನಡೆಸಿದ್ದೆ. ಆದ್ದರಿಂದ ಸ್ವಲ್ಪವೂ ತಡಮಾಡದೆ ಜಟೆ ರುದ್ರಾಕ್ಷಿ ಮಾಲೆಗಳನ್ನು ತೆಗೆದು ಹಾಕಿಬಿಟ್ಟೆ. ಆದರಿಂದ ಸ್ವಲ್ಪ ಸಮಾಧಾನವೇ ಆಯಿತು. ಏಕೆಂದರೆ ಆ ವೇಷಕಟ್ಟಿ ನಾನು ಸಾಧಿಸಿದ್ದು ಅಷ್ಟರಲ್ಲೇ ಇತ್ತು! ಅದನ್ನು ತ್ಯಜಿಸಿದ್ದರಿಂದ ನನಗೆ ಯಾವ ನಷ್ಟವೂ ಆಗಲಿಲ್ಲ. ಇನ್ನು ಯಾವ ಡೋಂಗಿ ಸನ್ಯಾಸಿಯೂ ಆಗಬಾರದೆಂದು ಆಗ ನಿರ್ಧರಿಸಿದೆ. ನಿಜ ಜೀವನದಿಂದ ಸನ್ಯಾಸಿ ಜೀವನ ಆಕರ್ಷಕವಾಗಿ ಕಂಡಿತ್ತು. ಅದನ್ನು ಪ್ರವೇಶಿಸಿ ಸಿಹಿ-ಕಹಿ ಉಂಡನಂತರ ಮತ್ತೆ ನಿಜ ಜೀವನಕ್ಕೇ ಹಿಂತಿರುಗುವಂತಾದುದೊಂದು ವಿಧಿ ವಿಲಾಸ!

ಆಗ ನಾನು ಸುಂದರವಾದ ಗರಿಗರಿಯಾದ ಜುಬ್ಬ ಕಚ್ಚೆ ಪಂಚೆ, ಕೋಟು ಪೇಟ ಮತ್ತು ಕಾಲಿಗೆ ಜೀಕುಜೀಕೆನ್ನುವ ಛಡಾವು ದರಿಸಿ ಮನಬಂದಂತೆ ಸ್ವೇಚ್ಛಾಚಾರಿ ಜೀವನ ನಡೆಸಲಾರಂಭಿಸಿದೆ. ಹೇಯೋಪದೇಯಗಳ ಕಲ್ಪನೆಯೂ ಇಲ್ಲದೆ

ಪಾಪಪುಣ್ಯಗಳ ಪರಿಜ್ಞಾನವೂ ಇಲ್ಲದೆ ವಿಷಯಾಂಧನಾಗಿ ಬಿಟ್ಟೆ. ಸಪ್ತ ವ್ಯಸನಗಳ ದಾಸನಾಗಿಬಿಟ್ಟೆ. ಉಂಡು ಉಟ್ಟು ಭೋಗಿಸುವುದೇ ಜೀವನದ ಗುರಿ ಎಂದು ಭಾವಿಸುತ್ತಾ ಉಡಾಳನಾಗಿಬಿಟ್ಟೆ.''

ಇಷ್ಟು ಹೇಳುವಾಗ ಅವರ ಮುಖದಿಂದ ನಿಟ್ಟುಸಿರೊಂದು ಹೊರಬಿತ್ತು. ಹಣೆಯ ಮೇಲೆ ಪಶ್ಚಾತ್ತಾಪದ ಗೆರೆಗಳು ಮೂಡಿದವು. ಗತಕಾಲದ ತಮ್ಮ ಉದ್ವರ್ತನೆಗೆ ಒಳಗೊಳಗೇ ಬೇಯುತ್ತಿದ್ದರು.

## ಜೀವನದಲ್ಲಿ ಹೊಸ ತಿರುವು

ಗತಕಾಲದ ಸಿಕ್ಕಿನ ಜೀವನದಲ್ಲಿ ಸಿಕ್ಕಿಕೊಂಡಿದ್ದ ಅವರ ಮನಸ್ಸನ್ನು ಹೊರಕ್ಕೆಳೆದು ಭವಿಷ್ಯದ ಸುಂದರ ಜೀವನದ ಕಾರಂಜಿಯಲ್ಲಿ ಮಿಂದೇಳಲು ಮತ್ತೆ ಮುಂದುವರೆಸಿದರು.

''ಯಾವ ಜನ್ಮದ ಸುಕೃತವೋ ನನ್ನಂತಹ ಪಾಪಿಯ ಜೀವನದಲ್ಲೂ ಒಂದು ಒಳ್ಳೆಯ ದಿನ ಬಂದೇ ಬಂದಿತು. ಉಗ್ರ ತಪಸ್ವಿ, ಶ್ರಮಣರಾಜ, ಶಾಂತಿಸಾಗರ ಮಹಾರಾಜರು ಕೋಣ್ಣೂರು ಗುಹೆಯತ್ತ ವಿಹಾರ ಮಾಡುತ್ತಾ ಬಂದಿದ್ದರು. ಅವರ ಆಧ್ಯಾತ್ಮಿಕ ವರ್ಚಸ್ಸು, ಉಗ್ರತಪಸ್ಸು, ಅವರ ನಯನಾಭಿರಾಮ ವೀತರಾಗ ಛವಿ, ಕರ್ಣರಸಾಯನದಂತಿರುವ ಮಾತೃವಾತ್ಸಲ್ಯಪೂರ್ಣ ಪ್ರಸಾದಿಕವಾಣಿ ನನ್ನ ಕಿವಿಯವರೆಗೂ ಬಂದು ಮುಟ್ಟಿದವು. ನನಗೆ ಕುತೂಹಲ ಕೆರಳಿತು. ನೋಡಬೇಕೆಂಬ ಆಸೆ ಚಿಗುರಿತು. ತಡ ಮಾಡದೆ ಹೊರಟೇ ಬಿಟ್ಟೆ. ಏಕೆಂದರೆ ಮಾಡಬೇಕೆನಿಸಿದುದನ್ನು ಮಾಡಿಯೇ ತೀರುವ ಛಲದ ಸ್ವಭಾವ ನನ್ನದು. ಗರಿಗರಿಯಾದ ಪಂಚೆ ಉಟ್ಟಿದ್ದೆ. ಇಸ್ತ್ರಿ ಷರ್ಟ್ ತೊಟ್ಟಿದ್ದೆ. ತಲೆಗೆ ರುಮಾಲು ಜೀಕುಜೀಕೆನ್ನುವ ಛಡಾವು ಹಾಕಿಕೊಂಡು ಅವರ ದರ್ಶನಕ್ಕೆ ಹೊರಟಿದ್ದೆ. ವೀತರಾಗಿ ಮುನಿಯ ದರ್ಶನಕ್ಕೆ ಸರಾಗಿ ಜೀವದ ಅಟ್ಟಹಾಸದ ಮೆರವಣಿಗೆ ಹೊರಟಂತಿತ್ತು! ಇಂತಹ ವೇಷದಲ್ಲಿ ಠೀವಿಯಿಂದ ಹೊರಟ ನನ್ನಲ್ಲಿ ಸಾಧು ಸಂತರನ್ನು ಹೇಗೆ ದರ್ಶನಮಾಡಬೇಕೆಂಬ ಕನಿಷ್ಠ ಸೌಜನ್ಯದ ಸಂಸ್ಕಾರವೂ ಇರಲಿಲ್ಲ. ನನ್ನನ್ನು ನೋಡಿ ಅಲ್ಲಿದ್ದವರಿಗೆಲ್ಲಾ ಮೋಜೆನಿಸಿತು. ಹಲವರು ನನ್ನನ್ನು ನೋಡಿ ಮೂಗು ಮುರಿದರು.

ಇನ್ನು ಕೆಲವರು ಮುಖ ಸೊಟ್ಟಗೆ ಮಾಡಿ ಕುಳಿತರು. ಅನೇಕರು ನನ್ನನ್ನು ತಿನ್ನುವಂತೆ ಗುರುಗುಟ್ಟಿಕೊಂಡು ನೋಡಿದರು. ಮತ್ತೆ ಕೆಲವರು ಅದೇನನ್ನೋ ಒಬ್ಬರಿಗೊಬ್ಬರು ಕಿವಿಯಲ್ಲಿ ಪಿಸುಗುಟ್ಟಿಕೊಳ್ಳುತ್ತಿದ್ದರು. ಹೆಜ್ಜೆ ಹೆಜ್ಜೆಗೂ ವಿಚಿತ್ರ ಪರಿಸ್ಥಿತಿಯಲ್ಲಿ ಸಿಕ್ಕಿಹಾಕಿಕೊಂಡಿರುವಂತೆ ಭಾಸವಾಗುತ್ತಿತ್ತು. ಎಲ್ಲರ ತೀಕ್ಷ್ಣ ದೃಷ್ಟಿ ಎದುರಿಸುತ್ತಲೇ ಅವರ ಸಾನಿಧ್ಯದತ್ತ ನಡೆದೆ. ನನ್ನ ಬದುಕಿನ ರೀತಿಯೇ ನನ್ನನ್ನು ಅಂತಹ ಸ್ಥಿತಿಗೆ ತಳ್ಳಿತ್ತು. ಆ ಮಹಾತ್ಮನ ದಯಾರ್ದ್ರ ದೃಷ್ಟಿ ನನ್ನ ಮೇಲೆ ಬಿತ್ತು.



ನಾನು ಅವರಿಗೆ ವಂದಿಸಿದೆ. ಅದೂ ಒಬ್ಬ ದಿಗಂಬರ ಮುನಿಗೆ ತೋರಬೇಕಾದ ಭಕ್ತಿಯಂತಿರಲಿಲ್ಲ. ಮನಸ್ಸಿನಲ್ಲಿ ಶ್ರದ್ಧೆಯೂ ಇರಲಿಲ್ಲ. ಮೇಲ್ನೋಟಕ್ಕೆ ಎರಡೂ ಕೈ ಜೋಡಿಸಿ ನಮಸ್ಕರಿಸಿದ್ದೆ. ಎಲ್ಲರೂ ಗೊಳ್ಳೆಂದು ನಕ್ಕರು. ಈ ಮೂರ್ಖನಿಗೆ ಮುನಿಯಿಂದೇನಾಗಬೇಕಾಗಿತ್ತೆಂಬ ಭಾವ ಅವರಲ್ಲಿ ತುಂಬಿರಬೇಕು. ಆದರೆ ಆ ಪೂಜ್ಯ ಸಂತರ ಮುಖ ಭೋರ್ಗರೆವ ಸಮುದ್ರದಂತೆ ಗಂಭೀರವಾಗಿತ್ತು. ಲಘುವಾಗಿ ನಗುತ್ತಿದ್ದ ಜನಗಳನ್ನು ಕೈ ಸನ್ನೆಯಿಂದ ಸುಮ್ಮನಾಗಿಸಿದರು. ಅವರ ಕರುಣಾರ್ದ್ರ ದೃಷ್ಟಿ ನನ್ನ ಹೃದಯದ ಆಳಕ್ಕೆ ಹೊಕ್ಕು ನನ್ನನ್ನು ತತ್ತರಿಸುವಂತೆ ಮಾಡಿತು. ಅವರ ಅಂದಿನ ಒಂದೊಂದು ಸಿಹಿ ನುಡಿ ಮಾತೆಯ ಮಮತೆಯ ನಲ್ನುಡಿಯಂತೆ ಭಾಸವಾದವು. ಅದೇಕೋ ನನ್ನ ಹೃದಯ ಹಿಗ್ಗಿನಿಂದ ಕಣ್ಣೀರನ್ನು ಹೊರಸೂಸಿತು. ಕಡಿದುರುಳಿಸಿದ ಕದಳೀ ವೃಕ್ಷದಂತೆ ಅವರ ಚರಣಗಳಿಗೆ ಅಡ್ಡ ಬಿದ್ದೆ. ಅವರ ಕೃಪಾಪೂರ್ಣ ಹಸ್ತ ಸ್ಪರ್ಶದಿಂದ ಪವಿತ್ರನಾಗಿಬಿಟ್ಟಿದ್ದೆ. ನನ್ನನ್ನೇ ನಾನು ಮರೆತು ಬಿಟ್ಟಿದ್ದೆ.''

ಪಾಯಸಾಗರರ ಕಣ್ಣಲ್ಲಿ ನೀರು ತುಂಬಿತ್ತು. ಪತಿತನನ್ನು ಪಾವನಗೊಳಿಸಿದ ಪರಮಗುರುಸ್ಮರಣೆಯಲ್ಲಿ ಸಿಕ್ಕ ವಿಹಂಗಮದಂತಾಗಿತ್ತು ಅವರ ಜೀವ. ಗೊತ್ತು ಗುರಿಇಲ್ಲದ ಅವರ ಜೀವನಕ್ಕೊಂದು ನೆಲೆ-ಬೆಲೆ ತಂದು ಕೊಟ್ಟಿದ್ದ ಮಂಗಳ ಮೂರ್ತಿಯ ಸ್ಮರಣೆಯಿಂದ ಅವರು ಗದ್ಗದಿತರಾಗಿದ್ದರು.

''ಮಹರಾಜ್! ಇವರು ಜೈನ ಕುಲದಲ್ಲಿ ಹುಟ್ಟಿದ್ದರೂ ಧರ್ಮ, ಕರ್ಮ ಒಂದೂ ತಿಳಿಯದ ಮಹಾವ್ಯಸನಿ....'' ಶ್ರಾವಕನೋರ್ವನು ಹೇಳಿದ ಮಾತು ನನ್ನನ್ನು ಎಚ್ಚರಿಸಿತು. ಆ ಮಾತುಗಳು ನನ್ನ ಹೃದಯವನ್ನು ಹಿಂಡಿದವು. ಹೌದು ಅವರು ಸತ್ಯವನ್ನೇ ಹೇಳುತ್ತಿದ್ದಾರೆ ಎಂದು ನನ್ನ ಮನಸ್ಸು ಹೇಳಿತು. ಆ ಮಾತುಗಳು ನನ್ನ ದುರ್ನಡತೆಗೆ ಹಿಡಿದ ಕನ್ನಡಿಯಂತಿದ್ದವು. ಆದ್ದರಿಂದ ನಾನು ತಪ್ಪಿತಸ್ಥನಂತೆ ಮೌನವಹಿಸಿದೆ.''

''ನನ್ನ ನಿಂದಾಯುಕ್ತ ಮಾತುಗಳು ಅವರ ಕಿವಿಗೆ ಸಾಕಷ್ಟು ಬಿತ್ತು. ಆದರೂ ಅವರ ಮುಖಮಂಡಲದಲ್ಲಿ ಯಾವುದೇ ಬದಲಾವಣೆ ಆಗಲಿಲ್ಲ. ಅದೇ ಗಂಭೀರತೆ! ಅದೇ ಅದ್ಭುತ ಶಾಂತಿ! ನಾನು ಅವಾಕ್ಕಾಗಿ ಹೋದೆ. ನನ್ನನ್ನು ಹೊರಕ್ಕೆ ಹಾಕಬಹುದೆಂದುಕೊಂಡಿದ್ದೆ. ನನ್ನ ಮೇಲೆ ಸಿಟ್ಟುಗೊಂಡಾರೆಂದು ಭಾವಿಸಿದ್ದೆ. ಅದಕ್ಕೆ ಬದಲಾಗಿ ಕರುಣೆಯಿಂದ ಕರೆದು ಸನಿಹದಲ್ಲಿ ಕೂಡಿಸಿಕೊಂಡರು. ನಾನು ಎಷ್ಟೋಜನ ಸಾಧುಸಂತರನ್ನು ನೋಡಿದ್ದೆ. ಅವರೊಡನೆ ಹೃದಯ ಬಿಚ್ಚಿ ಮಾತಾಡಿದ್ದೆ. ಎಂತೆಂಥವರೋ ನನ್ನ ಜೀವನದಲ್ಲಿ ಬಂದು ಹೋಗಿದ್ದರು. ಆದರೆ ಪ್ರಥಮನೋಟದಲ್ಲೇ ನನ್ನ ಮಾನಕಷಾಯವನ್ನು ಹುಡಿಹಾರಿಸಿ ನನ್ನ ಹೃದಯದಲ್ಲಿದ್ದ ನಾನು ಎನ್ನುವ ಹಮ್ಮು ಬಿಮ್ಮುಗಳನ್ನು ತೊತ್ತೂಳತುಳಿದು ನಾನೇ

ನಾನೆನ್ನುವ ನನ್ನ ತನವನ್ನು ನನ್ನಲ್ಲಿ ಮೂಡಿಸುವ ಮಾನವತ್ವದ ಸಂಜೀವಿನಿಯನ್ನು ತಮ್ಮ ಕರುಣಾಪೂರ್ಣ ದೃಷ್ಟಿಯಲ್ಲೇ ಸಿಂಚನಗೊಳಿಸುವ ಪರಮ ಕಾರುಣಿಕ ಮಂಗಲಮೂರ್ತಿಯನ್ನೆಂದೂ ಕಂಡಿರಲಿಲ್ಲ. ನನ್ನ ಜೀವನದಲ್ಲಿ ಪ್ರಥಮ ಭಾರಿ ನನ್ನ ಪರಮಗುರುವನ್ನು ಹೀಗೆ ಕಂಡಿದ್ದೆ. ಪಾತಾಳದಲ್ಲಿ ಬಿದ್ದಿದ್ದ ಪರಮ ಪಾತಕಿಯನ್ನು ಪವಿತ್ರತೆಯ ಹಿಮಗಿರಿಯ ದವಳ ಶಿಖರಕ್ಕೆತ್ತಿದ್ದ ನನ್ನ ದೇವರನ್ನು ಹೀಗೆ ಕಂಡಿದ್ದೆ. ನನ್ನ ಮೈಮನಗಳು ಕಂಪಿಸತೊಡಗಿದವು. ಅಣು ಅಣು ಕಣ ಕಣಗಗಳೂ ಗುರುಭಕ್ತಿಯ ಕಂಪನದಿಂದ ಅನುಋಣಿತವಾದವು ನನ್ನ ಕಣ್ಣಲ್ಲಿ ನೀರು ಪುಟಿದೆದ್ದು ಅವರ ಚರಣಗಳನ್ನು ಅಭಿಷೇಕ ಮಾಡಿದವು. ಹೇ ಭಗವಾನ್! ಇವರು ಹೇಳುವುದೆಲ್ಲಾ ಸತ್ಯವೇ ಆಗಿದ್ದರೂ. ಪಶ್ಚಾತ್ತಾಪದಿಂದ ಬೆಂದ ಪತಿತ ಜೀವಕ್ಕೆ ಶಾಂತಿಯ ಮಾರ್ಗವನ್ನು ತೋರಿಸಿ ಎಂದು ಅಡ್ಡ ಬಿದ್ದ ನನ್ನನ್ನು ''ಹೆದರಬೇಡ! ಹೆದರಬೇಡ! ನಿನ್ನ ಕಲ್ಯಾಣವಾದೀತು''ಎಂದು ಅವರ ಮಾತೃ ಹೃದಯ ಆಶೀರ್ವಾಧಿಸಿತು.''

ಇಷ್ಟು ಹೇಳುವಾಗ ಗುರುಭಕ್ತಿಯಿಂದ ಅವರ ಹೃದಯ ಭಾರವಾಗಿ ಹೋಗಿತ್ತು. ಮನಸ್ಸು ಗತಕಾಲದ ಆ ಶುಭೋದಯವನ್ನು ಸವಿಯುತ್ತಿತ್ತು. ಮತ್ತೆ ಹೇಳತೊಡಗಿದರು.

''ಇವರು ನನ್ನ ದರ್ಶನವನ್ನು ಇಂದು ಮಾಡಿದ್ದಾರೆ. ಆದ್ದರಿಂದ ಇವರ ಕಲ್ಯಾಣ ಅವಶ್ಯಆದೀತು'' ಎಂದು ಭವಿಷ್ಯ ನುಡಿದರು. ಆ ಮಾತುಗಳು ನನಗೆ ಹಾಲ್ಜೇನು ಕುಡಿಸಿದಂತಾಯಿತು. ಆ ದಿನವನ್ನು ಹೇಗೆ ಮರೆಯಲಿ. ನನ್ನ ಬಾಳಿನಲ್ಲಿ ತುಂಬಿದ್ದ ಅಜ್ಞಾನದ ಕರಾಳಕತ್ತಲೆಯನ್ನು ಕಿತ್ತೊಗೆದು ಜ್ಞಾನ ಜ್ಯೋತಿಯನ್ನು ಬೆಳಗಿಸಿದ ದಿನ! ಅವರಂತು ನನಗೆ ಆಗ ಶಾಂತಿಯ ಸಾಗರದಂತೇ ಕಂಡಿದ್ದರು. ದಯೆ ದಮ ಶಾಂತಿ ಕರುಣೆಯೇ ಮಾನವ ರೂಪದಲ್ಲಿ ಹೀಗೆ ಬಂದಿತೋ ಎನ್ನುವಂತೆ ನನಗೆ ಅವರ ನೋಟ ಭ್ರಮೆ ಹುಟ್ಟಿಸಿತ್ತು!

ನಾನು ಈ ಹಿಂದೆ ಆತ್ಮ ಶಾಂತಿಗಾಗಿ ನಾನಾ ಸಾಧು ಸಂತರನ್ನು ಭೇಟಿಯಾಗಿದ್ದೆ. ಆದರೆ ಅವರು ಯಾವ ಪ್ರಭಾವವನ್ನೂ ಉಂಟುಮಾಡಿರಲಿಲ್ಲ. ಪೂಜ್ಯಶ್ರೀಯವರ ದರ್ಶನದಿಂದ ನನಗೆ ನನ್ನ ಅಪೂರ್ವ ನಿಧಿ ಸಿಕ್ಕಂತಾಗಿತ್ತು. ಕಳೆದು ಕೊಂಡದ್ದನ್ನು ಮತ್ತೇ ಪ್ರಾಪ್ತಿ ಮಾಡಿಕೊಂಡಂತಾಗಿತ್ತು. ನಾನು ಕೆಲಕಾಲ ಅವರ ಜೊತೆಯಲ್ಲೇ ಇದ್ದು ಅವರ ಸಾಧನಾ ಕ್ರಮವನ್ನು ಲಕ್ಷ್ಯವಿಟ್ಟು ಅಧ್ಯಯನ ಮಾಡತೊಡಗಿದೆ. ಏಳುವಾಗ, ಕೂತುಕೊಳ್ಳುವಾಗ, ಮಾತಾಡುವಾಗ, ಮಲಗುವಾಗ ಅವರ ಸೇವೆ ಮಾಡಿದ್ದುಕೊಂಡು ಅವರ ಆಚಾರ-ವಿಚಾರಗಳನ್ನು ತೀಕ್ಷ್ಣವಾಗಿ ಗಮನಿಸತೊಡಗಿದೆ. ಮದ್ಯ ಮಧು ಮಾಂಸ ಈ ಮಕಾರ ತ್ರಯಗಳನ್ನು ಆಜೀವ



ಪರ್ಯಂತ ತ್ಯಾಗ ಮಾಡಿದೆ. ಶ್ರಾವಕ ನೆಲೆಗಳನ್ನು ಒಂದೊಂದಾಗಿ ಸ್ವೀಕರಿಸಲು ಸಿದ್ದನಾದೆ.

ನನ್ನ ಮೇಲೆ ಅವರ ಪ್ರಭಾವ ಎಷ್ಟಿತ್ತೆಂದರೆ ಸ್ವಚ್ಛಂದ ಮತ್ತು ಸ್ವೇಚ್ಛಾಚಾರಿಯಾದ ನಾನು ಬ್ರಹ್ಮಚರ್ಯದಂತಹ ಮಹಾನ್ ಮತ್ತು ಲೋಕಪಾವನ ವ್ರತವನ್ನು ಅತ್ಯಂತ ದೃಢತೆ ಮತ್ತು ಆತ್ಮವಿಶ್ವಾಸ ಪೂರ್ವಕ ತೆಗೆದುಕೊಳ್ಳಲು ಅಣಿಯಾದೆ. ನಾನು ಏಳನೇ ಪ್ರತಿಮಾಧಾರಿ (ಬ್ರಹ್ಮಚಾರಿ)ಯಾಗಿದ್ದೆ. ಆದರೂ ಅನೇಕರು ನನ್ನನ್ನು ಇನ್ನೂ ಪೂರ್ವ ವೃತ್ತಿಯಿಂದಲೇ ಅಳೆಯುವುದನ್ನು ಬಿಟ್ಟಿರಲಿಲ್ಲ. ನನ್ನ ಅಂತರಂಗದಲ್ಲಿ ಆಗುತ್ತಿದ್ದ ಬದಲಾವಣೆಗಳನ್ನು ಗಮನಿಸಲು ಕುರುಡಾಗಿದ್ದರು. ಇಂದಿನ ಮಹತ್ವ ವ್ಯಕ್ತಿತ್ವಗಳು ಮರ್ಮವನ್ನು ಜಾಣಾಕ್ಷರಾದ ಶಾಂತಿ ಸಾಗರರು ಗಮನಿಸಿದ್ದರು. ಜನಗಳು ಮತ್ತೂಬಿಡದೆ ತಮ್ಮ ಸಂಶಯಗಳನ್ನು ಪೂಜ್ಯಶ್ರೀಯವರಲ್ಲಿ ತೋಡಿಕೊಳ್ಳುತ್ತಲೇ ಇದ್ದರು.

''ಮಹರಾಜ್! ಇವನು ಬಹಳ ವ್ಯಸನಿ. ಇವನೇನೂ ಸಾಮಾನ್ಯ ಮನುಷ್ಯ ಅಂತ ತಿಳಿಯ ಬೇಡ್ರಿ. ಫೋಜ್‌ದಾರ್‌ನನ್ನೂ ಇವ ಬಿಟ್ಟಿಲ್ಲ. ಇವನಲ್ಲೇನು ಕೆಟ್ಟದ್ದಿಲ್ಲ ಅಂತೀರಿ? ಎಲ್ಲಾ ಕೆಟ್ಟದ್ದೂ ಇವನಲ್ಲೇ ತುಂಬಿವೆ. ಒಂದು ಒಳ್ಳೆ ಸಂಗತಿ ಅಂದ್ರಾ ಅವ ಏನಾದ್ರೂ ಮಾಡ್ಲಿಕ್ಕೆ ಹತ್ತಿದ್ರೆ ಮಾಡೋನೇ ಸೈ ನೋಡ್ರೆಲಾ''

ಜನಗಳ ಇಂತಹ ಮಾತುಗಳನ್ನು ಮೌನದಿಂದಲೇ ಸ್ವೀಕರಿಸುತ್ತಿದ್ದರು.

ಆಚಾರ್ಯ ಮಹಾರಾಜರು ಮನೋ ವೈಜ್ಞಾನಿಕ ಬುದ್ಧಿವುಳ್ಳವರಾಗಿದ್ದರು. ತಮ್ಮ ದಿವ್ಯದೃಷ್ಟಿಯಿಂದ ನನ್ನಲ್ಲಿ ಅಡಗಿದ್ದ ಪ್ರಚ್ಛನ್ನ ಆಧ್ಯಾತ್ಮಿಕ ಶಕ್ತಿಯನ್ನು ಗಮನಿಸಿದ್ದರು. ಯಾರು ಏನೇ ಹೇಳಿದ್ದರೂ ಭವಿಷತ್ತಿನ ಚಿಂತನೆಯತ್ತಲೇ ಅವರು ಗಮನ ಹರಿಸುತ್ತಿದ್ದರು. ನಾನು ಒಂದು ದಿನ ಅವರಲ್ಲಿ ಐಲಕ ದೀಕ್ಷೆ ಬೇಡಿದೆ. ಅವರು ಕೂಡಲೇ ನನ್ನ ಪ್ರಾರ್ಥನೆ ಮನ್ನಿಸಿದರು. ನನ್ನ ದೃಢತೆಯನ್ನು ಕಂಡು ವ್ರತಧಾರಣೆ ಮಾಡಬಲ್ಲೆನೆಂಬ ವಿಶ್ವಾಸ ಅವರಿಗೆ ಬಂದಿತ್ತು. ಆಗ ಚಂದ್ರಸಾಗರರು ನನ್ನ ಬಗ್ಗೆ ಆಕ್ಷೇಪವೆತ್ತಿದರು.

''ಮಹರಾಜ್! ಇವರಿಗೆ ವ್ರತ ಸಮಿತಿಗಳೆಂದರೇನು ಗೊತ್ತಿಲ್ಲ. ಐಲಕರಾಗ್ಗಿ ಏನು ಮಾಡಬಲ್ಲರು?'' ಆಗ ಅವರಿಂದ ಯಾವ ಉತ್ತರವೂ ಬರಲಿಲ್ಲ. ಜ್ಞಾನಿಗಳು ವ್ಯರ್ಥವಾಗಿ ಮಾತಾಡುವುದಿಲ್ಲ. ಸೂಕ್ತ ಸಮಯ ಒದಗಿದಾಗಲೇ ಅವರ ಮೌನಭಂಗವಾಗುತ್ತದೆ. ಬಹುಶಃ ಸೂಕ್ತ ಸಮಯದಲ್ಲೇ ಚಂದ್ರಸಾಗರರ ಪ್ರಶ್ನೆಗೆ ಉತ್ತರ ಹೇಳಬೇಕೆಂದು ಆಗ ಮೌನವಹಿಸಿರಬೇಕು.

ಒಂದು ದಿನ ನಾನು ಪೂಜ್ಯಶ್ರೀಯವರಲ್ಲಿ ಒಂದು ವಿನಂತಿ ಮುಂದಿಟ್ಟೆ. ''ಮಹರಾಜ್! ನಾನು ಶೇಡಬಾಳದ ಆಶ್ರಮದಲ್ಲಿ ಶಾಸ್ತ್ರಾಧ್ಯಯನ ಮಾಡಿಕೊಂಡು ಬರಲು ಅಪೇಕ್ಷಿಸುತ್ತೇನೆ. '' ಅವರು ಮೌನ ಸಮ್ಮತಿ ಕೊಟ್ಟರು. ಅಲ್ಲಿದ್ದವರಿಗೆ ಈ ಮಾತುಕೇಳಿ ಮತ್ತೊಂದು ಭಯ ಮೂಡಿತು. ಅಲ್ಲಿಗೆ ಹೋಗಿ ಮತ್ತಿನ್ನೇನೂ ಗಡಿ ಬಿಡಿ ಹಚ್ಚಿ ಬಿಡುತ್ತಾನೋ ಈ ಮನುಷ್ಯ ಎಂದು ಮಾತಾಡಿಕೊಂಡರು. ಆಗ ನನ್ನ ಜವಾಬ್ದಾರಿಯನ್ನು ಬಲಗೊಂಡಾ ಪಾಟೀಲ್ ವಹಿಸಿಕೊಂಡರು. ಅಲ್ಲಿಂದ ಹೋಗಿ ನಾನು ರತ್ನಕರಂಡ ಶ್ರಾವಕಾಚಾರವನ್ನು ಆಳವಾಗಿ ಅಧ್ಯಯನ ಮಾಡಿದೆ. ಹಾಗೆಯೇ ಉಳಿದ ಗ್ರಂಥಗಳ ಅಧ್ಯಯನವೂ ಸಾಗಿತು. ನಾನು ಒಂದು ದೀರ್ಘ ಚಿಂತನ ಮನನ ಸ್ವಾಧ್ಯಾಯ ತಪವನ್ನೇ ಅಲ್ಲಿ ಮಾಡತೊಡಗಿದೆ. ರಾತ್ರಿಯಲ್ಲಿ ಅಧ್ಯಯನ ಚಿಂತನ ಮಾಡಿದ್ದನ್ನು ಹಗಲಿನಲ್ಲಿ ಶ್ರಾವಕರಿಗೆ ಮನ ಮುಟ್ಟುವಂತೆ ಹೇಳುತ್ತಿದ್ದೆ. ನನ್ನ ಉಪದೇಶಕ್ಕೆ ಬಹಳಷ್ಟು ಜನ ಸೇರತೊಡಗಿದರು. ಅದರಿಂದ ನಾನು ಹೆಚ್ಚು ಹೆಚ್ಚು ಉತ್ತೇಜಿತನಾಗಿ ಸ್ವಾಧ್ಯಾಯ ಚಿಂತನೆಯಲ್ಲಿ ನನ್ನನ್ನು ತೊಡಗಿಸಿಕೊಂಡೆ. ಆ ದಿನಗಳು ಕಳೆದುಹೋದವು. ದಿನದಿಂದ ದಿನಕ್ಕೆ ನನ್ನಲ್ಲಿ ಅಪೂರ್ವ ಬದಲಾವಣೆಗಳಾಗತೊಡಗಿದವು. ನಿರಂತರ ಸಾಧನೆಯಿಂದ ನನ್ನಲ್ಲಿ ತತ್ವ ಬಂಡಾರ ತುಂಬಿಹೋಯಿತು. ವಾಕ್ ಚಮತ್ಕಾರ ನನ್ನ ಹುಟ್ಟುಗುಣ. ಲೋಕಾನುಭವಕ್ಕೆ ನನ್ನಲ್ಲೇನೂ ಕಡಿಮೆ ಇರಲಿಲ್ಲ. ನನ್ನ ಮಾತುಗಳಿಗೆ ತತ್ವದ ಮೆರಗು ಸಿಕ್ಕಿತು. ನನ್ನ ತತ್ವಾನುಭವಕ್ಕೆ ಲೋಕಾನುಭವದ ಹೊಳಪು ಕೊಟ್ಟೆ. ಚಮತ್ಕಾರಿಕ ವಾಣಿಯ ಚೈತನ್ಯ ಕೊಟ್ಟೆ. ಸಭೆಯಲ್ಲಿ ಮಾತಾಡುವುದೆಂದರೆ ನನಗೆ ಹಿಂದಿನಿಂದಲೂ ಬಹಳ ಸಂಭ್ರಮ. ನನ್ನ ನಾಟಕ ವೃತ್ತಿ ಮತ್ತು ಗಿರಣಿ ಕಾರ್ಮಿಕರ ನಾಯಕ ವೃತ್ತಿ ಸಾಕಷ್ಟು ಅನುಭವ ತುಂಬಿಕೊಟ್ಟಿದ್ದವು. ಹೀಗಾಗಿ ನಾನು ತತ್ವಗಳನ್ನು ತೂಗಿ ತೂಗಿ ನಾಜೂಕಾದ ಮಾತುಗಳಿಂದ ಚಾತುರ್ಯದ ಉಕ್ತಿಗಳಿಂದ ಜನಗಳ ಮನಸ್ಸಿಗೆ ನಾಟುವಂತೆ ಉಪದೇಶ ಕೊಡುತ್ತಿದ್ದೆ. ಜನಗಳಿಗೆ ನನ್ನ ತತ್ವ ಚಿಂತನೆಯ ಆಕರ್ಷಣೆ ಹೆಚ್ಚಿತ್ತು. ಬರುಬರುತ್ತಾ ನನ್ನ ಹಿಂದಿನ ಕೆಟ್ಟ ಬದುಕನ್ನು ಮರೆಸುವಷ್ಟು ನನ್ನನ್ನು ನಾನೇ ಮೇಲಕ್ಕೆತ್ತಿದೆ. ನನ್ನನ್ನು ನಾನೇ ಒಂದು ಆಧ್ಯಾತ್ಮಿಕ ಶಕ್ತಿಯ ಕೇಂದ್ರವಾಗಿ ಮಾಡಿಕೊಂಡೆ. ಬತ್ತಿಯು ತಾನೂ ಉರಿದು ಬೆಳಕಾಗಿ ಅನ್ಯರಿಗೂ ಬೆಳಕು ತೋರಿಸುವಂತೆ. ನಾನು ನನ್ನ ಆತ್ಮವನ್ನು ಬೆಳಗಿಸಿಕೊಂಡು ಅನ್ಯರಿಗೂ ಬೆಳಕಾಗಿ ಬಾಳುವುದನ್ನು ಕಲಿತೆ. ಇದಕ್ಕೆಲ್ಲಾ ಕಾರಣ ಆ ಮಹಾಗುರುವಿನ ಕೃಪಾಕಟಾಕ್ಷ; ಮತ್ತು ಶುಭಾಶೀರ್ವಾದ. ಅವರೊಮ್ಮೆ ನನ್ನನ್ನು ಮಹಾ ಪಾತಕಗಳ ರಸಾತಲದಿಂದ ಮೇಲಕ್ಕೆ ಎತ್ತದಿದ್ದರೆ ನಾನೆಲ್ಲಿರುತ್ತಿದ್ದೆ? ಆಗ ನನ್ನನ್ನು ಯಾರು ಗುರ್ತಿಸುತ್ತಿದ್ದರು. ಪ್ರವಾಹಕ್ಕೆ ಸಿಕ್ಕಿ ಬಿದ್ದ ಒಂದು ಯಕಃಶ್ಚಿತ ಹುಲ್ಲು ಕಡ್ಡಿಯಂತೆ ದುಃಖಸಾಗರದಲ್ಲಿ ತೇಲಿ ಹೋಗುತ್ತಿದ್ದೆ.



ಕೆಲವು ದಿನಗಳು ಹೀಗೆ ಕಳೆದವು. ರುಕುಡಿಯಲ್ಲಿ ಪಂಚಕಲ್ಯಾಣ ಸಂಭ್ರಮ ಆರಂಭಗೊಂಡಿತು. ಪೂಜ್ಯ ಶ್ರೀಯವರು ಸಂಘ ಸಮೇತ ಆಗಮಿಸಿದರು. ಅಲ್ಲಿಗೆ ಹೋಗಿ ಅವರ ಚರಣರಜವನ್ನು ಭಕ್ತಿಯಿಂದ ಮಸ್ತಕದಲ್ಲಿ ಧರಿಸಿದೆ. ಗುರುಚರಣ ದರ್ಶನ ನನಗೆ ರೋಮಾಂಚನವನ್ನುಂಟುಮಾಡಿತು. ಅವರ ದಯಾಪೂರ್ಣ ಆಶೀರ್ವಾದ ನನ್ನಲ್ಲಿ ನವ ಚೈತನ್ಯ ತುಂಬಿತು. ಬಹಳ ದಿನ ಅಗಲಿದ ತನ್ನ ಕರುಳಕುಡಿಯನ್ನು ಕಂಡಾಗ ವಾತ್ಸಲ್ಯದ ವಾಹಿನಿಯನ್ನೇ ಹರಿಸುವ ಮಾತೆಯ ಹೃದಯದಂತೆ ನನ್ನ ಬಗ್ಗೆ ಎಲ್ಲವನ್ನೂ ಕೇಳಿ ತಿಳಿದುಕೊಂಡು ಸಂತೋಷಪಟ್ಟರು. ಕಾಡಿನಲ್ಲಿ ಕಗ್ಗಲ್ಲಿನಂತೆ ಬಿದ್ದಿದ್ದ ನನ್ನನ್ನು ಸಮಾಜದ ಕಟ್ಟಾವಿರೋಧವನ್ನು ಲೆಕ್ಕಿಸದೆ ಸುಂದರ ಶಿಲ್ಪವನ್ನಾಗಿ ಕಡೆದ ರೂವಾರಿ ಅವರು. ಆದರೂ ಅಂತಹ ಹೆಮ್ಮೆಯ ಒಂದು ಕಿರಣವೂ ಅವರಲ್ಲಿ ಕಾಣಿಸಲಿಲ್ಲ. ಸಂತೃಪ್ತಿಯ ಕಿರುನಗೆಯೂ ಮೂಡಲಿಲ್ಲ. ಅವರದು ಸ್ಥಿತಪ್ರಜ್ಞ ಚೈತನ್ಯ. ಯೋಗಿಗಳ ಆಳವನ್ನು ಅಳೆಯುವವರಾರು?

ಜನಗಳಿಗೆ ನನ್ನ ಬಗ್ಗೆ ಸಂಶಯವಿನ್ನೂ ಕಳೆದಿರಲಿಲ್ಲ. ನನ್ನಲ್ಲಿ ಆಗಿರುವ ಬದಲಾವಣೆಯೂ ತಿಳಿದಿರಲಿಲ್ಲ, ಅದನ್ನು ಜನಗಳಿಗೆ ಮನವರಿಕೆ ಮಾಡಿಕೊಡಲೆಂದೇ ಏನೋ ಒಂದು ಸಂದರ್ಭವನ್ನು ಚೆನ್ನಾಗಿ ಉಪಯೋಗಿಸಿಕೊಂಡರು. ಒಂದು ಸಂಜೆ ಉಪನ್ಯಾಸ ಕಾರ್ಯಕ್ರಮ ನಡೆದಿತ್ತು. ಆಗ ಮಹರಾಜರು ನನ್ನತ್ತ ಹೊರಳಿ ''ಚೆನ್ನಾಗಿ ಅಧ್ಯಯನ ಮಾಡಿ ಬಂದಿರಾ?''ಎಂದು ಕೇಳಿದರು. ಅವರ ಅಂತರ್ಯದ ಭಾವವೇನಿತ್ತೋ ಯಾರು ಬಲ್ಲರು? '' ಹೌದು ಮಹರಾಜ್! ನಿಮ್ಮ ಕೃಪೆಯಿಂದ ಶ್ರದ್ಧೆವಹಿಸಿ ಅಧ್ಯಯನ ಮಾಡಿ ಬಂದಿದ್ದೇನೆ'' ಎಂದು ವಿನಮ್ರವಾಗಿ ಹೇಳಿದೆ. ಅಕ್ಕಪಕ್ಕದಲ್ಲಿ ಕೂತಿದ್ದ ತ್ಯಾಗಿಗಳ ಮುಖದಲ್ಲಿ ಅಪಹಾಸ್ಯದ ಸಣ್ಣ ನಗು ಎಲ್ಲರ ಮುಖದಲ್ಲೂ ಚಿಮ್ಮಿತು. ನನ್ನ ಜೀವನ ಎಲ್ಲರಿಗೂ ತೆರೆದಿಟ್ಟ ಪುಸ್ತಕದಂತಿತ್ತು. ನನ್ನ ಪೂರ್ವವೃತ್ತಿ ಪರಿಚಿತರು ನನ್ನ ಇಂತಹ ಭೂಮ್ಯಾಕಾಶದಂತಹ ಬದಲಾವಣೆ ಬಂದೀತೆಂದು ಯೋಚಿಸಲಾರರು. ವಿಷಯಾಂಧನಾದ ಪೀತಾಂಬರ ಆಧ್ಯಾತ್ಮ ಕೇಂದ್ರದ ರಸ ಬುಗ್ಗೆಯಾಗಬಲ್ಲನೆಂಬುದು ಅವರಿಗೆ ಕನಸಿನ ಮಾತಾಗಿತ್ತು.

ಆಗ ಚಂದ್ರಸಾಗರರ ಉಪನ್ಯಾಸ ನಡೆದಿತ್ತು. ಕೂಡಲೇ ಅವರು ನನಗೆ ಉಪದೇಶ ಕೊಡಲು ಆದೇಶಿಸಿದರು. ನನಗೆ ಒಂದು ಹೊಸ ಹುಮ್ಮಸ್ಸು ಉಕ್ಕಿತು. ನಿರರ್ಗಳವಾಗಿ ಮಾತನಾಡಿದೆ. ಅಂದಿನ ನನ್ನ ಉತ್ಸಾಹ ಪೂರ್ಣ ನಿರರ್ಗಳ ವಾಕ್ಝರಿಯಿಂದ ಅಲ್ಲಿದ್ದವರೆಲ್ಲ ನಿಬ್ಬೆರಗಾಗಿ ಹೋದರು. ಜನಗಳಿಗೆ ನನ್ನಲ್ಲಿ ಆಕರ್ಷಣೆ ಹುಟ್ಟತೊಡಗಿತು.

ಚಂದ್ರಸಾಗರರ ಹಿಂದಿನ ಪ್ರಶ್ನೆಗೆ ಈಗ ಉತ್ತರಿಸುವುದು ಆಚಾರ್ಯ ಮಹಾರಾಜರ ಸರದಿಯಾಗಿತ್ತು.

''ಇಂತವರಿಗೆ ದೀಕ್ಷೆಕೊಡುವುದು ಯೋಗ್ಯವೋ, ಅಲ್ಲವೋ ನೀವೇ ಹೇಳಿ?'' ಮಾರ್ಮಿಕ ಪ್ರಶ್ನೆಯನ್ನು ಅವರತ್ತ ಎಸೆದರು. ನಾನು ಪೂಜ್ಯಶ್ರೀಯವರ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದೆ. ಅವರ ಪೂರ್ಣಾನುಗ್ರಹಕ್ಕೆ ಪಾತ್ರನಾಗಿದ್ದೆ. ಅವರು ವ್ಯಕ್ತಿಗಳ ಅಂತರ್ಗತ ಭಾವಗಳನ್ನು ಅಳೆಯಬಲ್ಲ ಚಾಣಾಕ್ಷರಾಗಿದ್ದರು. ನನ್ನ ಬಗ್ಗೆ ಜನಗಳಿಗೆ ಇದ್ದ ಪೂರ್ವಾಶ್ರಮದ ಹಳೆಗಾಯಗಳು ಕ್ರಮೇಣ ಮಾಯತೊಡಗಿದವು.

ಗುರು ಪ್ರಸಾದದಿಂದ ನಾನು ಕೆಲ ದಿನಗಳ ನಂತರ ದಿಗಂಬರ ಭಗವತೀ ದೀಕ್ಷೆ ಪಡೆದೆನು.''

ಪಾಯಸಾಗರರು ಮುಂದುವರೆಸುತ್ತಾ ಆಚಾರ್ಯ ಶಾಂತಿಸಾಗರರ ಬಗ್ಗೆ ಹೀಗೆ ಹೇಳಿದರು.

''ಆಚಾರ್ಯಶ್ರೀಯವರು ಮಹಾನ್ ಯೋಗಿ. ನನ್ನಂತಹ ಪತಿತನನ್ನು ಪಾವನಗೊಳಿಸಿದ ಮಹಾ ಸಂತ. ಅವರ ಅದ್ಭುತ ಶಾಂತಿ ಮಾರ್ದವಗುಣ, ಹಿತ ಮಿತ ಪ್ರಿಯವಾಣಿ ನನ್ನಲ್ಲಿ ಅಸಾಧಾರಣ ಆಧ್ಯಾತ್ಮಿಕ ಕ್ರಾಂತಿಯನ್ನುಂಟುಮಾಡಿತ್ತು. ನಾನೆಂದೂ ಅವರಲ್ಲಿ ಉಘ್ರತೆ ಮತ್ತು ಕಷಾಯಗಳ ಕಠಿಣತೆ ಕಾಣಲಿಲ್ಲ. ಅವರ ವಾಣಿ ಬಹಳ ಮಾರ್ಮಿಕವಾಗಿತ್ತು. ಜಿಜ್ಞಾಸುಗಳ ವಿವಿಧ ಪ್ರಶ್ನೆಗಳಿಗೆ ಸರ್ವಸಮಾಧಾನಕರ ಒಂದೇ ಉತ್ತರ ಹೇಳುವ ಜ್ಞಾನ ಅವರಲ್ಲಿತ್ತು.

ಅನೇಕ ವರ್ಷಗಳಿಂದ ಅವರ ಪ್ರತ್ಯಕ್ಷ ಸಾನಿಧ್ಯದಲ್ಲಿಲ್ಲ. ಆದರೂ ನಾನು ನಿತ್ಯವೂ ಅವರ ಶ್ರೀಚರಣಗಳಿಗೆ ಪರೋಕ್ಷ ವಂದನೆ ಸಲ್ಲಿಸುತ್ತೇನೆ. ಅವರ ಉಪದೇಶ ಅನುಭವ ಗಮ್ಯ. ಅವರು ಮುಖದಲ್ಲಿ ವೈರಾಗ್ಯ ಭಾವ ಕೇಳಿಸಿತ್ತು. ಅವರ ಸಮ್ಯಗ್‌ಭಾವದ ಬಂಡಾರವಾಗಿದ್ದರು. ಅವರಿಗೆ ಭಕ್ತರಲ್ಲಿ ಸಂತೋಷವೂ, ಶತೃವಿನಲ್ಲಿ ಆಕ್ರೋಶವೂ ಇರಲಿಲ್ಲ. ಸಂಯಮದ ಸಾಕಾರ ಮೂರ್ತಿಯಂತಿದ್ದರು.''

## ಜೀವನದ ಮೂಲಕ ಶಿಕ್ಷೆ

''ಅವರು ತಮ್ಮ ಶಿಷ್ಯಮಂಡಳಿಯನ್ನು ಶಿಷ್ಟಾಚಾರ ಮಾರ್ಗದಲ್ಲಿ ಮುನ್ನಡೆಸಲು ಎಂದೂ ಪಕ್ಷಪಾತ, ಅನ್ಯಾಯ ಹಾಗೂ ಅನೀತಿಯನ್ನು ತೋರಲಿಲ್ಲ. ಸಂಘಕ್ಕೆ ಅನುಗ್ರಹ ತೋರುತ್ತಾ ಸ್ವಾಧ್ಯಯ ಆತ್ಮಚಿಂತನೆಯಾದಿ ಅವಶ್ಯಕ ಕ್ರೀಯೆಗಳಲ್ಲಿ ಸದಾ ಜಾಗರೂಕರಾಗಿದ್ದರು. ಎಂಟೆಂಟು, ಹತ್ತು ಹತ್ತು ದೀರ್ಘ ಉಪವಾಸಗಳನ್ನು ಮಾಡಿಯೂ ಅವರು ಧರ್ಮಧ್ಯಾನದಲ್ಲಿ ಸ್ಥಿರವಾಗಿದ್ದುದನ್ನು ನೋಡಿದ್ದೇನೆ.



ಯಾವುದೇ ಪ್ರತಿಕೂಲ ವಾತಾವರಣದಿಂದ ಕೃದ್ಧವಾದದ್ದಾಗಲೀ, ಅನುಕೂಲ ವಾತಾರಣದಿಂದ ಉಬ್ಬಿಹೋದದ್ದಾಗಲಿ ನಾವು ಕಂಡಿಲ್ಲ. ಅವರು ಸರ್ವ ಪರಿಸ್ಥಿತಿಯಲ್ಲೂ ವೀತರಾಗ ಭಾವದಿಂದ ಸಮಲಂಕೃತರಾಗಿರುತ್ತಿದ್ದರು. ಯಾವಾಗ ಆಚಾರ್ಯಶ್ರೀಯವರ ಸಂಘ ಉತ್ತರದತ್ತ ವಿಹಾರ ಮಾಡಿತೋ ಆಗ ರಾಜ ಮಹರಾಜರು ದೊಡ್ಡ ದೊಡ್ಡ ಅಧಿಕಾರಿಗಳು ಅವರ ಚರಣಗಳಿಗೆ ಪ್ರಣಾಮ ಮಾಡುತ್ತಿದ್ದರು. ಅವರ ಅಮೃತವಾಣಿ ಕೇಳಿ ಅವರ ಅನನ್ಯ ಭಕ್ತರಾಗಿ ಬಿಡುತ್ತಿದ್ದರು.''

ಪಾಯಸಾಗರರ ಅನುಭವದ ಬಂಡಾರ ಇನ್ನೂ ಖಾಲಿಯಾಗಿರಲಿಲ್ಲ. ನನ್ನ ಉತ್ಸಾಹವೂ ಬತ್ತಿರಲಿಲ್ಲ. ಮತ್ತೆ ಹೇಳತೊಡಗಿದರು.

## ಉಪಸ್ವರ್ಗ

''ಸುಮಾರು ಸನ್ 1930ರಲ್ಲಿ ಆಚಾರ್ಯಶ್ರೀಯವರು ರಾಜಕೋಡಾ ಗ್ರಾಮಕ್ಕೆ ಆಗಮಿಸಿದ್ದರು. ಅಲ್ಲಿ ಒಬ್ಬ ಚಿಟ್ನಿ ಬ್ರಾಹ್ಮಣ ಅವರನ್ನು ಕೊಲ್ಲಲು ಹವಣಿಸುತ್ತಿದ್ದ. ಆದರೆ ಅವರ ತಪಃ ಸಾಮರ್ಥ್ಯದಿಂದ ಆ ವಿಘ್ನ ಶೀಘ್ರವೇ ದೂರವಾಯಿತು. ಅಂತಹ ಸಂಕಟ ಸಮಯದಲ್ಲಿ ಸ್ವಲ್ಪವೂ ವಿಚಲಿತರಾಗುತ್ತಿರಲಿಲ್ಲ. ಒಬ್ಬ ಪೋಲೀಸ್ ಅಧಿಕಾರಿ ಆ ದುಷ್ಟನನ್ನು ಹಿಡಿದೆಳೆದು ತಂದು '' ಈ ದುಷ್ಟನಿಗೆ ಏನು ದಂಡ ವಿಧಿಸಲಿ ಮಹರಾಜ್'' ಎಂದು ಪ್ರಾರ್ಥಿಸಿದ.

''ಇವನನ್ನು ಬಿಟ್ಟುಬಿಡಿ. ಇದಿಷ್ಟೇ ನಾವು ಹೇಳುವುದು. ಎಲ್ಲಿಯವರೆಗೆ ನೀವು ಈ ವ್ಯಕ್ತಿಯನ್ನು ಬಿಡುವುದಿಲ್ಲವೋ ಅಲ್ಲಿಯವರೆಗೆ ಅನ್ನ ಜಲ ತ್ಯಾಗ ಮಾಡುತ್ತೇವೆ.'' ಎಂದು ಆ ಪೋಲೀಸ್ ಅಧಿಕಾರಿಗೆ ಸ್ಪಷ್ಟವಾಗಿ ತಿಳಿಸಿಬಿಟ್ಟರು. ಪೋಲೀಸ್ ಅಧಿಕಾರಿಗೆ ದಿಗ್ಭ್ರಮೆಯಾಗಿ ಹೋಯಿತು. ಶತೃವಿನಲ್ಲೂ ಹೀಗೆ ಸಹನೆ ತೋರುವ ಮಹಾಪುರುಷನನ್ನು ನಾನು ಕಂಡೇ ಇರಲಿಲ್ಲ ಎಂದು ಉದ್ಗಾರ ತೆಗೆದ ಆ ಅಧಿಕಾರಿ!''

ಇಂತಹದ್ದೇ ಇನ್ನೊಂದು ಘಟನೆಯನ್ನು ಪ್ರಾಸಂಗಿಕವಾಗಿ ಅನ್ಯ ಸಾಧುವಿನ ಸಂಬಂಧವಾಗಿ ಹೇಳಿದರು.

''ಹಿಂದೆ ಕೊಲ್ಹಾಪುರ ಜಿಲ್ಲೆಯಲ್ಲಿ ಸಿದ್ದಪ್ಪ ಸ್ವಾಮಿಗಳು ಎನ್ನುವ ಮುನಿಗಳಿದ್ದರು. ಅವರು ಒಮ್ಮೆ ಒಂದು ಗ್ರಾಮದ ಹೊರಗಿನ ಗುಫಾದಲ್ಲಿ ಧ್ಯಾನ ಮಾಡುತ್ತಿದ್ದರು. ಒಬ್ಬ ದುಷ್ಟ ಬಾಲಕ ಅವರನ್ನು ಕಲ್ಲಿನಿಂದ ಹೊಡೆದು ಗಾಯಗೊಳಿಸಿದ. ಅವರ ಮೈಯೆಲ್ಲಾ ರಕ್ತಸಿಂಚಿತವಾಗಿತ್ತು. ಆದರೂ ಅವರು ಶಾಂತ ಭಾವ ಕಳೆದುಕೊಳ್ಳಲಿಲ್ಲ. ಬೆಳಗಾಗುತ್ತಲೇ ಗ್ರಾಮದ ಪಟೇಲ ಹುಡುಗನನ್ನು ಪತ್ತೆ ಹಚ್ಚಿ ಹಿಡಿದು ಬಿಟ್ಟ. ಸಿದ್ದಪ್ಪ ಸ್ವಾಮಿಗಳಿಗೆ ಈ ವರ್ತಮಾನ ಮುಟ್ಟಿತು. ಆ

ಹುಡುಗನಿಗೆ ಯಾವ ಶಿಕ್ಷೆಯನ್ನೂ ಕೊಡಬಾರದೆಂದು ಕಟ್ಟಪ್ಪಣೆ ಮಾಡಿದರು. ''ಆ ಹುಡುಗ ನನ್ನನ್ನು ಒಂದು ವೃಕ್ಷದಂತೆ ಭಾವಿಸಿರಬೇಕು. ವೃಕ್ಷವಾದರೂ ಸಿಹಿ ಹಣ್ಣನ್ನು ಕೊಡುತ್ತಿತ್ತು. ನಾನೇನು ಕೊಟ್ಟೆ ಪಾಪ! ಆ ಹುಡುಗನ ಕೈಗಳು ಹೊಡೆದು ಹೊಡೆದು ಎಷ್ಟು ನೋವುಂಡವೋ'' ಎಂದು ಕನಿಕರಿಸಿದರಂತೆ. ಆ ಹುಡುಗನಿಗೆ ಒಂದು ಕುರ್ತಾ ಮತ್ತು ಟೋಪಿ ಕೊಟ್ಟುಕಳಿಸಿಬಿಡಿ ಎಂದರಂತೆ. ಅವರ ಶಾಂತ ಭಾವ ಅಷ್ಟು ಅದ್ಭುತವಾಗಿತ್ತು. ಈ ಮಾತನ್ನು ಜ್ಞಾಪಿಸಿಕೊಳ್ಳುತ್ತಾ ಹೋದಂತೆ ಪಾಯಸಾಗರರ ಮುಖದಲ್ಲಿ ಅದ್ಭುತಶಾಂತಿಯ ಛಪರೆ ಹೊರ ಹೊಮ್ಮುತ್ತಿತ್ತು.

## ಅಪರೂಪದ ಸಮತಾಭಾವ

ಸಾವಿರಾರು ಭಕ್ತರು ಪೂಜ್ಯಆಚಾರ್ಯಶ್ರೀಯವರ ಬಗ್ಗೆ ಅತ್ಯಧಿಕ ಭಕ್ತಿಭಾವವನ್ನು ಜಯಘೋಷದೊಡನೆ ಮಾಡುತ್ತಿದ್ದರು. ಬಾಹ್ಯದ ಈ ಜಯಘೋಷ ಮತ್ತು ಆಡಂಬರಗಳ ಬಗ್ಗೆ ಪಾಯಸಾಗರರಿಗೆ ಒಂದು ಕಿವಿ ಮಾತು ಹೇಳಿದರಂತೆ.

''ಪಾಯಸಾಗರಾ! ಈ ಜಯಘೋಷ ಕ್ಷಣಿಕ! ವಿಪತ್ತು ಕ್ಷಣಿಕ! ಪ್ರತಿಯೊಬ್ಬ ಸಾಧುವೂ ಇಂತಹ ಪರಿಸ್ಥಿತಿಯಲ್ಲಿ ಹರ್ಷವಿಷಾದ ಮಾಡಿ ಪರಿಣಾಮ ಕೆಡಿಸಿಕೊಳ್ಳಬಾರದು''

''ಪೂಜ್ಯ ಶ್ರೀಯವರ ಒಂದೊಂದು ನಡೆಯೂ. ಒಂದೊಂದು ನುಡಿಯೂ ಪರಮಾದರ್ಶವಾದದ್ದು. ಪರಮಾಗಮದಲ್ಲಿ ಹೇಳಿರುವ ಮುನಿಧರ್ಮದ ಮೂರ್ತಿವೆತ್ತ ರೂಪ. ಅವರು ತಮ್ಮ ಕಥನವನ್ನು ಉಪಸಂಹಾರ ಮಾಡುತ್ತಾ ಮತ್ತೆ ಹೀಗೆ ಹೇಳಿದರು.

''ನನ್ನಂತಹ ಬ್ರಷ್ಟ ಧುರಾಚಾರಿಯನ್ನು ಅವರು ಉದ್ಧಾರ ಮಾಡಿದರು. ನನಗೆ ಎಂತಹ ದುರ್ಗತಿ ಕಾದಿತ್ತೋ ನಾ ಕಾಣೆ. ಆ ಮಹಾಪುರುಷ ಸಂಸಾರ ಸಿಂಧುವಿನಲ್ಲಿ ಮುಳುಗೇಳುತ್ತಿದ್ದ ನನ್ನ ಹಿಡಿದೆತ್ತಿ ಉದ್ಧರಿಸಿದ್ದಾರೆ. ಮಹಾವ್ರತದ ಅಪೂರ್ವ ನಿಧಿ ಕೊಟ್ಟು ಕಾಪಾಡಿದ್ದಾರೆ. ಈ ಉಪಕಾರವನ್ನು ಭವಭವಗಳಲ್ಲೂ ಮರೆಯಲಾರೆ. ಅವರ ಪಾವನ ಸ್ಮೃತಿ ನನ್ನಲ್ಲಿ ನಿರಂತರ ಹಸಿರಾಗಿದೆ. ನನಗೆ ಆಗಿಂದಾಗ್ಗೆ ಸ್ವಪ್ನದಲ್ಲೂ ದರ್ಶನ ಕೊಡುತ್ತಾರೆ. ಇಷ್ಟು ಹೇಳುವಾಗ ಅವರ ಕಣ್ಣಾಲೆ ತುಂಬಿಬಂದವು. ಗಂಟಲು ನರಗಳು ಬಿಗಿದು ಧ್ವನಿ ಗದ್ಗದಿತವಾಯಿತು. ಆ ಸಂಯಮ ಜೀವಿಯೂ ಗುರುವಿನ ಅಪಾರ ಉಪಕಾರದ ಸೆಳೆತಕ್ಕೆ ಸಿಕ್ಕಿ ಕ್ಷಣ ಕಸಿವಿಸಿಗೊಂಡಿತು. ''ಎಲೆ ತಮ್ಮಾ! ಅವರು ನನ್ನ ಜೀವನ ನೌಕೆಯ ಪ್ರಕಾಶಸ್ತಂಭ'' ಇಷ್ಟು ಹೇಳುವಾಗ ಅವರು ಭಾವೋದ್ವೇಗಗೊಂಡಂತಿತ್ತು.



## ಮೂಕ ವ್ಯಕ್ತಿಗೆ ಬಂದ ಮಾತು

ಪೂಜ್ಯ ಪಾಯಸಾಗರರು ಮತ್ತೊಂದು ಮಹತ್ಪೂರ್ಣ ಮಾತು ಹೇಳಲು ಅಣಿಯಾದರು.

''ಕೊಲ್ಹಾಪುರ ಗ್ರಾಮದ ನೀಮ್‌ಸಿರ್ ಗ್ರಾಮದಲ್ಲಿ ಒಬ್ಬ ಯುವಕನಿದ್ದ. ಅಣ್ಣಪ್ಪ ದಾಡಿವಾಲಿ ಅವನ ಹೆಸರು. ಅವನು ಶಾಸ್ತ್ರ ಚರ್ಚೆಯಲ್ಲಿ ಪ್ರವೀಣ ಆಕಸ್ಮಿಕವಾಗಿ ಅವನು ಮೂಕನಾಗಿಬಿಟ್ಟ. ನೂರಾರು ಪ್ರಯತ್ನಗಳೆಲ್ಲಾ ವ್ಯರ್ಥವಾದವು. ಅವನಿಗೆ ಪುನಃ ಮಾತು ಬರಲೇ ಇಲ್ಲ. ಅವನಂತೂ ಬಹಳ ದುಃಖ ಪಡುತ್ತಿದ್ದ. ಜನರೆದುರು ಮುಖದೋರಲೂ ನಾಚಿಕೆಪಡುತ್ತಿದ್ದ. ಅವನಿಗೆ ಪೂಜ್ಯಶ್ರೀಯವರ ಪರಿಚಯ ಚೆನ್ನಾಗಿತ್ತು. ಜನ ಅವನನ್ನು ಒತ್ತಾಯ ಪೂರ್ವಕ ಆಚಾರ್ಯ ಶ್ರೀಯವರ ಬಳಿಗೆ ಕರೆದೊಯ್ದರು. ಅವರ ಚರಣಗಳಿಗೆ ಬಿದ್ದು ದುಃಖತಪ್ತನಾದ. ಕರುಣೆಯಿಂದ ಆ ಮಹಾತ್ಮನ ಅಂತಃಕರಣ ದ್ರವಿಸಿತು. ಭಯಪಡಭೇಡ, ಭಯಪಡಬೇಡ ಎಂದು ಆದರದಿಂದ ಮೈದಡವಿದರು.

''ಮಾತಾಡು, ಮಾತಾಡು ನಿನಗೇನೂ ಆಗಿಲ್ಲ. ಎಲ್ಲಿ, ನೀನೊಮ್ಮೆ ಣಮೋಕಾರ ಮಂತ್ರ ಹೇಳು''ಎಂದು ಆ ಸಿದ್ಧ ಪುರುಷ ತನ್ನ ಅಭಯ ಹಸ್ತವನ್ನು ಆ ದುಃಖಿ ಜೀವಿಯ ಮಸ್ತಕದ ಮೇಲಿರಿಸಿದರು. ಮಡಿಗಟ್ಟಿ ನಿಂತಿದ್ದ ನೀರು ತೂಬು ಕಿತ್ತು ರಭಸದಿಂದ ಹೊರನುಗ್ಗಿದಂತೆ ಅವನು ತನ್ನ ಕಂಚಿನ ಕಂಠದಲ್ಲಿ ಣಮೋಕಾರ ಮಂತ್ರ ಪಠಿಸಲಾರಂಭಿಸಿದ. ಅಲ್ಲಿ ಸೇರಿದ್ದ ಜನ ದಿಙ್ಮೂಢರಾಗಿ ಹೋದರು! ಆಶ್ಚರ್ಯದಿಂದ ನಿಬ್ಬೆರಗಾಗಿ ಹೋದರು!! ಅವರ ತಪೋ ಮಹಿಮೆಯನ್ನು ಸ್ವಯಂ ಮೆಲುಕು ಹಾಕತೊಡಗಿದರು.

''ಅಣ್ಣಪ್ಪ ಭಕ್ತಿಭಾವದಿಂದ ಅವರ ಚರಣಗಳಿಗೆ ಮೇಲಿಂದ ಮೇಲೆ ವಂದಿಸುತ್ತಿದ್ದ. ನಾಲ್ಕಾರು ದಿನ ಅವರ ಸೇವೆ ಮಾಡಿಕೊಂಡಿದ್ದು ತನ್ನೂರಿಗೆ ವಾಪಾಸು ಹೊರಟ. ಊರಿಗೆ ವಾಪಾಸು ಬರುತ್ತಲೇ ಮತ್ತೆ ಮೂಕನಾಗಿ ಬಿಟ್ಟ! ಅವನು ಮತ್ತೆ ಆಚಾರ್ಯ ಶ್ರೀಯವರ ಚರಣಗಳ ಸಾನಿಧ್ಯಕ್ಕೆ ಓಡೋಡಿ ಬಂದ. ಹತ್ತು ಹದಿನೈದು ದಿನ ಸೇವೆ ಮಾಡಿಕೊಂಡಿದ್ದ. ಅವರ ದರ್ಶನವಾಗುತ್ತಲೇ ಮಾತು ಅವನ ಬಾಯಿಂದ ಬಂದವು. ಅವನು ಮತ್ತಿನ್ನೆಂದೂ ಮೂಕನಾಗಲಿಲ್ಲ.''

ಯಾವಾಗ ಪಾಯಸಾಗರರು ಈ ಮಾತನ್ನು ಹೇಳುತ್ತಿದ್ದರೋ ಆಗ ನನಗೆ ಹೀಗನ್ನಿಸಿತು. ಏನೆಂದರೆ ಅವರು ನೀಮ್‌ಸಿರ್ ಗ್ರಾಮದ ಭೌತಿಕ ಮೂಕನಿಗೆ ವಾಣಿಯನ್ನು ಪ್ರಧಾನ ಮಾಡಿದ್ದರು. ಅದೇ ರೀತಿ ಪಾಯಸಾಗರರ ರೂಪದಲ್ಲಿ ವಿದ್ಯಮಾನವಾದ ಆಧ್ಯಾತ್ಮಿಕ ಮೂಕನಿಗೂ ಮಂಗಲಮಯ ವಾಣಿಯ ಶಕ್ತಿ ನೀಡಿದ್ದರು.

## ಉದ್ದಂಡ ವ್ಯವಹಾರದಲ್ಲೂ ಪೂರ್ಣಶಾಂತಿ

ಪಾಯಸಾಗರರು ಆಚಾರ್ಯ ಶ್ರೀಯವರ ಅಪೂರ್ವ ಶಾಂತಿಯ ಬಗ್ಗೆ ಒಂದು ಘಟನೆಯನ್ನು ಜ್ಞಾಪಿಸಿಕೊಂಡು ಹೇಳತೊಡಗಿದರು. ನನಗೆ ಹೊಸ ಉತ್ಸಾಹ ಗರಿಗೆದರಿತು. ಕಿವಿದೆರೆದು ಕೇಳಲಾರಂಭಿಸಿದೆ.

''ಸಡಿಲ ನಾಲಿಗೆಯ ಒಬ್ಬ ಅಲ್ಪ ವ್ಯಕ್ತಿ ಅವರ ದರ್ಶನಕ್ಕೆ ಬಂದಿದ್ದ. ಅವರಲ್ಲಿ ಏನೇನೋ ಚರ್ಚಿಸುತ್ತಾ ''ನೀವಿನ್ನೂ ಶಾಸ್ತ್ರಗಳನ್ನು ಸರಿಯಾಗಿ ಪರಿಶೀಲಿಸಿಲ್ಲ'' ಎಂದು ಅಹಂಕಾರದಿಂದ ಹೇಳಿಬಿಟ್ಟ. ಅವನ ಮಾತುಗಳು ನನಗೆ ಹಿಡಿಸಲಿಲ್ಲ. ಲೋಕೋತ್ತರ ಆ ಮಹಾ ತಪಸ್ವಿ ಎಲ್ಲಿ? ಈ ಸಾಮಾನ್ಯ ಪಾಮರನೆಲ್ಲಿ? ''ಮಹಾಪುರುಷರೆದುರು ಗೌರವದಿಂದ ವ್ಯವಹರಿಸುವುದನ್ನು ನೀನು ಮೊದಲು ಕಲಿ'' ಎಂದು ಅವನಿಗೆ ಹೇಳಿಬಿಟ್ಟೆ. ಅಷ್ಟೇ ಶಾಂತ ಧ್ವನಿಯಿಂದ ಅವರು ನನ್ನನ್ನು ತಡೆದು.

''ಪಾಯಸಾಗರಾ! ಅವನ ಪ್ರಕೃತಿ ಪಿಂಡವು ಅಂತಹದ್ದೇ ಇದೆ. ಅವನ ಬಾಯಿಂದ ಮಾತುಗಳು ಸ್ವಾಭಾವಿಕವಾಗಿ ಹಾಗೆಯೇ ಹೊರಡುತ್ತವೆ. ಅದರಲ್ಲಿ ಕೆಟ್ಟ ಮಾತೇನಿದೆ. ಆದ್ದರಿಂದ ಅವನ ಮೇಲೆ ರೋಷ ಮಾಡಬಾರದಪ್ಪ'' ಎಂದು ಸಿಹಿ ಸ್ವರದಲ್ಲಿ ನನ್ನನ್ನು ಎಚ್ಚರಿಸಿದರು. ನಾನು ತಣ್ಣಗಾಗಿಬಿಟ್ಟೆ. ಬಹುಶಃ ಅವರ ಶಾಂತವಾಣಿಯ ಎದುರು ಹರಿಯುವ ವಿಷಧರವೂ ಹೂವಿನ ಹಾರವಾಗಿ ಬಿಡುವುದೇನೋ?''

ಆಚಾರ್ಯ ಶ್ರೀಗಳವರ ದೀಕ್ಷಾ ಗುರುವಿನತ್ತ ಮಾತು ಹೊರಳಿತು. ಅವರ ಬಗ್ಗೆಯೂ ಕೆಲವೊಂದು ವಿಚಾರ ತಿಳಿಸಲಾರಂಭಿಸಿದರು.

## ದೇವೇಂದ್ರ ಕೀರ್ತಿಗಳ ಅದ್ಭುತ ತಪಸ್ಸು

ಅವರು ದೇವೇಂದ್ರ ಕೀರ್ತಿಗಳ ಬಗ್ಗೆ ಒಂದು ಘಟನೆ ಹೇಳಿದರು.

ಅದು ಒಂದು ದಿನದ ಮಾತು. ದೇವೇಂದ್ರ ಕೀರ್ತಿಗಳು* ಗೋಕಾಕ್‌ನಗರದ ಕೊಣ್ಣೂರಿಗೆ ಆಗಮಿಸಿದ್ದರು

ದೇವೇಂದ್ರ ಕೀರ್ತಿಗಳು 105ವರ್ಷ ಜೀವಿಸಿದ್ದರು. ಅವರು ಧಾರಣೆ-ಪಾರಣೆ ಮಾಡುತ್ತಿದ್ದರು. ಅವರಿಗೆ ಅಂತ್ಯದವರೆಗೂ ಹಲ್ಲು ಬಿದ್ದಿರಲಿಲ್ಲ. ಅವರು 16ನೇ ವರ್ಷದಲ್ಲೇ ಮುನಿಪದ ಧಾರಣೆ ಮಾಡಿದ್ದರು. ಅವರು ಬಾಲ ಬ್ರಹ್ಮಚಾರಿಗಳಾಗಿದ್ದರು. ಬರುವಾಗ ರಸ್ತೆಯಲ್ಲೇ ಸೂರ್ಯಾಸ್ತವಾಯಿತು. ದಿಗಂಬರ ಮುನಿ ರಾತ್ರಿ ವಿಹರಿಸುವುದಿಲ್ಲ. ಆದ್ದರಿಂದ ಮಾರ್ಗದಲ್ಲೇ ಉಳಿದರು. ಅವರ ಜೊತೆಯಲ್ಲಿ ಏಗಪ್ಪಾ ಪಂಡಿತರಿದ್ದರು. ಆಗ ಅವರು ತಮ್ಮ ನಾಲ್ಕು ದಿಕ್ಕಿಗೆ



ಗೆರೆ ಎಳೆದು ಅದರೊಳಗೆ ಇಬ್ಬರೂ ಕೂತರು. ಸಾಯಂಕಾಲದ ಸಮಯ. ಸಾಮಾಯಿಕದ ಕಾಲ. ಒಂದು ಭೀಷಣ ವ್ಯಾಘ್ರ ಅಲ್ಲಿ ಬಂದಿತು. ಗೆರೆಯ ಒಳಗೆ ಪ್ರವೇಶಿಸಲು ಅದಕ್ಕೆ ಶಕ್ತಿ ಬಾರದಾಯಿತು. ಹೊರಗೇ ಕುಳಿತು ಭೀಕರವಾಗಿ ಘರ್ಜಿಸಿತು. ಬಾಯಿತೆರೆದು ತನ್ನ ರೌದ್ರ ರೂಪ ತೋರಿಸುತ್ತಿತ್ತು. ಆದರಿಂದ ನಿರ್ಭೀತ ತಪಸ್ವಿ ದೇವಪ್ಪ ಸ್ವಾಮಿಗಳು ಧೈರ್ಯಗೆಡಲಿಲ್ಲ. ಕೆಲ ಸಮಯದ ನಂತರ ಅದು ಹೊರಟು ಹೋಯಿತು.''

ಈ ಘಟನೆಯ ಸಮರ್ಥನೆಯನ್ನು ಏಗಪ್ಪ ಪಂಡಿತನ ಸಂಬಂಧಿಯೊಬ್ಬ ಮಾಡಿದ್ದ. ಈ ಘಟನೆ ಬಗ್ಗೆ ಅವನ ತಾಯಿ ಹೇಳುತ್ತಿದ್ದಳಂತೆ.

ಆಚಾರ್ಯ ಶಾಂತಿಸಾಗರರ ಸ್ಥಿರತೆ, ಸಾಹಸ, ನಿರ್ಭೀಕರತೆ ಮತ್ತು ಆತ್ಮ ನಿಮಗ್ನತೆ ಮುಂತಾದ ಮಹಾ ಗುಣಗಳಿಂದ ಆಕರ್ಷಿತರಾಗಿ ಅವರ ಹತ್ತಿರ ಬರುವ ಜನಗಳಿಗೆ ಇದು ನಿಜವಾಗಿಯೂ ಚತುರ್ಥಕಾಲವೇ ಅನ್ನಿಸುತ್ತಿತ್ತು. ಅವರ ಶ್ರದ್ಧೆ ಮತ್ತು ಪ್ರವೃತ್ತಿ ಚತುರ್ಥಕಾಲದ ಮುನಿಯಂತೆಯೇ ಇತ್ತು. ಅಷ್ಟೇ ಅಲ್ಲ ಅವರು ಹೋದ ಹೋದಲ್ಲೆಲ್ಲಾ ಧರ್ಮವಾಹಿನಿ ಪಾವನಗಂಗೆಯಾಗಿ ಹರಿಯುತ್ತಿದ್ದಳು. ಅದನ್ನು ನೋಡಿ ಇದು ಪಾಪ ಬಾಹುಳ್ಯದ ಪಂಚಮ ಕಾಲವೆಂದು ಯಾರು ಹೇಳಬಲ್ಲರು?

ಅವರ ಜೀವನ ಅಲ್ಪ ಸಾಮಾಗ್ರಿಗಳಿಂದಲೇ ಸಾಮಾನ್ಯ ಜನಗಳಿಗೆ ರೋಮಾಂಚನವಾಗುತ್ತದೆ. ಒಂದು ವೇಳೆ ಆ ಮಹಾ ಸಾಧಕನ ಜೀವನದ ಸಮಸ್ತ ಸಾಮಾಗ್ರಿಗಳು ದೊರೆತಿದ್ದರೆ ಅವರ ಜೀವನ ವಿಶ್ವದ ಶ್ರೇಷ್ಠ ಆಶ್ಚರ್ಯವೆಂದು ಜನ ಭಾವಿಸುತ್ತಿದ್ದರು. ಆದರೆ ಈ ಕೀರ್ತಿಯ ಕಾಮನ ಅವರ ಉತ್ಕೃಷ್ಟ ಆತ್ಮ ಸಾಧನೆಗೆ ಭಾರಿ ಭಾದಕ ಎಂದು ಅವರು ತಿಳಿದಿದ್ದರು. ಇದೇ ಅವರ ಲೋಕೋತ್ತರ ಮಹಾನತೆಗೆ ಸಾಕ್ಷಿಯಾಗಿತ್ತು. ಇಲ್ಲಿ ಸರ್ಪದ ಒಂದು ಭೀಷಣ ಘಟನೆ ಬರೆಯುವುದು ಉಚಿತವಾಗಿದೆ.

ಒಂದು ದಿನ ಫಲ್ಟಣ್‌ನಲ್ಲಿ ಆಚಾರ್ಯ ಶ್ರೀಯವರು ಆನಂದ ಪೂರ್ವಕ ಆತ್ಮಧ್ಯಾನದಲ್ಲಿ ಲೀನವಾಗಿದ್ದರು. ಆಗ ಅವರ ಮುಖ ಮಂಡಲದಲ್ಲಿ ಅದ್ಭುತ ತೇಜವಿತ್ತು. ಅಸಾಧಾರಣ ಶಾಂತಿ ಇತ್ತು. ಅವರು ಏಕಾಂತದಲ್ಲಿರುವುದನ್ನು ಗಮನಿಸಿ ಅವರ ಚರಣಗಳ ಬಳಿ ಸೇರಿ ಕುಳಿತೆ.

ನಾನು: '' ಮಹರಾಜ್! ಸುಮಾರು ಏಳೆಂಟುನೂರು ಮೈಲಿ ದೂರದಿಂದ ತಮ್ಮ ದಿವ್ಯ ಚರಣಗಳ ದರ್ಶನಕ್ಕಾಗಿ ಬರುತ್ತಿದ್ದೇನೆ. ನಿಮ್ಮ ಚರಣ ದರ್ಶನ ನನಗೆ ಅಮೂಲ್ಯ ನಿಧಿ ಸಿಕ್ಕಂತೆ. ಅದಕ್ಕಿಂತ ಹೆಚ್ಚಿನ ಸಂಪತ್ತು ನನಗೇನೂ ಬೇಡ. ತಮ್ಮ ಶುಭಾಶೀರ್ವಾದದಿಂದ ನನಗೆ ಶಾಂತಿಯೂ ಸರ್ವಾನುಕೂಲತೆಯೂ ದೊರೆತಿದೆ. ಆದರೆ ನನಗೆ ನಿಮ್ಮ ದಿವ್ಯಜೀವನದ ಅಮೂಲ್ಯ ವಿಚಾರವಷ್ಟೇ ಬೇಕು. ಅದರಿಂದ

ನನಗೆ ಮಹಾನ್ ಲಾಭ ಆಗುತ್ತದೆ. '' ಆಗ ನಾನು ರಾಮಟೇಕ್ ಶಾಂತಿನಾಥ ಗುರುಕುಲದ ಸಂಚಾಲಕನಾಗಿದ್ದೆ. ಅದರ ಭಾರ ನನ್ನ ಮೇಲಿತ್ತು. ಧನ ಸಂಚಯದ ಕಠಿಣ ಕಾರ್ಯವೂ ನನ್ನದಾಗಿತ್ತು. ನಾನು ಹೇಳಿದೆ '' ಮಹರಾಜ್! ನಿಮ್ಮ ಹತ್ತಿರ ನಿಮ್ಮ ಜೀವನದ ಅನುಭವದ ಮಾಲನ್ನು ಕೊಂಡುಕೊಂಡು ಮುಪತ್ತಾಗಿ ಕೊಂಡು ಕೊಂಡು ಜನಗಳಿಗೆ ತಿಳಿಸಿ ಹೇಳುತ್ತೇನೆ. ಸಂಸ್ಥೆಗಾಗಿ ಇದರಿಂದ ಸಾವಿರಾರು ರೂ ದಾನ ಸಿಗಲು ಸಮಯವೇನೂ ಹಿಡಿಯುವುದಿಲ್ಲ. ನಿಮ್ಮ ಹತ್ತಿರ ಪಡೆದುಕೊಂಡ (ಅನುಭವ) ಸಾಮಾಗ್ರಿಯನ್ನು ಧಾರ್ಮಿಕ ಜನಗಳ ಪೇಟೆಯಲ್ಲಿ ಬಹುಮೌಲ್ಯಕ್ಕೆ ಮಾರುತ್ತೇನೆ. '' ಆಗ ಅವರು ಬಹಳ ಪ್ರಸನ್ನ ಚಿತ್ತರಾಗಿದ್ದರು. ಆ ಸಂದರ್ಭವನ್ನು ಉಪಯೋಗಿಸಿಕೊಂಡು ಅವರಲ್ಲಿ ಪುನಃ ಒಂದು ಪ್ರಶ್ನೆ ಹಾಕಿದೆ.

''ಮಹರಾಜ್! ಸರ್ಪಭಾದೆಯ ಅನುಭವ ಇನ್ನಷ್ಟು ತಿಳಿಸಿಬಿಡಿ. .. '' ಮೆಲ್ಲಗೆ ಪೀಠಿಕೆ ಹಾಕಿ ಕುಳಿತೆ. ಅವರು ಹೇಳಲಾರಂಭಿಸಿದರು.

''ಅದರಲ್ಲೇನಿದೆ. ಅದು ವ್ಯರ್ಥ ಮಾತು ಬಿಡು. ಅದರಲ್ಲಿ ಯಾವ ಸಾರವೂ ಇಲ್ಲ. ನೀನು ನಮ್ಮ ಕೀರ್ತಿಯನ್ನು ಹೆಚ್ಚಿಸಲು ಯೋಚಿಸುವೆಯೋ? ನಮಗೆ ನಮ್ಮ ಕೀರ್ತಿಯ ಬಯಕೆ ಸ್ವಲ್ಪವೂ ಇಲ್ಲ. ''

''ಮಹರಾಜ್! ನಿಮ್ಮ ದೃಷ್ಟಿ ನಿಮ್ಮ ಸ್ಥಾನಕ್ಕೆ ಉಚಿತವಾಗಿಯೇ ಇದೆ. ಆದರೆ ನನಗೆ ನಿಮ್ಮ ಅನುಭವ ಬೇಕಾಗಿದೆ. ಕೃಪೆಮಾಡಿ ತಿಳಿಸಿ. '' ನನ್ನ ಪ್ರಾರ್ಥನೆ ಅವರ ಹೃದಯಕ್ಕೆ ಮುಟ್ಟಿತು. ಅವರು ಕರುಣೆಯ ಸಾಕಾರ ಮೂರ್ತಿಯಾಗಿದ್ದರು. ನನ್ನ ಮನಸ್ಸು ನೋಯಿಸಲು ಇಷ್ಟ ಪಡದೆ ಅವರ ನೆನಪಿನ ಸುರುಳಿ ಬಿಚ್ಚಿದರು.

## ಆ ಭೀಕರ ಸರ್ಪ

'' ಒಂದು ದಿನ ನಾವು ಒಂದು ಗುಫಾದಲ್ಲಿ ಧ್ಯಾನದಲ್ಲಿದ್ದೆವು. ಅಷ್ಟರಲ್ಲಿ ಏಳೆಂಟು ಹಸ್ತ ಉದ್ದನೆಯ ಬಹಳ ದಪ್ಪನಾದ ಭಯಂಕರ ಸರ್ಪ ಬುಸುಗುಟ್ಟುತ್ತಾ ಅತ್ತ ಹರಿದು ಬರುತ್ತಿತ್ತು. ಅದರ ಶರೀರದ ಮೇಲೆ ಕರಿಯ ಕೂದಲಿದ್ದವು. ಅದು ಬಂದು ನಮ್ಮೆದುರು ಕೆಂಗಣ್ಣು ಮಾಡಿ ಹೆಡೆ ಬಿಚ್ಚಿ ಬುಸುಗುಟ್ಟಹತ್ತಿತ್ತು. ಅದರ ಕಣ್ಣು ಕೆಂಡದಂತೆ ನಿಗಿನಿಗಿಸುತ್ತಿದ್ದವು. ಬಾಲವನ್ನು ಬಿರುಸಾಗಿ ಅಪ್ಪಳಿಸುತ್ತಿತ್ತು. ತೀಕ್ಷ್ಣವಾದ ಕಣ್ಣುಗಳಿಂದ ಅಗ್ನಿ ಜ್ವಾಲೆಯೇ ಹೊರಬರುವಂತೆ ಕಾಣುತ್ತಿತ್ತು. ಅದು ಹಾಗೆಯೇ ಬಹಳಹೊತ್ತು ನಮ್ಮನ್ನು ನೋಡುತ್ತಿತ್ತು. ನಾವು ಅದನ್ನು ಶಾಂತವಾಗಿ ನೋಡುತ್ತಿದ್ದೆವು.



## ಅಮೃತ - ವಿಷಗಳ ಭೇಟಿ

ನಾನು ಕೇಳಿದೆ: ''ಅಂತಹ ಸ್ಥಿತಿಯಲ್ಲಿ ನಿಮಗೆ ಸ್ವಲ್ಪವೂ ಭಯ ಹುಟ್ಟಲಿಲ್ಲವೆ?''
ಮಹರಾಜ್: ''ನಮಗೆ ಎಂದೂ ಭಯವೇ ಹುಟ್ಟುತ್ತಿರಲಿಲ್ಲ. ಅದು ನಮ್ಮನ್ನು, ನಾವು ಅದನ್ನು ಪರಸ್ಪರ ನೋಡುತ್ತಿದ್ದೆವು ಅಷ್ಟೆ. ''

ಸರ್ಪರಾಜ ಶಾಂತಿಯ ಸಾಗರವನ್ನೇ ನೋಡುತ್ತಿದ್ದ. ಮತ್ತು ಶಾಂತಿಯ ಸಾಗರವೇ ಆಗಿದ್ದ ಅವರು ಆ ಯಮರಾಜನನ್ನೇ ನೋಡುತ್ತಿದ್ದರು. ಅವರು ಆ ಯಮರಾಜನನ್ನೂ ಅಹಿಂಸಾಪೂರ್ಣ ಅಮೃತ ದೃಷ್ಟಿಯಿಂದ ನೋಡುತ್ತಿದ್ದರು. ಆಗ ಅಮೃತ ಮತ್ತು ವಿಷಗಳ ಅಪರೂಪದ ಮಿಲನ ಆದಾಗಿತ್ತು!

ನಾನು ಕೇಳಿದೆ: '' ಆಗ ನೀವೇನು ಯೋಚಿಸುತ್ತಿದ್ದಿರಿ?''

ಮಹರಾಜ್: ''ನಾವೇನಾದರೂ ಈ ಜೀವಕ್ಕೆ ಪೂರ್ವದಲ್ಲಿ ಕೆಡುಕು ಮಾಡಿದ್ದರೆ ಅದು ನಮಗೆ ಬಾಧೆಯನ್ನುಂಟುಮಾಡಬಹುದು. ಇಲ್ಲದಿದ್ದರೆ ಸುಮ್ಮನೇ ಹೊರಟುಹೋದೀತು ಎಂದು ವಿಚಾರ ಮಾಡುತ್ತಿದ್ದೆವು. ''

ಅವರು ಅಂದುಕೊಂಡಂತೇ ಆಯಿತು. ಸ್ವಲ್ಪ ಸಮಯದ ನಂತರ ಆ ಜಂತು ಸುಮ್ಮನೇ ಶಾಂತವಾಗಿ ಹೊರಟು ಹೋಯಿತು.

ನಾನು: ''ಮಹರಾಜ್! ಅಂತಹ ಭೀಷಣ ಉಪಸರ್ಗ ಮತ್ತೆಲ್ಲಿಯಾದರೂ ಆಗಿರಬಹುದೆ?''

ಪ್ರಸನ್ನ ಮುಖ ಮುದ್ರೆಯಿಂದ ಇನ್ನೊಂದು ಘಟನೆಯನ್ನು ತಮ್ಮ ನೆನಪಿನ ಆಳದಿಂದ ಹೊರತೆಗೆದರು.

'' ಒಮ್ಮೆ ನಾವು ಕಾಡಿನ ಮಧ್ಯದ ಒಂದು ಜೈನ ಮಂದಿರದೊಳಗೆ ಏಕಾಂತದಲ್ಲಿ ಧ್ಯಾನಕ್ಕೆ ಕುಳಿತೆವು. ''

## ಅಸಂಖ್ಯಾತ ಕಟ್ಟಿರುವೆಗಳಿಂದ ಉಪಸರ್ಗ

''ಆಗ ನಾವು ನಿದ್ರಾ ವಿಜಯ ತಪ ಕೈಗೊಂಡಿದ್ದೆವು. ನಾವು ಆದಿನ ರಾತ್ರಿ ಜಾಗ್ರತವಾಗಿದ್ದು ಧರ್ಮ ಧ್ಯಾನ ಮಾಡುವ ನಿಯಮ ಮಾಡಿಕೊಂಡಿದ್ದೆವು. ದೇವಸ್ಥಾನದ ದೀಪ ಹಚ್ಚಲು ಪೂಜಾರಿ ನಮ್ಮ ಬದಿಯಿಂದ ಹಾದು ಹೋದ. ದೀಪಕ್ಕೆ ಎಣ್ಣೆ ಸುರಿಯುವಾಗ ಎಣ್ಣೆ ಚೆಲ್ಲಿ ಭೂಮಿಯ ಮೇಲೆ ಹರಡಿತು. ದೀಪ ಹಚ್ಚಿ ಅವನು ಹೊರಟುಹೋದ. ಪೂಜಾರಿ ಹೋದ ಸ್ವಲ್ಪ ಕಾಲದಲ್ಲೇ ಎಣ್ಣೆಯ ವಾಸನೆ ಕಟ್ಟಿರುವೆಗಳನ್ನು ಆಕರ್ಷಿಸಿತು. ಕ್ರಮೇಣ ಇರುವೆಗಳ ದೊಡ್ಡದೊಡ್ಡ ಗುಂಪೇ ಬರತೊಡಗಿತು. ಅವು ನಮ್ಮ ಶರೀರವೇರಿ ಓಡಾಡತೊಡಗಿದವು. ಸ್ವಲ್ಪ

ಸಮಯದ ನಂತರ ಅವು ನಮ್ಮ ಶರೀರದ ಅದೋಭಾಗ ನಿತಂಬ ಆದಿಗಳನ್ನು ಕಚ್ಚಿ ತಿನ್ನಲಾರಂಭಿಸಿದವು. ಆಗ ಕೆಳಭಾಗದಿಂದ ರಕ್ತ ಹರಿಯತೊಡಗಿತು. ಈ ರೀತಿ ಕಟ್ಟಿರುವೆಗಳು ಶರೀರವನ್ನು ಸೂಜಿಯಂತೆ ಚುಚ್ಚಿ ಛಿದ್ರಗೊಳಿಸತೊಡಗಿದವು. ಈ ಸ್ಥಿತಿ ರಾತ್ರಿ ಎಲ್ಲಾ ನಡೆದಿತ್ತು. ಆಗ ನಾವು ಸಿದ್ಧ ಭಗವಾನರನ್ನು ಧ್ಯಾನಿಸುತ್ತಿದ್ದೆವು.''

ಎಲ್ಲಿಯಾದರೂ ಒಂದು ಕಟ್ಟಿರುವೆ ಮೈ ಮೇಲೆ ಓಡಾಡಿದರೆ ಹಾರಾಡಿ ಬಿಡುತ್ತಾರೆ. ಕಚ್ಚಿದರಂತೂ ಕೋತಿಗೆ ಚೇಳು ಕಚ್ಚಿದಂತೆ ಅಬ್ಬರಿಸಿ ಬಿಡುತ್ತಾರೆ. ಶರೀರದ ಮೇಲೆ ಅಸಂಖ್ಯಾತ ದೊಡ್ಡ ತಲೆಯ ಕಾಡಿರುವೆಗಳು ನಗ್ನ ಶರೀರವನ್ನಾಕ್ರಮಿಸಿ ಓಡಾಡುತ್ತಾ, ಶರೀರದ ಕೋಮಲ ಅಂಗ, ಗುಹ್ಯ ಭಾಗವನ್ನು ರಾತ್ರಿ ಎಲ್ಲಾ ನಿರ್ಭಯವಾಗಿ ಕತ್ತರಿಸಿ ತಿನ್ನುತ್ತಿರುವಾಗ ಆಗುವ ಭಯಂಕರ ಉಪಸರ್ಗವನ್ನು ವರ್ಣಿಸಲು ಸಾಧ್ಯವೇ ಇಲ್ಲ. ಈ ಉಪಸರ್ಗ ಒಂದೆರಡು ನಿಮಿಷ, ಒಂದೆರಡು ಗಂಟೆಗಳಲ್ಲ, ಇಡೀ ರಾತ್ರಿ ನಡೆದಿತ್ತು. ಆಚಾರ್ಯಶ್ರೀಯವರು ಆ ಅಮಾನುಷ ನರಕ ತುಲ್ಯ ವೇದನೆಯನ್ನು ಸಹಿಸಿ ಧ್ಯಾನದಲ್ಲಿದ್ದರು. ಚತುರ್ಥ ಕಾಲದ ಮಹಾ ಬಲಿಷ್ಠ ಶರೀರಧಾರಿ ಮುನಿಗಳು ಎಂತಹ ಘೋರೋಪಸರ್ಗ ಎದುರಿಸುತ್ತಿದ್ದರೋ, ಅಂತಹ ಉಪಸರ್ಗವೇ ಇದಾಗಿತ್ತು. ಆದರೆ ಪಂಚಮ ಕಾಲದ ಮುನಿಗಳಿಗೆ ಬಲಿಷ್ಠ ಶರೀರವೂ, ದೃಢವಾದ ಮನಸ್ಸೂ ಯಾವುದೂ ಇಲ್ಲ. ಆದರೂ ಇಂತಹ ಭಯಾನಕ ಯಾತನೆಯನ್ನು ರಾತ್ರಿ ಎಲ್ಲಾ ಸಹಿಸಿ ಧ್ಯಾನದಲ್ಲೇ ಇದ್ದರೆಂದ ಮೇಲೆ, ಅವರ ಶರೀರ ನಿರ್ಮಮಕಾರ ಅದ್ಭುತ ಸಹನ ಶಕ್ತಿ, ದೃಢವಾದ ಶರೀರಾತ್ಮ ಭೇದ ವಿಜ್ಞಾನ ಅದೆಷ್ಟು ಉನ್ನತವಾಗಿತ್ತೋ? ಈ ಉಪಸರ್ಗದ ಮುಂದೆ ಸರ್ಪ ಬಾಧೆ ಏನೇನೂ ಇಲ್ಲ,

ಯಾವಾಗ ಇಲ್ಲಿ ಭಯಂಕರ ಉಪಸರ್ಗ ನಡೆದಿತ್ತೋ, ಅತ್ತ ಮಂದಿರದ ಪೂಜಾರಿಗೆ ಕನಸು ಬಿದ್ದಿತ್ತು. ಪೂಜ್ಯ ಆಚಾರ್ಯಶ್ರೀಯವರಿಗೆ ಭಯಂಕರ ಸಂಕಟ ಉಂಟಾಗಿದೆ. ಬೇಗ ಹೊರಡು. ಹೂಂ ಬೇಗ ನಡೆ ಎಂದು ಯಾರೋ ಕನಸಿನಲ್ಲಿ ಒತ್ತಾಯಿಸುತ್ತಿದ್ದರು. ಅವನು ಗಡಬಡಿಸಿ ಎದ್ದು ಹೊರಡಲು ಉದ್ಯುಕ್ತನಾದ ಭಯಂಕರ ಕತ್ತಲೆ, ಕ್ರೂರ ಪ್ರಾಣಿಗಳ ಭಯ ಅವನನ್ನು ನಡುಗಿಸಿತು. ತನ್ನ ಸ್ನೇಹಿತರ ಮನೆಗೆ ಓಡಿ ಹೋಗಿ ಸ್ವಪ್ನದ ವಿಷಯ ತಿಳಿಸಿದ. ಯಾರೂ ಅವನ ಮಾತನ್ನು ನಂಬದೆ ಮತ್ತೆ ನಿದ್ದೆ ಹೋದರು. ಅವನೂ ನಿರಾಸೆಯಿಂದ ಬಂದು ಮಲಗಿದ.

ಬೆಳಕು ಹರಿಯಿತು. ಶ್ರಾವಕರು ಸ್ನಾನಶುದ್ಧರಾಗಿ ಭಗವದ್ದರ್ಶನಕ್ಕೆ ಮಂದಿರಕ್ಕೆ ಬರತೊಡಗಿದರು. ಬಂದು ನೋಡುತ್ತಾರೆ ಪೂಜ್ಯ ಶ್ರೀಯವರ ಶರೀರ ರಕ್ತಸಿಕ್ತವಾಗಿದೆ. ರಕ್ತ ಅವರ ಪೀಠದಿಂದ ದೂರದವರೆಗೂ ಹರಿದಿತ್ತು. ಇರುವೆಗಳ ಸಾಲಿನಿಂದ ರಸ್ತೆ ಮುಚ್ಚಿಹೋಗಿತ್ತು. ಅವರ ಶರೀರ ಇರುವೆಗಳ ಧಾಳಿಯಿಂದ ರಾಹುಗ್ರಸ್ಥ ಚಂದ್ರನಂತಾಗಿತ್ತು. ಇರುವೆಗಳ ಉತ್ಸಾಹವಿನ್ನೂ ಹೆಚ್ಚುತ್ತಲೇ ಇತ್ತು.



ಎಲ್ಲರ ಕಣ್ಣುಗಳೂ ಹನಿಗೂಡಿದವು. ಹೆಂಗಸರು ಮಕ್ಕಳು ಅಳತೊಡಗಿದರು. ಜನಗಳ ವಿಷಾದದ ಬಿಸಿಯುಸಿರಿನಿಂದ ವಾತಾವರಣ ಬಿಸಿ ಏರತೊಡಗಿತು. ಹೊರಗಡೆ ಸೂರ್ಯನೂ ತಾಪವೇರತೊಡಗಿದ್ದ. ಶ್ರಾವಕರು ಕೂಡಲೇ ಉಪಸರ್ಗ ನಿವಾರಣೆಯತ್ತ ಗಮನ ಹರಿಸಿದರು. ಅಲ್ಲಲ್ಲಿ ಸಕ್ಕರೆ ಚೆಲ್ಲಿದರು. ಸಕ್ಕರೆಯ ವಾಸನೆಗೆ ಇರುವೆಗಳು ಶರೀರದಿಂದ ಇಳಿಯತೊಡಗಿದವು. ನೋಡಿದವರ ಕಣ್ಣುಗಳು ಹನಿಯಾಡ ತೊಡಗಿದವು. ಹೃದಯ ಹಿಂಡಿದಂತಾಗುತಿತ್ತು. ಜನಗಳು ಪೂಜ್ಯಶ್ರೀಯವರನ್ನು ಹೂವಿನಂತೆ ಎತ್ತಿಕೊಂಡು ಹೋಗಿ ವೈಯಾವೃತ್ತದಲ್ಲಿ ತೊಡಗಿದರು. ಎಲ್ಲೆಡೆ ಈ ಉಪಸರ್ಗದ ಸುದ್ದಿ ಹರಡಿತು. ಪ್ರತಿಯೊಬ್ಬರೂ ''ಧನ್ಯ ಹೇ ಯೋಗಿ ರಾಜ''ಎಂದು ಪ್ರಶಂಸಿಸತೊಡಗಿದರು. ಇಂತಹ ಉಗ್ರ ಉಪಸರ್ಗ ವಿಜೇತ ತಪಸ್ವಿ ಈ ಸಂಸಾರದಲ್ಲೇ ಇಲ್ಲ ಎಂದು ಕೊಂಡಾಡತೊಡಗಿದರು. ಭವ ಭವಗಳಲ್ಲಿ ನಿಮ್ಮಂತ ಮಹಾ ತಪಸ್ವಿಯ ದರ್ಶನ ಮತ್ತು ಸೇವಾ ಭಾಗ್ಯ ನಮಗೆ ದೊರೆಯಲೆಂದು ಹಲವರು ಹರಕೆ ಹೊತ್ತರು. ಆದರೆ ಶಾಂತಿ ಸಾಗರರ ಚಿತ್ತ ವೃತ್ತಿಯೇ ವಿಲಕ್ಷಣವಾಗಿ ತೋರುತ್ತಿತ್ತು. ಅವರಂತೂ ತಮ್ಮ ಶರೀರಕ್ಕೆ ಉಪಸರ್ಗವಾಗಿಯೇ ಇಲ್ಲವೇನೋ ಮತ್ತು ಉಪಸರ್ಗವಾದ ಶರೀರ ತಮ್ಮಿಂದ ಬೇರೆಯೇ ಏನೋ ಎನ್ನುವಂತೆ ಯಥಾರೀತಿಯ ಅದ್ಭುತ ಸಂಯಮ ಮತ್ತು ಶಾಂತಿಯ ಮುಖ ಮುದ್ರೆಯಲ್ಲಿ ವಿರಾಜಮಾನರಾಗಿದ್ದರು. ಅವರು ಜ್ಞಾನಶರೀರಿಯಾಗಿದ್ದರು. ಇಂದ್ರಿಯ ಭೋಗಗಳ ರಾಡಿಯಲ್ಲಿ ಮುಳುಗಿರುವ ಮೂರ್ಖರಿಗೆ ಆ ಮಹಾ ಯೋಗಿಯ ಆಳವೇನು ತಿಳಿದೀತು. ಅನಾದಿ ಕಾಲದಿಂದಲೂ ಮೋಹನೀಯ ಕರ್ಮದಿಂದ ಕುರುಡನಾದ ಜೀವಿಗೆ ಸಂಸ್ಕೃತ ಜೀವನದ ಸಾಮರ್ಥ್ಯ ತಿಳಿದೀತೇನು?

ಇಷ್ಟೇ! ಆ ರತ್ನಾಕರನ ಸನಿಹದಲ್ಲಿ ಅಪೂರ್ವವಾದ ಎರಡು ರತ್ನ (ವಿಚಾರ) ತಿಳಿಯಿತು. ಅಷ್ಟರಲ್ಲೇ ಸಾಮಾಯಿಕದ ಸಮಯವಾಯಿತು. ಅವರು ತಮ್ಮಾತ್ಮ ಚಿಂತನೆಯಲ್ಲಿ ನಿಮಗ್ನರಾದರು. ಈ ಕಾಲದಲ್ಲೂ ಇಂತಹ ಮಹಾನ್ ಆತ್ಮನ ದರ್ಶನವಾಗುತ್ತಿದೆಯಲ್ಲ ಎನ್ನುವ ಕೌತುಕದಲ್ಲಿ ನಾನು ನಿಮಗ್ನನಾಗಿ ಹೋದೆ.

ಮುನಿದೀಕ್ಷೆಗೆ ಮೊದಲೇ ಭಯಂಕರ ಕಷ್ಟಗಳ ಮೂಲಕ ಪರೀಕ್ಷೆ ಆರಂಭವಾಗಿತ್ತು. ದೀಕ್ಷಾ ನಂತರ ಕಷ್ಟಗಳ ವೇಗ ಹೆಚ್ಚಾಯಿತು. ಆಚಾರ್ಯಶ್ರೀಯವರು ಹಾಲು ಮತ್ತು ಅನ್ನದ ನಿಯಮ ಇಟ್ಟುಕೊಂಡು ಉಳಿದುದನ್ನು ತ್ಯಾಗ ಮಾಡಿದ್ದರು. ಬಾಲ್ಯದಿಂದಲೂ ಅವರ ಶರೀರ ನಿರೋಗವಾಗಿತ್ತು. ಮಹಾವ್ರತಿಗೆ ಶರೀರದ ಬಲ ಅತ್ಯಗತ್ಯವಿದೆ. ಹಾಗೆಂದಮಾತ್ರಕ್ಕೆ ಶರೀರವನ್ನು ಬಲಿಷ್ಠಗೊಳಿಸಿ ಆತ್ಮನನ್ನು ದುರ್ಬಲಗೊಳಿಸಬಾರದು. ಆತ್ಮನ ಪೋಷಣೆಯನ್ನು ಶರೀರದ ಮೂಲಕ ಮಾಡಿಕೊಳ್ಳಬೇಕು. ಅಂದರೆ ಉಪವಾಸ

ತಪಶ್ಚರ್ಯಾದಿಗಳು ನಿರೋಗ ಮತ್ತು ಬಲಿಷ್ಠ ಶರೀರದಿಂದಲೇ ಸಾಧ್ಯ. ಆದ್ದರಿಂದ ಮುನಿಗಳು ಶಾಸ್ತ್ರೋಕ್ತ ಶುದ್ಧ ಆಹಾರದಿಂದ ಪಡೆದುಕೊಂಡ ಶಾರೀರಿಕ ಶಕ್ತಿಯನ್ನು ಶರೀರದ ಬಲಿಷ್ಠತೆಯನ್ನು ಬೆಳೆಸುವುದರತ್ತವೇ ಉಪಯೋಗಿಸದೆ ಉಪವಾಸ ಮತ್ತು ತಪಸ್ಸಿನಿಂದ ಆತ್ಮ ಪೋಷಣೆಗಾಗಿ ಉಪಯೋಗಿಸುತ್ತಾರೆ. ಈ ಕಾರಣದಿಂದಲೇ ಆಚಾರ್ಯಶ್ರೀಯವರು ದೀರ್ಘ ಉಪವಾಸಗಳನ್ನು ಮಾಡುತ್ತಿದ್ದರು. ಆದ್ದರಿಂದ ಅವರ ಶರೀರ ಒಣಗಿದ ಉತ್ತುತ್ತೆಯಂತೆ ಕಾಣುತ್ತಿದ್ದರೂ, ಮುಖದಲ್ಲಿ ತಪಃದೀಪ್ತಿ ಪೂರ್ವಾದ್ರಿಯನ್ನು ದಾಟಿ ಹೊರಸೂಸುವ ಬಾಲಸೂರ್ಯನ ಹೊಂಗಿರಣಗಳಂತೆ ಕಾಣುತ್ತಿತ್ತು.

ಇಷ್ಟೋಪದೇಶದಲ್ಲೂ ಇದೇ ಮಾತು ಬಂದಿದೆ.

ಯಾವಜ್ಜೀವ ಸ್ಯೋಪಕಾರಾಯ ತದ್ದೇಹಾಸ್ಯಾಪಕಾರಾಯ
ಯದ್ದೇಹಸ್ಯೋಪಕಾರಾಯ ತಜ್ಜೀವಸ್ಯಾ ಪಾಕಾರಾಯ

ಉಪವಾಸ, ತಪಾದಿಗಳಿಂದ ಜೀವಕ್ಕೆ ಉಪಕಾರ ಮಾಡಿಕೊಳ್ಳ ಹೊರಟರೆ ದೇಹಕ್ಕೆ (ಘಾತ) ಅಪಕಾರವಾಗುತ್ತದೆ. ದೇಹವನ್ನು ಪೋಷಣೆ ಮಾಡಿಕೊಳ್ಳ ಹೊರಟರೆ ಜೀವಕ್ಕೆ ಘಾತವಾಗುತ್ತದೆ.

## ಆಚಾರ್ಯಶ್ರೀಯವರ ಬಗ್ಗೆ ನೇಮಿಸಾಗರರಿಂದ ಮಾಹಿತಿ

ಒಂದು ದಿನ ನಾನು ಪೂಜ್ಯ ೧೦೮ ಶ್ರೀನೇಮಿಸಾಗರರನ್ನು ಆಚಾರ್ಯಶ್ರೀಯವರ ಬಗ್ಗೆ ಕೆಲವು ವಿಚಾರ ತಿಳಿಸಲು ವಿನಂತಿಸಿದೆ. ದೀರ್ಘಕಾಲ ಅವರು ಗುರುಪಾದಮೂಲದಲ್ಲಿದ್ದ ಪವಿತ್ರಾತ್ಮ. ಅವರ ಸಾಕ್ಷಾತ್ ಅನುಭವ ಬಹಳ ಮಹತ್ವೂರ್ಣವಾಗಿತ್ತು. ಅವರು ಪ್ರಸನ್ನ ಮುಖ ಮುದ್ರೆಯಿಂದ ವಿವರಣೆ ಕೊಡತೊಡಗಿದರು.

''ಶಾಸ್ತ್ರದಲ್ಲಿ ಯಾವ ಆಚರಣೆ ಆಚಾರ್ಯರ ಬಗ್ಗೆ ಹೇಳಲ್ಪಟ್ಟಿದೆಯೋ ಅದೆಲ್ಲವನ್ನೂ ಅವರಲ್ಲಿ ಸರ್ವಾಂಗ ಸಂಪೂರ್ಣ ಕಾಣುತ್ತಿದ್ದೆವು. ಅವರು ಯಾವಾಗಲೂ ಧಾರಣೆ- ಪಾರಣೆ ಸರ್ವೇಸಾಧಾರಣ ಮಾಡುತ್ತಿದ್ದರು. ಉಪವಾಸಗಳನ್ನು ಮಾಡುವುದಂತೂ ಅವರ ನಿತ್ಯದ ಪರಿಪಾಠಿಯಾಗಿತ್ತು. ಭಗವಾನ್ ಋಷಭದೇವನ ತತ್ವಗಳು ಅವರಿಗೆ ಪ್ರಾಣ ಪ್ರಿಯವಾಗಿದ್ದವು. ಅವರ ಅನನ್ಯ ಜಿನಭಕ್ತಿಯ ಪ್ರಭಾವದಿಂದ ಎಷ್ಟೋ ಸಂಕಷ್ಟಗಳು ದೂರಾಗಿವೆ. ಶ್ರೇಷ್ಠ ತಪಸ್ವಿಯಾಗಿದ್ದರೂ ತಪೋಮದ ಅವರಲ್ಲಿ ಲವಲೇಶವೂ ಇರಲಿಲ್ಲ''

ನೇಮಿಸಾಗರರ ಮುಖದಲ್ಲಿ ಗುರು ಭಕ್ತಿಯ ಭಾವ ಬುಗ್ಗೆಯಾಗಿ ಚಿಮ್ಮತೊಡಗಿತು. ಗುರುಸ್ಮರಣೆಯ ಕಾರಂಜಿಯಲ್ಲಿ ಮಿಂದ ಅವರಿಗೆ ಮೈಮನಗಳು



ಕಾಮನಬಿಲ್ಲನ್ನು ಕಂಡ ಕವಿಯಂತೆ ಪುಳಕಗೊಂಡಿದ್ದವು. ಕ್ಷಣಕ್ಷಣಕ್ಕೂ ಅವರ ಉತ್ಸಾಹ ಮಹಾಪೂರದಂತೆ ಏರತೊಡಗಿತು. ಯಾರೇ ಆಗಲೀ ಆಚಾರ್ಯಶ್ರೀಯವರ ಬಗ್ಗೆ ಹೇಳಲಾರಂಭಿಸಿದರೆಂದರೆ ನಮಗೆ ಸುಗ್ರಾಸಭೋಜನವೇ ಸಿಗುತ್ತಿತ್ತು.

ನೇಮಿಸಾಗರರು ಉತ್ಸಾಹಗೊಂಡು ಮತ್ತೆ ಹೇಳಲಾರಂಭಿಸಿದರು.

## ದಿವ್ಯಸ್ಮೃತಿ ಮತ್ತು ಅಪೂರ್ವ ಕ್ಷಯೋಪಶಮ

''ಅವರ ಸ್ಮರಣಶಕ್ತಿ ಅತ್ಯಪೂರ್ವವಾಗಿತ್ತು. ಸೂಕ್ತಕಾಲದಲ್ಲಿ ಸೂಕ್ತ ಉತ್ತರ ಕೊಡುವ ಅವರ ವಿಧಾನ ಮಾರ್ಮಿಕವಾಗಿತ್ತು. ಕೇಳುವವರಿಗೆ ಅವರ ಸಿಹಿ ನುಡಿ ಹಾಲ್ಜೇನಿನಂತೆ ಸವಿಯಾಗಿರುತ್ತಿತ್ತು. ಎಂತಹ ದೀರ್ಘ, ದೊಡ್ಡ ಗಹನ ಪ್ರಶ್ನೆಗಳಿಗೂ ಸರಳ, ಸುಂದರ, ಅರ್ಥಗರ್ಭಿತ. ಅನುಭವಗಮ್ಯ ಸರ್ವಜನಾನಂದಕರ ಸಂಕ್ಷಿಪ್ತ ಉತ್ತರ ಅವರ ಬಾಯಿನಿಂದ ದಿವ್ಯ ಧ್ವನಿಯಂತೆ ಹೊರಹೊಮ್ಮುತ್ತಿತ್ತು. ಅವರ ವಾಣಿ ಕರ್ಣರಸಾಯನದಂತಿತ್ತು. ಒಂದು ವಿಚಾರ ಅವರ ಮನಸ್ಸಿಗೆ ಬಂದಿತೆಂದರೆ ಅದನ್ನೆಂದೂ ಮರೆಯುತ್ತಿರಲಿಲ್ಲ. ಸಾವಿರಾರು ಜನ ಬಂದು ಹೋಗುತ್ತಿದ್ದರೂ ಮನಸ್ಸಿಟ್ಟು ನೋಡಿದವರನ್ನೆಂದೂ ಮರೆಯುತ್ತಿರಲಿಲ್ಲ''

೧೯೫೩ರಲ್ಲಿ ದೀಪಾವಳಿಗೆ ಅವರನ್ನು ನೋಡಲು ಹೋಗಿದ್ದೆವು. ಆಗ ನೇಮಿಸಾಗರರು ತಾತ್ಪಾರ್ಥ ಶ್ಲೋಕ ವಾರ್ತಿಕ ಓದುತ್ತಿದ್ದರು. ಪೂಜ್ಯಶ್ರೀಯವರು ಕೇಳುತ್ತಿದ್ದರು. ಈ ಮಧ್ಯೆ ನಾನು ಹಾಕಿದ ಬೇರೊಂದು ಪ್ರಶ್ನೆಗೆ ಉತ್ತರ ಹೇಳಿ ಶಾಸ್ತ್ರಶ್ರವಣದಲ್ಲಿ ಮತ್ತೆ ಲೀನರಾದರು. ಆಗ ನನಗೆ ಬಹಳ ಆಶ್ಚರ್ಯವಾಯಿತು. ತಡೆಯದೆ ಮತ್ತೆ ಪ್ರಶ್ನೆ ಹಾಕಿಯೇ ಬಿಟ್ಟೆ.

''ಮಹರಾಜ್! ಅನ್ಯಪ್ರಶ್ನೆಗೂ ನಡುನಡುವೆ ಉತ್ತರ ಹೇಳಿ ಶಾಸ್ತ್ರ ಶ್ರವಣದಲ್ಲೂ ಯಥಾವತ್ ಮನಸ್ಸನ್ನು ಹೇಗೆ ನಿಲ್ಲಿಸಬಲ್ಲಿರಿ?'' ''ನಮ್ಮ ಮನಸ್ಸಿನ ಉಪಯೋಗ ಈಗ ದ್ವಿಮುಖವಾಗಿ ನಡೆಯುತ್ತಿದೆ. '' ಎಂದು ಹೇಳಿಬಿಟ್ಟರು. ನನಗೆ ಆದ ಆಶ್ಚರ್ಯಕ್ಕೆ ಎಲ್ಲೆಯೇ ಇಲ್ಲದಾಯಿತು. ಸಾಮಾನ್ಯವಾಗಿ ನಾವು ನೋಡುವಾಗ, ನಡೆಯುವಾಗ, ಮಾತಾಡುವಾಗ ನಮ್ಮ ಉಪಯೋಗ ಒಂದು ಕಡೆ ಮಾತ್ರ ಕೇಂದ್ರೀಕೃತವಾಗಿರುತ್ತದೆ. ಸಮಕಾಲೀನವಾಗಿ ನಡೆಯುತ್ತಿರುವ ಜಗತ್ತಿನ ಅನ್ಯ ವ್ಯಾಪಾರಗಳು ನಮಗೆ ಗೊತ್ತಾಗುವುದಿಲ್ಲ. ಪೂಜ್ಯ ಆಚಾರ್ಯಶ್ರೀಯವರ ಮಾನಸಿಕ ಶಕ್ತಿ ಈ ಕ್ರಮವನ್ನು ಮೀರಿತ್ತು. ಅವರಲ್ಲಿ ಮಹಾ ಮಾನವತೆಯ ಅಭೀಕ್ಷ್ಣ ಶಕ್ತಿ ತುಂಬಿತ್ತು. ಒಂದಕ್ಕಿಂತ ಹೆಚ್ಚು ಕಡೆ ತಮ್ಮ ಉಪಯೋಗವನ್ನು ನಿಲ್ಲಿಸಬಲ್ಲ ಅಸಮಾನ ತಪಸ್ವಿಗಳಾಗಿದ್ದರು. ''

## ಮಹಾ ಅನುಭೂತಿ

''ಜ್ಞಾನ ಮದದಿಂದ ಮದೋನ್ಮತ್ತರಾಗಿದ್ದ ಎಷ್ಟೋ ಜನ ಹುಂಬ ಶಾಸ್ತ್ರಿಗಳು ಅವರ ಅಪೂರ್ವ ವಿಚಾರಧಾರೆಗೆ ಬೆದರಿ ತುಟಿ ಬಿಚ್ಚುತ್ತಿರಲಿಲ್ಲ. ಅವರು ಯಾವ ವಿಶ್ವವಿದ್ಯಾನಿಲಯದ ಡಿಗ್ರಿಯನ್ನೂ ಪಡೆದಿರಲಿಲ್ಲ. ಅವರು ಯಾವ ನ್ಯಾಯಾಚಾರ್ಯ, ನ್ಯಾಯತೀರ್ಥ ಪದವಿಯನ್ನೂ ಸಂಪಾದಿಸಿರಲಿಲ್ಲ. ಯಾವ ಸಿದ್ಧಾಂತ ಶಾಸ್ತ್ರಗಳನ್ನೂ ಕ್ರಮಬದ್ಧವಾಗಿ ಗುರುಮುಖೇಣ ಅಧ್ಯಯನ ಮಾಡಿದ ಶಾಸ್ತ್ರಿಯೂ ಆಗಿರಲಿಲ್ಲ. ಆದರೂ ದೊಡ್ಡ ಶಾಸ್ತ್ರಿಗಳು, ವಿದ್ವಾಂಸರು, ವಿಮರ್ಶಕರು ಅವರೆದುರು ಮಾನಸ್ತಂಬದೆದುರು ಸ್ತಂಭೀಭೂತ ಮಾನಕಷಾಯದಂತೆ, ತಮ್ಮ ತಮ್ಮ ಪದವಿ ಪ್ರತಿಷ್ಠೆಗಳನ್ನು ತೊರೆದು ಪೂಜ್ಯಶ್ರೀಯವರ ಅಪೂರ್ವ ವಿಮರ್ಶೆಗೆ ತಲೆದೂಗುತ್ತಿದ್ದರು. ಅವರ ನಿರ್ದೋಷ ನಿರ್ದೇಶನಕ್ಕೆ ತಲೆಬಾಗುತ್ತಿದ್ದರು. ಅರ್ಥಶಾಸ್ತ್ರದಲ್ಲಿ ಬರುವ ಸಿದ್ಧಾಂತ (Law of diminishing utility)ದ ಬಗ್ಗೆ ಅವರ ಅನುಭವಿಕ ವಿವರಣೆ ಅರ್ಥಶಾಸ್ತ್ರಜ್ಞರನ್ನು ಹೌಹಾರುವಂತೆ ಮಾಡಿತ್ತು. ಆಧುನಿಕ ವಿಚಾರಗಳನ್ನು ಯಾವ ವಿಶ್ವವಿದ್ಯಾನಿಲಯದಲ್ಲೂ ಅಭ್ಯಸಿಸದ ಅವರಿಗೆ ಇಂತಹ ವಿಚಾರಗಳೆಲ್ಲಾ ಹೇಗೆ ಹೊಳೆಯುತ್ತದೆ ಎನ್ನುವುದು ಪ್ರತಿಯೊಬ್ಬರಿಗೂ ಒಗಟಾಗಿತ್ತು. ಅವರ ಮಹಾನ್ ತಪಸ್ಸಾಮರ್ಥ್ಯದಿಂದುಂಟಾದ ಅದ್ಭುತ ಕ್ಷಯೋಪಶಮದಿಂದಲೇ ಇಂತಹ ಜ್ಞಾನ ಅವರಿಗೆ ಪ್ರಾಪ್ತಿಯಾಗಿತ್ತು.''

''ಪಂಡಿತ ಜಗನ್ಮೋಹನಲಾಲ್‌ಜಿ ಶಾಸ್ತ್ರಿ, ಪಂಡಿತ ಉಲ್ಫತ್‌ರಾಯ್‌ಜಿ ಬೊಂಬಾಯಿ, ಮಕ್ಖನ್‌ಲಾಲ್‌ಜಿ ಶಾಸ್ತ್ರಿ ಮೊರೆನಾ ಮುಂತಾದ ಘಟಾನುಘಟಿ ಸಿದ್ಧಾಂತ ವೇತ್ತರುಗಳು, ಗಹನ ತತ್ವ ವಿಚಾರಗಳನ್ನು ಅವರೊಡನೆ ಚರ್ಚಿಸುವಾಗ ಅವರ ಪ್ರತಿಭೆ ಮುಂಗಾರು ಮಳೆಯ ಕೋಲ್ಮಿಂಚಿನಂತೆ ಚಮಕಿಸುತ್ತಿತ್ತು. ಅವರ ತತ್ವ ನಿರೂಪಣೆ ವರ್ಷಾಧಾರೆಯಂತೆ ಹರಿಯುತ್ತಿತ್ತು. ಪಂಡಿತರೂ ತಿಳಿಯಲಾರದಂತಹ ಎಷ್ಟೋ ಗಹನ ವಿಚಾರಗಳನ್ನು ತಮ್ಮ ಅನುಭವದಿಂದ ಸರಳವಾಗಿ ತಿಳಿಸಿ ಹೇಳುತ್ತಿದ್ದರು. ಅವರ ದಿವ್ಯ ಜ್ಞಾನಕ್ಕೆ ಎಲ್ಲರೂ ತಲೆದೂಗುತ್ತಿದ್ದರು. ಎಂತಹ ದೊಡ್ಡ ಪಂಡಿತರೂ ಅವರ ಮುಂದೆ ಸೂರ್ಯನೆದುರು ಸೊಡರಿನಂತೆ ಕಾಣುತ್ತಿದ್ದರು. ಉಗ್ರ ತಪಶ್ಚರ್ಯೆಯಿಂದ ಅವರು ಪಡೆದಿದ್ದ ಕ್ಷಯೋಪಶಮವನ್ನು ಹಲವು ಜನ್ಮಗಳಲ್ಲೂ ಯಾರೂ ಪಡೆಯಲಾರರು.' ಜ್ಞಾನ ಮದದಿಂದ ಮದೋನ್ಮತ್ತ ತಲೆ ತಿರುಕ ಪಂಡಿತರೂ ಪೂಜ್ಯಶ್ರೀಯವರೆದುರು ಗರುಡ ಮಂತ್ರಕ್ಕೆ ಸಿಕ್ಕ ಹಾವಿನಂತೆ ಸೊಕ್ಕಡಗಿ ಕೂತಿರುತ್ತಿದ್ದರು. ಅವರೆದುರು ಅರೆಬೆಂದ ಮಡಕೆಯಂತೆ ಕಾಂತಿ ಹೀನವಾಗಿ ತೋರುತ್ತಿದ್ದರು. ಮಾತಾಡಿದರೆ ಎಲ್ಲಿ ತಪ್ಪುವೆವೋ ಎಂದು ಮಾತಾಡದೆ ಮಿಡುಕದೆ ಕೂತಿರುತ್ತಿದ್ದರು. ಹಳ್ಳ ತಿಟ್ಟುಗಳಲ್ಲಿ



ದುಮ್ಮಿಕ್ಕಿ ಹರಿಯುವ ನಿರ್ಝರಿಣಿಯಂತೆ ಅವರ ವಾಣಿ ಘೂರ್ಣಿಸುತ್ತಿತ್ತು. ಅದನ್ನು ಕೇಳುವವರು ಚಿತ್ರ ಪಟದ ಬೊಂಬೆಗಳಂತೆ ಬಾಯ್ದೆರೆದು ಕೂತಿರುತ್ತಿದ್ದರು. ಅವರ ಮಾತಿನ ವೈಭವ ಹೃದಯಕ್ಕೆ ಅಮೃತ ಸಿಂಚನ ಮಾಡಿದಂತಾಗುತ್ತಿತ್ತು. ಆಚಾರ್ಯಶ್ರೀಗಳವರು ಧವಲಾದಿ ಸಿದ್ಧಾಂತಗ್ರಂಥಗಳನ್ನು ಆಳವಾಗಿ ಅಧ್ಯಯನ ಮಾಡಿದ್ದರು. ಅವರು ನಿತ್ಯವೂ ಕನಿಷ್ಠ ೪೦ರಿಂದ ೫೦ ಪುಟಗಳಷ್ಟು ಸ್ವಾಧ್ಯಾಯ ಮಾಡುತ್ತಿದ್ದರು. ಒಮ್ಮೆ ಅಧ್ಯಯನ ಮಾಡಿದ್ದು ಹೃದಯದ ಆಳಕ್ಕೆ ಇಳಿದು ಬಿಡುತ್ತಿತ್ತು. ನಾನು ಮಹಾಬಂಧದ ಬಗ್ಗೆ ಟೀಕೆಯನ್ನು ಸುಮಾರು ಮೂರು ವರ್ಷಗಳಿಂದ ಬರೆಯುತ್ತಿದ್ದೆ. ಈ ಬಗ್ಗೆ ಅವರ ಅನುಭವವನ್ನು ಕೇಳಿ ತಿಳಿಯುವುದು ಒಳ್ಳೆಯದೆನಿಸಿತು.

## ಮೊದಲು ಸಮಯಸಾರ ಬೇಡ

ಮಹಾಬಂಧದ ಪ್ರಥಮ ಭಾಗದ ಟೀಕೆಯನ್ನು ಸಾದ್ಯಂತ ಓದಿದರು. ನಂತರ ತಮ್ಮ ಅಭಿಪ್ರಾಯ ಹೀಗೆ ಕೊಟ್ಟರು.

''ಇದು ನಿಜವಾದ ಅರ್ಥದಲ್ಲಿ ಮಹಾಧವಲ. ಬಂಧದ ಬಗ್ಗೆ ಸ್ಪಷ್ಟವಾಗಿ ಪ್ರತಿಪಾದನೆ ಮಾಡುವ ಈ ಶಾಸ್ತ್ರ ಯಥಾರ್ಥವಾಗಿ ಮಹಾಗ್ರಂಥವಾಗಿದೆ. ಬಂಧದ ಜ್ಞಾನವಾದ ನಂತರವೇ ಮೋಕ್ಷದ ಜ್ಞಾನ ಸ್ಪಷ್ಟವಾಗಿ ಆಗುತ್ತದೆ. ಆದ್ದರಿಂದ ಮೊದಲು ಸಮಯಸಾರ ಬೇಡ''

ಒಂದು ಅಪೂರ್ವ ವಿಚಾರವನ್ನು ಪೂಜ್ಯಶ್ರೀಯವರಿಂದ ಆಗ ತಿಳಿದುಕೊಂಡಂತಾಗಿತ್ತು. ಏಕಾಂತವಾದಿಗಳ ಒಣ ತರ್ಕಕ್ಕೆ ತೆರೆಬಿದ್ದಂತಾಗಿತ್ತು. ವ್ಯವಹಾರ ಮೊದಲೋ, ನಿಶ್ಚಯ ಮೊದಲೋ, ಯಾವುದು ಸತ್ಯ ಯಾವುದು ಮಿಥ್ಯ ಎನ್ನುವುದರ ಬಗ್ಗೆ ನಡೆಯುತ್ತಿದ್ದ ವ್ಯರ್ಥ ಜಗ್ಗಾಟಕ್ಕೆ ಒಂದು ಸತರ್ಕ, ಸೈದ್ಧಾಂತಿಕ ತೀರ್ಪು ಸಿಕ್ಕಂತಾಗಿತ್ತು. ಪೂಜ್ಯ ಶ್ರೀಯವರ ಮಹಾತಪಸ್ಸು, ಅಪೂರ್ವ ಜ್ಞಾನಸಂಪತ್ತು ಅವರ ವಾಣಿಗೆ ಸರ್ವ ಮಾನ್ಯತೆ ತಂದುಕೊಟ್ಟಿತ್ತು. ಅವರ ತೀರ್ಪು ದೇಶಾತೀತ, ಕಾಲಾತೀತ ಮತ್ತು ನಿಸ್ಸಂದಿಗ್ಧ. ವೀತರಾಗಿ ಮುನಿಗಳ ಮಾತು ಸರ್ವದೇಶ ಕಾಲ ಸ್ಥಿತಿಯನ್ನು ಮೀರಿದ್ದವು. ಅವರ ಮಾತೆಂದರೆ ದಿವ್ಯ ಧ್ವನಿ ಇದ್ದಂತೆ!

ಅವರು ತಮ್ಮ ವಿಮರ್ಶೆಯನ್ನು ಮುಂದುವರಿಸಿದ್ದರು.

''ಮೊದಲು ಬಂಧದ ವಿಚಾರ ತಿಳಿಯತಕ್ಕದ್ದು. ನಮಗೆ ಬರುವ ಮೊದಲ ತಿಳುವಳಿಕೆ ಎಂದರೆ ನಾವೇಕೆ ದುಃಖದಲ್ಲಿ ಮುಳುಗಿದ್ದೇವೆ ಎನ್ನುವುದು. ಮುನ್ನೂರರವತ್ತ ಮೂರು ಪಾಖಂಡಿ ಮತಗಳೂ ಸುಖವನ್ನು ಬೋಧಿಸುತ್ತವೆ. ಆದರೆ ಸಿಗುವುದಿಲ್ಲ. ಆದಕ್ಕಾಗಿ ಕರ್ಮಕ್ಷಯ ಮಾರ್ಗ ಹುಡುಕಬೇಕಾಗಿದೆ.

ಜಿನೇಂದ್ರನು ಕರ್ಮಕ್ಷಯ ಮಾರ್ಗ ತೋರಿಸಿದ್ದಾನೆ. ಆ ಮಾರ್ಗದಲ್ಲಿ ನಡೆದರೆ ಮೋಕ್ಷ ಸಿಕ್ಕೀತು. ಬಂಧದ ಜ್ಞಾನ ಆದ ನಂತರವೇ ಜೀವ ಬಂಧ ಮುಕ್ತವಾಗಲು ಯೋಚಿಸುತ್ತದೆ. ಕರ್ಮ ನಿರ್ಜರೆ ಮಾಡಿಕೊಳ್ಳುತ್ತದೆ. ಬಂಧದ ವರ್ಣನೆಯಿಂದಲೇ ಮೋಕ್ಷಜ್ಞಾನವೂ ಆಗುತ್ತದೆ. ಆದ್ದರಿಂದ ಮೊದಲು ಬಂಧ ಜ್ಞಾನದ ಅವಶ್ಯಕತೆ ಇದೆ.''

ಅವರ ತರ್ಕ, ಶ್ರುತಿ ಮತ್ತು ತಾಳಗಳಿಂದ ಕೂಡಿದ ಲಯಬದ್ಧ ಸಂಗೀತದಂತೆ ಹೊರ ಹೊಮ್ಮಿತ್ತು. ಅವರು ಜಿನವಾಣಿಯನ್ನೇ ಸಾಕ್ಷಾತ್ತಾಗಿ ಪ್ರತಿಫಲಿಸುವ ಒಂದು ದರ್ಪಣದಂತೆ ಕಂಡು ಬಂದರು.

ಜೀವದ ವಿಕಾಶವನ್ನು ಹದಿನಾಲ್ಕು ಗುಣಸ್ಥಾನಗಳಿಂದ ಗುರ್ತಿಸಿದ್ದಾರೆ. ತಾನಾರು, ಹುಟ್ಟು ಸಾವುಗಳೇಕೆ, ಎಂದು ತಿಳಿಯದ ಜೀವ ಈ ಸಂಸಾರದಲ್ಲಿ ಅನಂತ ಕಾಲದಿಂದಲೂ ಪ್ರವಾಹ ರೂಪದಲ್ಲಿ ಬರುತ್ತಿದೆ. ಅಂತಹ ಜೀವಕ್ಕೆ ಸಮ್ಯಕ್ತ್ವ ಪ್ರಾಪ್ತಿಯಾದಾಗ ಮೇಲಿನ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕಲಾರಂಭಿಸುತ್ತದೆ. ಇದೇ ಬಂಧ ಕಥೆ. ಈ ಬಂಧಕ್ಕೆ ಕಾರಣವಾದ ಪ್ರವೃತ್ತಿಯನ್ನು ಪ್ರತಿರೋಧಿಸುವುದರಿಂದಲೇ ಬಂಧ ಕಳಚಿ ಮೋಕ್ಷ ಉಂಟಾಗುತ್ತದೆ. ಅದೇ ಮೋಕ್ಷ ಕಥೆ. ಮೊದಲು ಕಾರಣವನ್ನು ತಿಳಿಯದೆ ಕಾರ್ಯವನ್ನು ಹೇಗೆ ಸಾಧಿಸುವುದು? ಮೊದಲು ಬಂಧದ ಕಾರಣಗಳನ್ನು ತಿಳಿಯದೆ ಮೋಕ್ಷವನ್ನು ಹೇಗೆ ಸಾಧಿಸಲು ಸಾಧ್ಯ? ಈ ಬಂಧ ಮೋಕ್ಷಗಳೇ ಬಹು ಮುಖ ತತ್ವಗಳು. ಮೊದಲು ಬಂಧದ ಕಟ್ಟನ್ನು ಅರಿತು ಕಿತ್ತು ಹಾಕದೆ ಮೋಕ್ಷದ ಮಹಲು ದೊರೆಯಲಾರದು. ಆದ್ದರಿಂದಲೇ ಅವರು ಮೊದಲು ಬಂಧದ ವಿಚಾರ ತಿಳಿಯತಕ್ಕದೆಂದು ಹೇಳಿರುವುದು.

## ಉಷ್ಣಕ್ಷೀರದಿಂದ ಮೂರ್ಛೆ

''ಯಾವಾಗ ಏನಾಗುವುದೋ ಯಾರು ಬಲ್ಲರು? ಶ್ರಾವಕರೇನು? ಮುನಿಗಳೇನು? ಕರ್ಮದ ಕತ್ತಿ ಸದಾ ನೆತ್ತಿಯ ಮೇಲೆ! ಒಮ್ಮೆ ಪೂಜ್ಯಶ್ರೀಯವರು ಆಹಾರಕ್ಕಾಗಿ ಹೊರಟರು. ಒಬ್ಬ ಗೃಹಸ್ಥನ ಮನೆಯಲ್ಲಿ ವಿಧಿ ಸಿಕ್ಕಿತು. ಆಹಾರಕ್ಕಾಗಿ ಅಂಜಲಿಬದ್ಧರಾಗಿ ನಿಂತರು. ಆ ಗೃಹಸ್ಥ ಅತ್ಯವಸರದ ವ್ಯಕ್ತಿ. ಬಹಳ ಗಡಿಬಿಡಿಯಿಂದ ಆಹಾರ ಕೊಡಲಾರಂಭಿಸಿದ. ಆಗ ಪೂಜ್ಯಶ್ರೀಯವರು ಹಾಲು ಮತ್ತು ಅನ್ನವನ್ನಷ್ಟೇ ತೆಗೆದುಕೊಳ್ಳುತ್ತಿದ್ದರು. ಆ ಅವಿವೇಕ ಶ್ರಾವಕ, ಕೈಯಲ್ಲಿ ಮುಟ್ಟಲಾರದಷ್ಟು ಉಗಿ ಹಾಯುತ್ತಿದ್ದ ಹಾಲಿನ ಪಾತ್ರೆಯನ್ನು ಬಟ್ಟೆಯಲ್ಲಿ ಹಿಡಿದು ತಂದು ಒಮ್ಮೆಗೇ ಅವರ ಕೈಗೆ ಸುರುವಿಬಿಟ್ಟ. ತಾನು ಕೈಯ್ಯಲ್ಲಿ ಹಿಡಿಯಲಾರದಷ್ಟು ಬಿಸಿ ಹಾಲಿನ ಪಾತ್ರೆಯನ್ನು ಅವರ ಕೈಗೆ ಹಾಕಿದರೆ ಏನಾದೀತೆಂಬ ಪ್ರಜ್ಞೆಯೂ ಆ



ಅವಿವೇಕಿ ಶ್ರಾವಕನಿಗೆ ಇರಲಿಲ್ಲ. ಸಹಿಸಲಸಾಧ್ಯ ಉಷ್ಣವೇದನೆಯಿಂದ ಅವರು ಕುಸಿದು ಬಿದ್ದು ಮೂರ್ಛೆ ಹೋದರು. ಕೂಡಲೇ ಅಲ್ಲಿದ್ದವರಲ್ಲಿ ಹಾಹಾಕಾರವೆದ್ದಿತು. ಪೂಜ್ಯ ನೇಮಿಸಾಗರರು ನೇಮಣ್ಣನೆಂಬ ಹೆಸರಿನ ಗೃಹಸ್ಥರಾಗಿದ್ದರು. ಅವರ ಜಂಘಾಬಲವೇ ಉಡುಗಿ ಹೋಯಿತು. ಪೂಜ್ಯ ಶ್ರೀಯವರಿಗೆ ಅಂತ್ಯವೇ ಆಗಿ ಹೋಯಿತೇನೋ ಎಂದು ಹೆದರಿ ಕಿವಿಯಲ್ಲಿ ಣೋಮಕಾರ ಮಂತ್ರ ಹೇಳತೊಡಗಿದರು. ಹೀಗೆ ಭಯ, ಆತಂಕಗಳಿಂದ ಕಳೆದ ನಂತರ ಮೆಲ್ಲಗೆ ಕಣ್ತೆರೆದರು. ಆದರೂ ಅವರು ಮುಖದಲ್ಲಿ ಯಾವುದೇ ರೋಷವಾಗಲಿ ನೋವಾಗಲಿ ಕಾಣಿಸಲಿಲ್ಲ. ಅದೇ ಶಾಂತಿ ಮತ್ತು ಕರುಣೆಯ ಕಾಂತಿ ಅವರ ಮುಖದಿಂದ ಜಿನುಗುತ್ತಿತ್ತು. ವೀತರಾಗಿ ಮುನಿಯ ಚಿತ್ತ ವೃತ್ತಿಯೇ ಅಂತಹದ್ದು! ಒಬ್ಬೊಬ್ಬ ಶ್ರಾವಕನೂ ಪೂಜ್ಯಶ್ರೀಯವರಲ್ಲಿ ಕ್ಷಮೆಯಾಚಿಸತೊಡಗಿದರು. ''ನೊಂದು ಕೊಳ್ಳುವಂತಹದ್ದೇನಿದೆ? ಇದು ಕೇವಲ ನಮ್ಮ ಕರ್ಮಪಾಕದ ಫಲ. ನೀವು ನಿಮಿತ್ತ ಕಾರಣ ನಿಮ್ಮ ಮೇಲೆ ನಮಗೆ ಯಾವ ಆಕ್ರೋಷವು ಇಲ್ಲ'' ಎಂದು ಸಾವಧಾನವಾಗಿ ಹೊರಹೊರಟರು. ಅವರ ಆ ಅಪೂರ್ವ ಸಂಯಮ ಜನರನ್ನು ಮಂತ್ರಮುಗ್ಧಗೊಳಿಸಿತು.''

''ಇನ್ನೊಂದು ವಿಚಿತ್ರ ತೊಂದರೆ ಅವರಿಗೆ ಕಬಲಾನಾದಲ್ಲಿ ಆಗಿತ್ತು. ಅವರ ಗಂಟಲಲ್ಲಿ ಸೋಂಕು ಉಂಟಾಗಿ ತುತ್ತು ನುಂಗಲಾರದಷ್ಟು ಗಂಟಲು ಊತ ಉಂಟಾಗಿತ್ತು. ಬಹಳ ಕಷ್ಟದಿಂದ ಸ್ವಲ್ಪ ಸ್ವಲ್ಪವೇ ಆಹಾರ ತೆಗೆದುಕೊಳ್ಳುತ್ತಿದ್ದರು. ಆಕಸ್ಮಾತ್ ಒಂದು ದೊಡ್ಡ ತುತ್ತು ಹೇಗೋ ಗಂಟಲಲ್ಲಿ ಸಿಕ್ಕಿ ಹಾಕಿಕೊಂಡಿತು. ನುಂಗಲೂ ಆಗದೆ, ಉಗುಳಲೂ ಆಗದೆ ಒಂದರೆಕ್ಷಣ ಜೀವ ಹೋದವರಂತೆ ಒದ್ದಾಡತೊಡಗಿದರು. ಉಸಿರಾಟಕ್ಕೂ ದಕ್ಕೆಯಾಗಿ ಮೇಲುಸಿರು, ಕೆಳುಸಿರಾಗಿ ಅಲ್ಲಿದ್ದವರಿಗೆ ಏನಾಗಿ ಬಿಡುವುದೋ ಎನ್ನುವ ಭಯ ಆವರಿಸಿಬಿಟ್ಟಿತು. ತಾತ್ಕಾಲ ಒಬ್ಬ ಚಾಣಾಕ್ಷ ಶ್ರಾವಕ ಅವರ ಅಂಜಲಿಗೆ ಸ್ವಲ್ಪ ಹಾಲು ಸುರಿದ. ಅದನ್ನು ತೆಗೆದುಕೊಂಡ ಕೂಡಲೇ ಗಂಟಲಿಗೆ ಸಿಕ್ಕಿಬಿದ್ದಿದ್ದ ಅನ್ನವನ್ನು ಜಾರಿಸಿತು. ವೇದನೆಯಿಂದ ಅವರ ಮುಖ ಕೆಂಪಡರಿಬಿಟ್ಟಿತು. ಒಂದು ಕ್ಷಣ ಶಾಂತವಾಗಿ ದಣಿವಾರಿಸಿಕೊಂಡು ಮತ್ತೆ ಸಾವಧಾನ ಪೂರ್ವಕ ಆಹಾರ ಮುಂದುವರೆಸಿದರು. ಒಂದೆರಡು ಕ್ಷಣ ಅದೇ ಪರಿಸ್ಥಿತಿ ಮುಂದುವರೆದಿದ್ದರೆ ಉಸಿರುಕಟ್ಟಿ ಏನಾದರೂ ಭಯಂಕರ ಪ್ರಸಂಗ ಉಂಟಾಗಲು ಸಾಧ್ಯವಿತ್ತು. ಆದರೆ ಅವರ ಪುಣ್ಯ ಪ್ರಭಾವ ಅವರನ್ನು ರಕ್ಷಿಸಿತು. ಈ ಘಟನೆ ನನ್ನ ಎದುರಿನಲ್ಲೇ ನಡೆದಿತ್ತು.

ಇಂತಹದ್ದೇ ಇನ್ನೊಂದು ಘಟನೆ ನಡೆದಿತ್ತೆಂದು ಅವರ ಬಾಯಿಂದಲೇ ಕೇಳಿ ಹೆದರಿ ಹೋದೆ. ಅವರು ಗಂಟಲು ಬೇನೆಯ ನಿಮಿತ್ತ ಅನ್ನವನ್ನೂ ತ್ಯಜಿಸಿದ್ದರು. ಫಲರಸ ಮತ್ತು ಬೇಯಿಸಿದ ಹಸಿರು ತರಕಾರಿಗಳನ್ನು ತ್ಯಜಿಸಿ ಸುಮಾರು ೧೮

ವರ್ಷಗಳಾಗಿತ್ತು. ಉಪ್ಪು, ತುಪ್ಪ, ಸಕ್ಕರೆಗಳನ್ನು ತ್ಯಜಿಸಿ ಬಹಳ ವರ್ಷಗಳೇ ಆಗಿದ್ದವು. ಉಳಿದಿದ್ದಾದರೂ ಏನಿತ್ತು? ಆದ್ದರಿಂದ ಅವರ ಶರೀರ ಪೌಷ್ಟಿಕ ಆಹಾರವಿಲ್ಲದೆ ಅಸ್ಥಿಪಂಜರದಂತಾಗಿತ್ತು. ಇದರೊಡನೆ ಈ ಚಾತುರ್ಮಾಸದಲ್ಲಿ ಧಾರಣೆ-ಪಾರಣೆ ನಿಯಮ ಬೇರೆ ಸ್ವೀಕರಿಸಿಬಿಟ್ಟಿದ್ದರು. ಆಗ ಗಂಟಲು ಬೇನೆ ಬೇರೆ ಕಾಡತೊಡಗಿತ್ತು. ಇದರಿಂದ ಅವರ ಶರೀರ ಇನ್ನಷ್ಟು ಹಣ್ಣಾಗಿ ಹೋಯಿತು. ಒಂದು ಉಪಸವಾದ ನಂತರ ಪಾರಣೆಯ ದಿನ ಅಂತರಾಯ ಆಗಬೇಕೇ? ಮಾರನೆಯ ದಿನ ಉಪವಾಸ! ನಾಲ್ಕನೆಯದಿನ ಪಾರಣೆಯ ದಿನ. ಶ್ರಾವಕರು ಮೈಯೆಲ್ಲಾ ಕಣ್ಣಾಗಿ ಮಹಾ ಜಾಗರೂಕರಾಗಿ ನಿರಂತರಾಯ ಮಾಡಲು ಸಜ್ಜಾಗಿ ನಿಂತರು. ಅಂದೂ ಅಂತರಾಯವಾಗಿ ಬಿಟ್ಟಿತು. ಆ ಮಹಾಮುನಿಯ ಶರೀರ ಎಲಬಿನ ಗೂಡಿನಂತಾಗಿತ್ತು. ಅವರ ಪರಿಸ್ಥಿತಿ ಕಂಡು ಎಷ್ಟೋ ಜನಗಳು ಅಳಲಾರಂಭಿಸಿದರು. ಐದನೆಯ ದಿನ ಉಪವಾಸ. ಆರನೆಯ ಪಾರಣೆಯ ದಿನ ಲಾಭಾಂತಾರಾಯ ಕರ್ಮ ಕ್ಷಯಿಸಿತ್ತು. ನಿರಂತರಾಯ ಆಹಾರವಾಗಿತ್ತು. ಈ ರೀತಿಯ ಅಂತರಾಯದ ಭೀಷಣ ಪರಿಸ್ಥಿತಿ, ಒಂದೆರಡು ಬಾರಿ ಬಂದಿತ್ತು. ಇದರಿಂದ ಅವರ ಶರೀರದಲ್ಲಿ ನಡೆಯಲೂ ಶಕ್ತಿ ಇರಲಿಲ್ಲ. ಅಷ್ಟರಲ್ಲಿಯೇ ಭಾರಿ ಮಳೆ ಸುರಿಯಿತು. ಶೀತ ಮಾರುತ ಬೀಸತೊಡಗಿತು. ದಿಗಂಬರ ಶರೀರ. ಗಂಟಲು ಬೇನೆ ಇನ್ನಷ್ಟು ಉಲ್ಬಣಿಸಿತು. ರಾತ್ರಿ ಎರಡು ಗಂಟೆಗೆ ಅವರ ಸ್ಥಿತಿ ಚಿಂತಾಜನಕವಾಗಿ ಉಲ್ಬಣಿಸಿಬಿಟ್ಟಿತ್ತು. ಬೆಳಗ್ಗೆ ನಾನು ಅವರ ದರ್ಶನಕ್ಕೆ ಹೋದೆ. ''ಈ ರಾತ್ರಿ ನಮ್ಮ ಕಥೆ ಮುಗಿದೇ ಹೋಯಿತೇನೋ ಎನ್ನುವಂತಾಗಿತ್ತು'' ಎಂದು ಮೆಲ್ಲಗೆ ಹೇಳಿದರು.

ನಾನು ಭಯಭೀತನಾಗಿ ಏನಾಗಿತ್ತು ಎಂದು ಕಾತುರದಿಂದ ಕೇಳಿದೆ.

''ರಾತ್ರಿ ಗಂಟಲು ಬೇನೆ ಹೆಚ್ಚಿ ಸ್ವಲ್ಪ ಸಮಯ ಉಸಿರಾಡಲೂ ಸಾಧ್ಯವಾಗದೆ ಹೋಯಿತು. ಶರೀರವೂ ಸೂನ್ಯವಾಗತೊಡಗಿತು. ನಾಡಿ ಬಡಿತ ನಿಧಾನವಾಗತೊಡಗಿತು. ಆದರೆ ಸ್ವಲ್ಪ ಸಮಯದ ನಂತರ ತನಗೆ ತಾನೇ ಸ್ಥಿತಿ ಸುಧಾರಿಸಿತು.'' ಇಷ್ಟು ಹೇಳುವಾಗ ಅವರಿಗೆ ಭಯ, ನಿರಾಸೆಗಳ ಛಾಯೆಗಳು ಕಾಣಿಸಲಿಲ್ಲ. ಅಂದು ಮಧ್ಯಾಹ್ನ ದಶಲಕ್ಷಣದ ಧರ್ಮದ ಅಂಗವಾಗಿ ನಡೆಯುತ್ತಿದ್ದ ಶಾಸ್ತ್ರವಾಚನ ಸಭೆಗೆ ಬರಲಾರೆ ಎಂದು ಹೇಳಿ ಕಳಿಸಿದರು. ಅವರಿಲ್ಲದ ಸಭೆ ಸಮಾರಂಭ ದೇವರಿಲ್ಲದ ಗುಡಿ ಇದ್ದಂತೆ ಎಂದು ಮನಸ್ಸು ಹೇಳಿತು.

''ಮಹರಾಜ್! ನಿಮ್ಮ ಸೇವಾರ್ಥ ನಾನು ಇಲ್ಲಿಗೆ ಬಂದಿದ್ದೇನೆ. ಜನಗಳಿಗೆ ಶಾಸ್ತ್ರ ಹೇಳುವುದಕ್ಕಾಗಿ ಅಲ್ಲ. ನೀವಿರುವಲ್ಲೇ ನಾನಿರತಕ್ಕವನು.'' ಎಂದು ಸ್ಪಷ್ಟವಾಗಿ ಹೇಳಿಬಿಟ್ಟೆ. ಆಗ ಅವರಿರುವ ಸ್ಥಳದಲ್ಲೇ ಶಾಸ್ತ್ರವಾಚನ ಮಾಡಲಾಯಿತು.



## ಅಪೂರ್ವ ಶಾರೀರಿಕ ಸಾಮರ್ಥ್ಯ

ಅವರ ಶರೀರಶಕ್ತಿ ಬಹಳ ಕ್ಷೀಣಿಸಿತ್ತು. ನಡೆಯಲು ಸಾಮರ್ಥ್ಯ ಕುಗ್ಗಿಹೋಗಿತ್ತು. ಧ್ವನಿ ಕ್ಷೀಣಿಸಿತ್ತು. ಶರೀರ ಹಿಡಿಯಂತಾಗಿತ್ತು. ಇಂತಹ ಸ್ಥಿತಿಯಲ್ಲಿ ಒಬ್ಬ ಬ್ರಹ್ಮಚಾರಿ ಅವರ ದರ್ಶನ ಮಾಡಿದ. ಅವರ ಕ್ಷೀಣ ಸ್ಥಿತಿ ಕಂಡು ಅವನಿಗೇನನ್ನಿಸಿತೋ, ನೀವು ಸಲ್ಲೇಖನಾ ವ್ರತ ತೆಗೆದುಕೊಳ್ಳುವುದು ಒಳ್ಳೆಯದೆಂದು ಸಲಹೆ ಕೊಟ್ಟ. ಆಗ ಅವರು ಕೊಟ್ಟ ಉತ್ತರ ಬಹಳ ಮಾರ್ಮಿಕವಾಗಿತ್ತು.

''ನಮ್ಮ ಮರಣದ ಬಗ್ಗೆ ನಿನಗೇಕೆ ವ್ಯಾಕುಲ. ನಾವು ನಮ್ಮ ಸ್ಥಿತಿಯನ್ನು ಸ್ವಯಂ ತಿಳಿಯುತ್ತೇವೆ. ತಪಸ್ಸು ಮಾಡುತ್ತಾ ನಾವು ನಲವತ್ತು ವರ್ಷ ಕಳೆದಿದ್ದೇವೆ. ಅಂತಿಮ ಸಮಯ ಯಾವಾಗ ಬರುವುದೆಂಬುದನ್ನು ನಾವು ಸ್ವಯಂ ತಿಳಿಯಬಲ್ಲೆವು. ಅದರ ಬಗ್ಗೆ ನಮಗೆ ಯಾರ ಸಲಹೆಯೂ ಅಗತ್ಯವಿಲ್ಲ.''

ಅವರ ಜೀವನ ಬಹಳ ಕರಾರುವಕ್ಕಾಗಿತ್ತು. ತಮ್ಮ ದೀರ್ಘ ತಪಸ್ಸಿನಿಂದ ಭವಿಷ್ಯವನ್ನು ಸ್ಥೂಲವಾಗಿ ತಿಳಿಯಬಲ್ಲ ಅಂತಃಶಕ್ತಿ ಅವರಿಗೆ ಪ್ರಾಪ್ತವಾಗಿತ್ತು. ಯಾರೇ ಆಗಲಿ ವಿಷಯ ಮತ್ತು ಕಷಾಯಗಳಿಂದ ಸಂಪೂರ್ಣ ದೂರವಾಗಿ ಸ್ವರೂಪದಲ್ಲಿ ಸದಾ ಲೀನವಾಗುತ್ತಿದ್ದರೆ ಇಂತಹ ಜ್ಞಾನ ಸಹಜವಾಗಿ ಪ್ರಾಪ್ತವಾಗುತ್ತದೆ. ಆತ್ಮನ ಅತೀಂದ್ರಿಯ ಅಚಿಂತ್ಯ ಶಕ್ತಿಯನ್ನು ಅಲ್ಲಗಳೆಯುವ ಇಂದಿನ ಧಾಂಬಿಕ ಜನರಿಗೆ ಅವರ ಜೀವನ ಇತಿ ವೃತ್ತಾಂತ ಅತೀಂದ್ರಿಯ ಶಕ್ತಿಗೆ ಹಿಡಿದ ಕನ್ನಡಿ.

ಪೂಜ್ಯಶ್ರೀಯವರ ವಿಹಾರ ಅಲ್ಲಿಂದ ಹೊರಟಿತು. ಮೊದಲ ದಿನ ಹೆಚ್ಚು ನಡೆಯಲಾರದೇ ಹೋದರು. ಎರಡನೆಯ ದಿನ ಸ್ವಲ್ಪ ಅಧಿಕವಾಗಿ ನಡೆದರು. ದಿನದಿಂದ ದಿನಕ್ಕೆ ಅವರ ನಡೆಯುವ ಸಾಮರ್ಥ್ಯ ಏರತೊಡಗಿತು. ಇದು ಎಲ್ಲರಿಗೂ ಆಶ್ಚರ್ಯವಾಗಿತ್ತು. ಇದರ ಅಂತರ್ಯವೇನು? ಯಾರಿಗೂ ತಿಳಿಯದಾಗಿತ್ತು. ಅವರ ತಪೋಶಕ್ತಿಯೇ ಅಂತಹದ್ದಾಗಿತ್ತು. ಮಹಾತ್ಮರ ಜೀವನ ಪ್ರಕೃತಿಯಂತೆ ನಿಗೂಢ. ಧ್ಯಾನಾಧ್ಯಯನ ತಪೋನಿಷ್ಠ ಮಹಾಪುರುಷರಿಗೆ, ಅವರ ದುರ್ಬಲ ಶರೀರವೂ ಆತ್ಮ ವಿಕಾಶಕ್ಕೆ ಅನುಕೂಲವಾಗಿ ವರ್ತಿಸುತ್ತದೆ. ಮನಸ್ಸು ಉನ್ನತವಾಗಿದ್ದರೆ, ಭಾವಗಳು ಮಹೋನ್ನತವಾಗುತ್ತವೆ. ಏರಿದ ಭಾವಶುದ್ಧಿಗೆ ಅನುಗುಣವಾಗಿ ಪೂರ್ವಾರ್ಜಿತ ಕರ್ಮಗಳು ಅಸಂಖ್ಯಾತ ಅಸಂಖ್ಯಾತ ಪಟ್ಟು ಕ್ಷಯ ಉಪಶಮ ಹೊಂದುತ್ತಾ ಹೋಗುತ್ತವೆ. ಆಗ ಅಂತಹ ದುರ್ಬಲ ಶರೀರದಲ್ಲೂ ಉಘ್ರ ತಪಸ್ಸಿನ ಬೇಗೆಯನ್ನು ಸಹಿಸಬಲ್ಲ ಶಕ್ತಿ ಸಂಚಯವಾಗುತ್ತದೆ. ಪರೀಷಹಗಳನ್ನು ಸಹನೆ ಮಾಡುವ ಸಾಮರ್ಥ್ಯ ಹುಟ್ಟುತ್ತದೆ. ಶರೀರ ಮೋಹ

ಕಡಿಮೆಯಾದಂತೆ, ಇಂದ್ರಿಯ ಭೋಗಕಾಂಕ್ಷೆ ಕ್ಷೀಣಿಸಿದಂತೆ ಸಪ್ತಭಯಗಳು ಲುಪ್ತವಾಗುತ್ತವೆ.

ಆಚಾರ್ಯಶ್ರೀಯವರು ಅದಕ್ಕೆ ಜೀವಂತ ಸಾಕ್ಷಿಯಾಗಿದ್ದರು. ಅವರ ಅದ್ಭುತ ಶಾರೀರಕ ಶಕ್ತಿಯ ಗುಟ್ಟೇನು ತಿಳಿಯುವ ಕುತೂಹಲ ನನಗೆ ಉಂಟಾಗಿತ್ತು. ಅವರಲ್ಲಿ ಕೇಳಿದೆ.

''ಮಹಾರಾಜ್! ಮೊದಮೊದಲು ನೀವು ಹೆಚ್ಚು ನಡೆಯಲು ಸಾಧ್ಯವಾಗುತ್ತಿರಲಿಲ್ಲ. ಈಗ ಇಷ್ಟು ದೂರ ನಡೆಯಲು ಹೇಗೆ ಸಾಧ್ಯವಾಯಿತು?''

''ಜಿನೇಂದ್ರ ಭಗವಾನರ ಕೃಪೆ!'' ಇಷ್ಟೇ ಹೇಳಿ ಸುಮ್ಮನಾಗಿ ಬಿಟ್ಟರು. ಇನ್ನು ಕೇಳುವುದಾದರೂ ಯಾರನ್ನು? ಇದರ ಬಗ್ಗೆ ಎಷ್ಟೋ ಕಾಲದವರೆಗೆ ಮನಸ್ಸು ಶುಷ್ಕ ತರ್ಕ-ವಿತರ್ಕಗಳಿಂದ ಸೋತು ಹೋಗುತ್ತಿತ್ತು. ಋಷಿ ಮೂಲ ತಿಳಿಯಲಾಗುವುದಿಲ್ಲ!

ಅವರಿಗೆ ಜಿನೇಂದ್ರರ ಚರಣಗಳಲ್ಲಿ ಅಪಾರ ಶ್ರದ್ಧೆ ಇತ್ತು. ಜಿನ ಬಿಂಬವನ್ನು ನೋಡುತ್ತಿದ್ದಂತೆಯೇ ಭಾವ ಪರವಶರಾಗುತ್ತಿದ್ದರು. ಮಸ್ತಕವನ್ನು ಭಗವಂತನ ಚರಣಗಳಿಗೆ ಸ್ಪರ್ಶಿಸಿ ರೋಮಾಂಚನಗೊಳ್ಳುತ್ತಿದ್ದರು. ಭಕ್ತಿಯಿಂದ ಪರವಶರಾಗುತ್ತಿದ್ದ ಅವರು ಜಿನಬಿಂಬದೆದುರು ಇನ್ನೊಂದು ಜಂಗಮ ಜಿನಬಿಂಬದಂತೆ ನಿಷ್ಕಂಪರಾಗಿ ನಿಂತು ಬಿಡುತ್ತಿದ್ದರು. ಜಿನೇಂದ್ರ ಭಕ್ತಿಯ ಭಾವೋನ್ಮಾದ ಅವರ ಕಣ್ಣುಗಳಲ್ಲಿ ಅಪೂರ್ವ ಕಾಂತಿ ಚೆಲ್ಲುತ್ತಿತ್ತು. ಅವರ ಅಸೀಮ ಜಿನಭಕ್ತಿಯೇ ಅವರನ್ನು ಎಷ್ಟೋ ಸಂಕಟಗಳಿಂದ ದೂರ ಮಾಡಿದೆ.

## ರತ್ನತ್ರಯ ನಿಕೇತನ

ತಪಶ್ಚರ್ಯೆ ಹೆಚ್ಚುತ್ತಾ ಹೋದಂತೆ, ಕರ್ಮ ನಿರ್ಜರೆಯಾಗುತ್ತಾ ಅವರ ಆತ್ಮ ಬಲ ಮತ್ತು ಪ್ರಭಾವ ಹೆಚ್ಚತೊಡಗಿತು. ಸೇಠ್ ಕುಶಾಲ್‌ಚಂದ್ ಪಹಾಡೆ ಮತ್ತು ಬ್ರ. ಹೀರಾಲಾಲ್‌ಜಿ ಶ್ರವಣಬೆಳಗೊಳಕ್ಕೆ ಹೋಗುವ ಮಾರ್ಗಮಧ್ಯದಲ್ಲಿ ಕೊಣ್ಣೂರು ಗುಹೆಯಲ್ಲಿ ಇವರಿರುವುದನ್ನು ಕೇಳಿ ಅಲ್ಲಿ ನಿಂತರು. ಅವರು ಎಂಟು ದಿನಗಳವರೆಗೆ ಅಲ್ಲಿದ್ದು ಅವರ ಮುನಿಚರ್ಯೆಯನ್ನು ಸೂಕ್ಷ್ಮವಾಗಿ ಗಮನಿಸತೊಡಗಿದರು. ಆ ಸಂತ ಪುರುಷನ ಸತ್ಸಮಾಗಮದ ನೆನಪಾಗಿ ಅವರಿಬ್ಬರು ಆಜೀವ ಪರ್ಯಂತ ಸುಸ್ವಾದ ಆಹಾರ ತ್ಯಾಗ ಮಾಡಿಬಿಟ್ಟರು. ಸತ್ಸಂಗದಿಂದ ಆಗದ ಲಾಭ ಯಾವುದು? ಶ್ರೀ ಪಹಾಡೆ ಕಾಂಗ್ರೆಸ್‌ನ ಕಟ್ಟಾ ಅನುಯಾಯಿ. ಅದು ೧೯೩೦ರ ಕಾಲ. ಗಾಂಧೀಜಿಯವರ ನೇತೃತ್ವದ ಅಹಿಂಸಾತ್ಮಕ ಚಳುವಳಿಯಿಂದ ಆಂಗ್ಲ ಸರ್ಕಾರ ಕಂಪಿಸುತ್ತಿತ್ತು. ತ್ರಿರಂಗಿ ಧ್ವಜ ಹಿಡಿದ ಶ್ರೀ ಪಹಾಡೆಯವರು ದೇಶಕ್ಕಾಗಿ ಪ್ರಾಣ ಕೊಡಲೂ ಸಿದ್ಧರಿದ್ದರು. ಯಾವಾಗ ಈ ಪಹಾಡೆಯವರು ಈ ರತ್ನತ್ರಯ



ಧ್ವಜಧಾರೀ ಮುನಿಯ ಸಮೀಪಕ್ಕೆ ಬಂದರೋ ಆಗ ಅವರ ಹೃದಯ ಹೀಗೆ ಹೇಳಿತು. ''ನೀನು ಯಾವ ಜಡಧ್ವಜದ ಹಿಂದೆ ನಿನ್ನ ಪ್ರಾಣ ಕೊಡಲು ಓಡುತ್ತಿದ್ದೆಯೋ ಅದನ್ನು ಬಿಟ್ಟು ನಿನ್ನ ನಿಜವಾದ ಕಲ್ಯಾಣಕ್ಕಾಗಿ ರತ್ನತ್ರಯ ಧ್ವಜ ಹಿಡಿದು ಓಡು. ಆ ಮುನಿನಾಥನಿಗೆ ಶರಣಾಗು ಈ ರತ್ನತ್ರಯ ಧ್ವಜ ವಿಶ್ವವಿಜಯಿ. ರತ್ನತ್ರಯ ಧಾರಣೆ ಮಾಡುವ ಪ್ರಾಣಿ ತ್ರಿಲೋಕ ವಿಜಯಿಯಾಗುತ್ತದೆ. ಅಂತಹ ರತ್ನತ್ರಯ ಧ್ವಜದ ಪ್ರಾಪ್ತಿಗಾಗಿ ಜೀವದೊಡನೆ ಆಟವಾಡುವುದು ಹಿತಕಾರಿಯಾದೀತು''

ಪೂಜ್ಯಶ್ರೀಯವರ ದರ್ಶನದಿಂದ ಅವರ ಹೃದಯ ತುಂಬಿತು. ಇಂತಹ ಮಹಾಪುರುಷನ ಸಾನಿಧ್ಯ ಬಿಟ್ಟು ಇನ್ನೆಲ್ಲೋ ವ್ಯರ್ಥವಾಗಿ ಹೋರಾಡುತ್ತಿದ್ದೆವಲ್ಲ ಎಂದು ಬೇಗುದಿಗೊಂಡರು. ಭಾವೀ ಮುನಿಗಳಿಬ್ಬರು ಬಗವಾನ್ ಬಾಹುಬಲಿಯ ದರ್ಶನಕ್ಕಾಗಿ ಹೊರಟರು. ರಾಗ ಮತ್ತು ದ್ವೇಷಗಳ ಅನಾದಿ ಬಂಧವನ್ನು ನಿಷ್ಕರುಣೆಯಿಂದ ಕತ್ತರಿಸಿ ಭವ ಸಿಂಧುವನ್ನು ದಾಟುವ ದಾರಿಯನ್ನು ಕರುಣಿಸು ಎಂದು ಭಗವಂತನಲ್ಲಿ ಮೊರೆಯಿಟ್ಟರು.

ಶ್ರವಣಬೆಳಗೊಳದ ಯಾತ್ರೆಯಿಂದ ಮತ್ತೆ ಅವರು ನೇರವಾಗಿ ಪೂಜ್ಯಶ್ರೀಯವರ ದರ್ಶನಕ್ಕೆ ಧಾವಿಸಿದರು. ಅವರ ವೀತರಾಗ ಮುಖಮುದ್ರೆ ಸಂಪೂರ್ಣವಾಗಿ ಸಮ್ಮೋಹನಗೊಳಿಸಿತ್ತು. ಅಷ್ಟರಲ್ಲಿ ಕೊಣ್ಣೂರಿನ ಗುಹೆಯಲ್ಲಿ ಘಟಿಸಿದ ಸರ್ಪ ಬಾಧೆಯ ಮಾತು ಕಿವಿಗೆ ಬಿದ್ದು, ಅವರ ಮನಸ್ಸು ಇನ್ನಷ್ಟು ಭಕ್ತಿಯಿಂದ ಹಣ್ಣಾಗಿ ಹೋಯಿತು. ಅವರಿಬ್ಬರೂ ಭವಾಂಬುವನ್ನು ದಾಟಿಸಲು ಹಡಗಿನಂತಿರುವ ಶ್ರೀ ಜೈನೇಂದ್ರ ದೀಕ್ಷೆಯನ್ನು ಕರುಣಿಸಲು ಶ್ರೀ ಚರಣಗಳಲ್ಲಿ ಪ್ರಾರ್ಥಿಸಿದರು. ಪೂಜ್ಯಶ್ರೀಯವರು ಮಹಾ ಕರುಣೆಯಿಂದ ಅವರ ಪ್ರಾರ್ಥನೆ ಮನ್ನಿಸಿ ದೀಕ್ಷೆಯಿತ್ತರು. ಕುಶಾಲ್‌ಚಂದ್ ಪಹಾಡೆ ಕ್ಷು. ಚಂದ್ರಸಾಗರರಾಗಿಯೂ, ಹೀರಾಲಾಲ್ ಕ್ಷು. ವೀರಸಾಗರರಾಗಿಯೂ ನಾಮಾಂಕಿತರಾದರು. ದರ್ಶನಕ್ಕಾಗಿ ಬಂದವರು ದೀಕ್ಷೆಗೊಂಡು ಧನ್ಯರಾಗಿ ಹೋದರು. ಪುಣ್ಯಾತ್ಮರ ಕಥೆಯೇ ಇಂತಹದ್ದು. ಒಂದು ದೀಪ ನೂರಾರು ದೀಪಗಳನ್ನು ಬೆಳಗಿಸಿ ಜಗತ್ತಿಗೇ ಬೆಳಕಾಗಿ ಹೋಗುವಂತೆ ಪೂಜ್ಯಶ್ರೀಯವರು ಜಗಜ್ಯೋತಿಯಾಗಿ ಬೆಳಗಲಾರಂಭಿಸಿದರು.

ಅನಂತರ ಅವರ ವಿಹಾರ ಸಮಡೊಲಿಯತ್ತ ನಡೆಯಿತು. ಅಲ್ಲಿ ಅವರ ಚಾತುರ್ಮಾಸ ನಡೆಯಿತು. ದೂರದೂರದ ಜನ ಅಲ್ಲಿಗೆ ಬಂದು ದರ್ಶನ ಪಡೆದು ಹೋಗುತ್ತಿದ್ದರು. ಸಯಡೊಳಿಯ ಪಾಟೀಲ ಅವರ ಬಹುದೊಡ್ಡ ಭಕ್ತ, ಆ ನಾಲ್ಕು ತಿಂಗಳು ಬಂದು ಹೋಗುವವರಿಂದ ಬಹು ದೊಡ್ಡ ಜಾತ್ರೆಯೇ ಸೇರಿದಂತೆ ಆಗಿತ್ತು.

## ದಕ್ಷಿಣದಲ್ಲಿ ಸಂಯಮಾನುಕೂಲಸ್ಥಿತಿ

ಬೆಳಗಾಂ, ಕೊಲ್ಹಾಪುರ, ಸಾಂಗ್ಲಿಯಾದಿ ಸಮೀಪದ ನಿಕಟವರ್ತಿ ಗ್ರಾಮಗಳಲ್ಲಿ ಜೈನರ ಸಂಖ್ಯೆ ಅತ್ಯಧಿಕವಿದೆ. ಸಾವಿರಾರು ಮನೆಗಳ ಗ್ರಾಮದಲ್ಲಿ ಸಾಮಾನ್ಯವಾಗಿ ಮುಕ್ಕಾಲುಭಾಗ ಜೈನರೇ ಇರುವ ಊರುಗಳಿವೆ. ಇಂತಹ ಕಡೆ ಮುನಿವೃತ್ತಿ ವ್ಯತೀತಗೊಳಿಸಲು ಸರ್ವಾನುಕೂಲಗಳಿರುತ್ತವೆ. ಇಲ್ಲಿ ಹೆಚ್ಚಿನವರು ಕೃಷಿಕರು. ಅವರು ಶುದ್ಧಾಹಾರ ಕೊಡಬಲ್ಲರು. ಇಲ್ಲಿ ಶುದ್ಧವಾದ ಹಾಲು, ನೀರು, ತುಪ್ಪ ಇತ್ಯಾದಿಗಳು ಅನಾಯಾಸ ದೊರೆಯುತ್ತವೆ. ವಾತಾವರಣದ ಕಲುಷತೆಯಿಂದ ಅನ್ಯ ಪ್ರಾಂತ್ಯಗಳಲ್ಲಿ ಉಂಟಾಗಿರುವ ಆಹಾರ ದಾನದ ಕಠಿಣತೆ ಇಲ್ಲಿ ಕಂಡು ಬರುವುದಿಲ್ಲ. ಇಲ್ಲಿ ಬೇಸಗೆಯ ಉಗ್ರತೆ ಮತ್ತು ಛಳಿಗಾಲದ ತೀಕ್ಷ್ಣತೆ ಬೇರೆ ಪ್ರಾಂತ್ಯಗಳಂತೆ ಅಸಹ್ಯವಾಗಿ ಕಂಡು ಬರುವುದಿಲ್ಲ. ಈ ಸ್ಥಿತಿಯಲ್ಲಿ ಈ ಭೂಮಿ ಸಂಸಾರ ಶರೀರ ಭೋಗಗಳಲ್ಲಿ ವಿರಕ್ತರಾದ ಧರ್ಮಾತ್ಮ ಜೀವಕ್ಕೆ ಮುನಿಧರ್ಮ ಧಾರಣೆ ಮಾಡಲು ಸಹಜ ಪ್ರೇರಣೆ ಕೊಡುವಂತಹದ್ದಿದೆ.

## ಶ್ರೀ ವೀರಸಾಗರ ಮತ್ತು ನೇಮಿಸಾಗರರ ಮುನಿದೀಕ್ಷಾ

ಈ ಸಮಡೊಲಿ ಗ್ರಾಮದಲ್ಲಿ ವೀರಸಾಗರರಿಗೆ ಮುನಿ ದೀಕ್ಷೆ ಕೊಡಲಾಯಿತು. ಐಲಕ ನೇಮಣ್ಣ ಮುನಿ ದೀಕ್ಷೆ ಪಡೆದರು. ಅವರು ಅದೇ ಹೆಸರಿನಿಂದ ಮುನಿ ಶ್ರೀನೇಮಿಸಾಗರರಾದರು. ಅಲ್ಲಿ ನಾಲ್ಕು ತಿಂಗಳು ಧರ್ಮಾಮೃತ ವರ್ಷಾಧಾರೆ ಅಖಂಡವಾಗಿ ಹರಿಯಿತು. ಆಕಾಶ ಮಂಡಲದಿಂದ ಸುರಿದ ವರ್ಷಾಧಾರೆ ಭೂದೇವಿಯನ್ನು ವನತರುಗಳ ಅಂಕುರದಿಂದ ಹಸಿರುಡುಗೆ ತೊಡಿಸಿ ಶೃಂಗರಿಸಿದರೆ, ಧರ್ಮಾಮೃತ ವರ್ಷಾಧಾರೆ ಧರ್ಮಾತ್ಮ ಜೀವಗಳ ಮನಸ್ಸನ್ನು ಮುಕ್ತಿವನಿತೆಯ ಮದುವೆಗಾಗಿ ಶೃಂಗರಿಸಿತು. ಧರ್ಮಾಮೃತ ವರ್ಷಾಧಾರೆಯಲ್ಲಿ ಮಿಂದ ದೊಡ್ಡ ರಾಜ ಮಹಾರಾಜ ಸಾಮ್ರಾಜ್ಯ ಚಕ್ರವರ್ತಿಗಳೂ ಕೊಚ್ಚೆಯ ರೊಚ್ಚೆಯಂತಿರುವ ಭೋಗವಿಲಾಸಗಳನ್ನು ತಟಕ್ಕನೆ ತೊರೆದು ಆತ್ಮ ವಿಲಾಸದಲ್ಲಿ ಮಿಂದೇಳಲು ದೀಕ್ಷೆ ಗೊಳ್ಳುತ್ತಿದ್ದರು. ಅನಾದಿ ಕಾಲದಿಂದಲೂ ಭವ ಭವಗಳಲ್ಲೂ ಭೋಗ ವಿಲಾಸಗಳನ್ನು ಅಂಗುಲ ಅಂಗುಲವಾಗಿ ನೆಕ್ಕಿ ನೋಡಿರುವ ಜೀವಕ್ಕೆ ಸಿಕ್ಕಿರುವುದೇನು? ಗುಲಾಬಿ ಹೂವಿಗೆ ಕೈ ಇಕ್ಕಲು ಹೋಗಿ ಅದರ ಪಕ್ಕದಲ್ಲೇ ಇರುವ ಮುಳ್ಳಿನಿಂದ ಚುಚಿಕಿಸಿ ನೋವುಂಡಂತೆ ಇಂದ್ರಿಯ ಭೋಗವಿಲಾಸ. ಬಾಹ್ಯಕ್ಕೆ ಅವು ನೋಡಲು ರಮ್ಯವಾಗಿಯೇ ಕಾಣುತ್ತಿದ್ದರೂ, ಒಳಗೊಳಗೆ ರುದ್ರಭೀಷಣವಾಗಿದ್ದು ಜೀವಿಯನ್ನು ಸಂಸಾರದ ಆಳಕ್ಕೆ ತಳ್ಳಿಬಿಡುತ್ತವೆ. ಹಾಗಿಲ್ಲದಿದ್ದರೆ ಚಕ್ರವರ್ತಿಯಾದಿ ಮಹಾಪುರುಷರೇಕೆ ವಿಶಾಲ ರಾಜ್ಯ ಭೋಗಗಳನ್ನು ತೊರೆದು ದೀಕ್ಷೆಗೊಳ್ಳುತ್ತಿದ್ದರು?